(SRI T. TARE GOWDA)

(*g*) whether the public and an M. L. A. brought to the notice of the Government that a new building of the dispensary and the quarters for the Doctor and other staff members of the Dispensary was absolutely necessary ;

(*h*) if so, whether plans and estimates have been prepared by the Executive Engineer, Madhugiri for this purpose ?

SRI H. SIDDAVEERAPPA (Minister for Health).—

(*a*) From 9-12-1960.

(*b*) Possession of the Building donated has not yet been taken by the Department.

(*c*) From 9-12-1960.

(*d*) No.

(*e*) The District Health and Family Planning Officer, Tumkur has reported to the Executive Engineer, Madhugiri about the bad condition of the present building. The Executive Engineer has opined that undertaking of any repairs of the present building is a mere waste of funds and suggested construction of a new dispensary building as per approved type design. As the dispensary building was not fit for running the dispensary and collapsed on 15-5-1972, the dispensary has been shifted to the village panchayat hall at Tavarekere.

(*f*) This was temporarily shifted to the village panchayat hall as no other building was available ;

(*g*) and (*h*) Yes. Plans and Estimates have been called for from the Public Work Department- The Plans and Estimates will be sanctioned only after the Taluk Development Board passes the resolution to meet 50 per cent of the expenditure thereof.

CALLING ATTENTION TO A MATTER OF URGENT PUBLIC IMPORTANCE

re : Non-fixation of Pay of Principals and Lecturers of Junior Colleges

SRI S. M. SHEERNALY CHANDRASEKHAR (Sorab).—I call the attention of the Minister for Education to the situation that has arisen due to non-fixation of pay of principals and lecturers of Junior Colleges.

SRI A. R. BADARINARAYANA (Minister for Education).—Sir I State as follows ;

Each Junior College should have a Principal and such number of Lecturers as may be necessary- In all, 109 Government High Schools

have been converted into Junior Colleges to teach the Two Years Pre-University Education Course. Accordingly, Government have created 109 posts of Principals and 1,110 posts of Lecturers. Orders have been issued in Government Order No. ED 142 TPU 72 dated 6-2-1973, creating 109 posts of Principals and 1,110 posts of Lecturers. The pay scales are as under :

1 Principals ... Rs. 40 -30-640-EB-40-800-50-950.

2 Lecturers ... Rs. 300-25-550-EB-30-700.

It will necessarily to take some more time to fix the pay of the officials holding these posts as the orders have been issued creating the posts on 6-2-1973.

Sri S. M. SHEERNALY CHANDRASEKHAR.—Will the hon Minister enlighten me as to when the Junior Colleges were started is the State ?

Sri A. R. BADARINARAYANA.—The Junior Colleges were started during the current academic year.

Sri S. M. SHEERNALY CHANDRASEKHAR.—Do you mean to say that the creation of the posts of Principals and Lecturers takes effect from last year ?

Sri A. R. BADARINARAYANA.—The posts were not sanctioned ae we had to obtain the concurrence of the Finance Department but that did not affect the working of the classes. According to the G. Os these posts have been sanctioned. We will have to obtain the concurrence of the Finance Department for making payment and that taken a little more time.

Sri S. M. SHEERNALY CHANDRASEKHAR.—Will you pleasc tell me how much time do you require to obtain the financial concurrence ?

Sri A. R. BADARINARAYANA. —It will take about three weeks.

Sri S. M. SHEERNALY CHANDRASEKHAR.—Don't you think that it will reflect upon the Government because the Principals and Lecturers are working without salary ?

Sri A. R. BADARINARAYANA—.It is a matter of opinion.

Statement of the Minister for Public Works and Electricity

re : **Rejection of Pubiic Service Commission list of Junior Engineers by the Government**

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ, ಈಚೆಗೆ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ಜ್ಯೂನಿಯರ್ ಇಂಜನೀಯರುಗಳ ಸೆಲೆಕ್ಷನ್ ಮಾಡಿರುವುದನ್ನು ಸರಕಾರ ರದ್ದು ಮಾಡಿರುವುದರ ಬಗ್ಗೆ ಸರಕಾರದ ಕೇಳಿಕೆ ಕೊಡಬೇಕೆಂದು ಕೇಳುತ್ತೇನೆ.

Sri H. M. CHANABASAPPA (Minister for Public Works and Electricity).—Madam Speaker, day before yesterday on the constitutional propriety of the proposed action of Government in rejecting the selection of Junior Engineers made by the Public Service Commssion was questioned. Hon. Member Sri Kagodu Thimmappa and the Leader of the Opposition desired that a statement in this behalf may be made on the propriety and also of the Government's proposed action to reject the selection made.

Art. 320 (3) reads like this:

> " Art- 320 (3) The Union Public Service Commssission or the State Public Service Commission, as the case may be, shall be consulted.
>
> (*a*) on all matters relating to methods of recruitment to civil services and for civil posts ;
>
> (*b*) on the principles to be followed in making apointments to civil services and posts and in making promotions and transfers from one service to another and on the suitabilty of candidates for such appointments, promotions or transfers ; .....etc ".

This is what is stated in Article 320 (3). The functions of the Public Service Commission as laid down in article 320 of the Constitution are only advisory and the Commission does not have mandatory powers. The consultation which has been made necessary under this article means only taking advice and does not mean that the authority is bound to follow it. In view of this position, it cannot be said that after the Commission has been consulted and their views obtained that a particular person is fit to be appointed for a particular post does not open for the Government to depart from the view. There is nothing in the wording of the article 320 to give rise to that inference. In fact, the word 'consult' only means that a certain statutory preliminary ought to be performed before an Act is done. Courts have held that failure even to consult the Commission where it is prescribed would not make an appointment without such consultation void. Even according to Rule 8 (2) of the Mysore State Civil Services (Direct recruitment by selection) Rules, 1967 under which the list of candidates selected for appointment to the posts of Junior Engineers has been prepared by the Public Service Commission, the inclusion of the name of a candidate in the list published by the Commission, shall not confer any right of appointment.

Hence, no candidate included in the list of candidates published by the P. S. C. has any legal right to claim that he must be appointed as a Junior Engineer by virtue of his selection by the PSC.

In the list of candidates selected by the PSC for appointment as Junior Engineers there are 747 candidates and the break-up for civil and mechanical graduates is as follows :

Mechanical graduates	318.
Civil graduates	429.

Taking into consideration the requirements of the PWD only the following numbers are required :

Civil Engineers	672.
Mechanical Eugineers	75.

This is perhaps wanted by the Hon. Member. If he wants any further clarification, I am prepared to do so.

10-00 A.M.

ಶ್ರೀ ಕಾಗೋಡು ತಿಮ್ಮಪ್ಪ.—ತಮಗೆ ಸಿವಿಲ್ ಇಂಜಿನಿಯರ್ಸ್ ಮತ್ತು ಮೆಕ್ಯಾನಿಕಲ್ ಇಂಜಿನಿಯರ್ಸ್ ಎಷ್ಟೆಷ್ಟು ಜನರು ಬೇಕಾಗಿತ್ತು ಎಂಬುದನ್ನು ಪೂರ್ವಭಾವಿಯಾಗಿಯೇ ತಾವು ಪಿ. ಎಸ್. ಸಿ. ಗೆ ತಿಳಿಸಿರಲಿಲ್ಲವೇ ? ಆ ರೀತಿ ತಿಳಿಸಿದ್ದರೆ ಅವರು ತಮ್ಮ ಒಂದು ಇನ್ಸ್ಟ್ರಕ್ಷನ್ ಪೀರಿ ಆಯ್ಕೆ ಮಾಡುವ ಪ್ರಸಂಗ ಏನಿತ್ತು ? ಮೇರಾಗಿ ಈಗಾಗಲೇ ಸಾವಿರಕ್ಕೂ ಹೆಚ್ಚು ಜನ ಇಂಜಿನಿಯರ್‌ಗಳು ಪಿ. ಎಸ್. ಸಿ. ಮುಂದೆ ಹಾಜರಾಗಿ ಇಂಟರ್‌ವ್ಯೂ ಆಗಿದೆ. ನಾನಾ ರೀತಿಯಲ್ಲಿ ಅವರಿಗೆ ಹಣ ಖರ್ಚಾಗಿದೆ. ನೂರು ರೂಪಾಯಿಗಳಿಂದ ಹತ್ತು ಸಾವಿರ ರೂಪಾಯಿಗಳವರೆಗೆ ಖರ್ಚು ಮಾಡಿದ್ದೇವೆಂದು ಕೆಲವರು ಹೇಳಿಕೊಳ್ಳುತ್ತಿದ್ದಾರೆ. ಇಷ್ಟೊಂದು ಹಣವನ್ನು ನಿರಪರಾಧಿಗಳಿಂದ ಖರ್ಚು ಮಾಡಿಸಿ ಈಗ ಅವರ ಆಯ್ಕೆಯನ್ನು ರದ್ದು ಮಾಡಿದ್ದರಿಂದ ಸ್ವಾರ್ವಜನಿಕರಲ್ಲಿ ತಮ್ಮ ಸರ್ಕಾರದ ಬಗ್ಗೆ ಕೆಟ್ಟ ಅಭಿಪ್ರಾಯ ಬಂದಿದೆ. ಇಂಜಿನಿಯರ್ಸ್‌ನ್ನು ಆಯ್ಕೆ ಮಾಡಬೇಕೆಂದು ತಾವು ಪಿ. ಎಸ್. ಸಿ. ಗೆ ಮೊದಲು ತಿಳಿಸಿದ ಮೇಲೆ ಮೊದಲೇ ಸ್ಪಷ್ಟವಾದ ನಿದರ್ಶನ ಮಾಡಿರಲಿಲ್ಲವೇ ? ಹಿಂದೆಯೂ ಈ ರೀತಿ ನಡೆದಿವೆ, ಕೆಲವು ಕಾರಣಗಳಿಂದ ಅವರ ಆಯ್ಕೆಯನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ತಾವು ಹೇಳಬಹುದು. ಆದರೆ ಕೆಲವರು ತಮ್ಮ ಆಜ್ಞೆಯ ವಿರುದ್ಧ ಕೋರ್ಟಿಗೆ ಹೋದರೆ ಆಗ ಯಾವ ರೀತಿ ಪ್ರತಿಪ್ರತಿವಾದನೆಯನ್ನು ರಾಜ್ಯಾಂಗಬದ್ಧವಾಗಿ ಮಾಡಿಕೊಳ್ಳುತ್ತೀರೆ ಬಾದನ್ನು ತಿಳಿಸಬೇಕು. ರಾಜ್ಯಾಂಗದಲ್ಲಿ ಹೇಳಿರುವಂತೆ ತಾವು ಇಂಜಿನಿಯರ್‌ಗಳನ್ನು ಆಯ್ಕೆ ಮಾಡಬೇಕಾದರೆ ಪಿ. ಎಸ್. ಸಿ. ಅವರನ್ನು ಕನ್ಸಲ್ಟ್ ಮಾಡಲೇ ಬೇಕಾಗುತ್ತದೆ. It is obligatory f nction of the Government to accept. When once it is consulted and its opinion got, the Government cannot go back.

ಶ್ರೀ ಪುಟ್ಟಣ್ಣ ಎ. ಚನ್ನಬಸಪ್ಪ.—ಫೋದಲು ಪಿ. ಎಸ್. ಸಿ. ಅವರಿಗೆ ನಿರ್ದೇಶನ ಕೊಟ್ಟಿದ್ದು ಚೀಫ್-ಇಂಜಿನಿಯರ್ ಅವರು. ಮೆಕ್ಯಾನಿಕಲ್ ಮತ್ತು ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಡಿಗ್ರಿ ಆದವರು ಒಟ್ಟು ಇಷ್ಟು ಜನ ಬೇಕಾಗಿದೆ ಎಂದು ಅವರಿಗೆ ಬರೆಯುವಾಗಿತ್ತು. ಅದು ಪ್ರೊಸೆಸ್ ಆಗುತ್ತಿರುವಾಗಲೇ, ಸರ್ಕಾರದವರು ನಮಗೆ ಸಿವಿಲ್-ಇಂಜಿನಿಯರಿಂಗ್ ಆದವರು ಎಷ್ಟು ಜನರು ಬೇಕು, ಮೆಕ್ಯಾನಿಕಲ್ ಇಂಜಿನಿಯರಿಂಗ್ ಆದವರು ಎಷ್ಟು ಜನರು ಬೇಕು ಎಂಬುದನ್ನು ಪಿ. ಎಸ್. ಸಿ. ಗೆ ತಿಳಿಸಲಾಯಿತು. ಆದರಂತೆ ಸರ್ಕಾರದ ಅವಶ್ಯಕತೆಗಳನ್ನು ಪಿ. ಎಸ್. ಸಿ. ಅವರು ಪರಿಗಣಿಸಿ ಯೋಗ್ಯ ಜನರನ್ನು ಶಿಫಾರ್ಸ್ ಮಾಡುವುದಕ್ಕೆ ಅವರಿಗೆ ಅಧಿಕಾರವಿತ್ತು. ಆದರೆ ಅವರು ಆರೀತಿ ಮಾಡಲಿಲ್ಲ. ಈಗ ಪಿ. ಎಸ್. ಸಿ. ಅವರು ಮಾಡಿರುವ ಶಿಫಾರಸ್ಸಿನ ಮೇಲೆ ಅಂಗೀಕಾರ ಮಾಡಿ ತೆಗೆದುಕೊಂಡರೆ ನಮ್ಮ ಈಗಿನ ಕೆಲಸಕ್ಕೆ ಬೇಕಾದ ಯೋಗ್ಯ ಜನರು ಸಿಕ್ಕುವುದಿಲ್ಲ. ಏಕೆಂದರೆ ಮೆಕ್ಯಾನಿಕಲ್ ಇಂಜಿನಿಯರ್‌ಗಳು ಹೆಚ್ಚು ನಂಬರ್‌ಗಳನ್ನು ಪರೀಕ್ಷೆಗಳಲ್ಲಿ ತೆಗೆದುಕೊಂಡಿರುತ್ತಾರೆ ಆದ್ದರಿಂದ ಅವರು ಆಯ್ಕೆಯಲ್ಲಿ ಮೇಲಿರುತ್ತಾರೆ. ಆದ್ದರಿಂದ ಅವರನ್ನೇ ತೆಗೆದುಕೊಳ್ಳಬೇಕಾಗುತ್ತದೆ P. W. D. is primarily and mainly a Civil works organisation. Investigation, making designs, preparation of estimates for construction of major irrigation projects and construction of projects ಈ ಕೆಲಸಗಳಿಗೆ ಮೆಕ್ಯಾನಿಕಲ್ ಇಂಜಿನಿಯರ್‌ಗಳನ್ನು ನೇಮಕ ಮಾಡಿದರೆ ನಾಳೆ ಪರಿಸ್ಥಿತಿ

(ಹೆಚ್. ಎಂ. ಚನ್ನಬಸಪ್ಪ)

ಏನಾಗುತ್ತದೆ ಎಂಬುದನ್ನು ತಾವು ನೋಡಬೇಕು. ಇದನ್ನೆಲ್ಲಾ ಸರ್ಕಾರ ಆಲೋಚನೆ ಮಾಡಿ, ಪಿ. ಎಸ್. ಸಿ. ಅವರು ಏನು ಸಲಹೆ ಮಾಡಿದ್ದಾರೆ ಅದನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ತೀರ್ಮಾನ ಮಾಡಲಾಯಿತು. ಈಗಿನ ಜರೂರು ಅವಶ್ಯಕತೆಗಳಿಗನುಗುಣವಾಗಿ 9 ತಿಂಗಳ ಕಾಲ ಸ್ಥಳೀಯ ಅಭ್ಯರ್ಥಿಗಳನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೇವೆ. ಮತ್ತು ಪಿ. ಎಸ್. ಸಿ. ಮೂಲಕ ಈ ಇಂಜಿನಿಯರ್‌ಗಳನ್ನು ಆಯ್ಕೆ ಮಾಡಬೇಕೆಂಬ ನಿಯಮವೇನಿದೆ, ಅದನ್ನು ತೆಗೆದು, ಇಲಾಖೆಯ ಮೂಲಕ ಚೀಫ್-ಇಂಜಿನಿಯರ್‌ಗಳಿಂದ ಕೂಡಿದ ಒಂದು ಕಮಿಟಿಯನ್ನು ಮಾಡಿ, ಆ ಕಮಿಟಿಯ ಮೂಲಕ ಜರೂರಾಗಿ ರೆಕ್ರೂಟ್‌ಮೆಂಟ್ ಮಾಡಬೇಕೆಂದು ಯೋಚನೆ ಮಾಡಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಪ್ರಾರಂಭದಲ್ಲಿ ಪಿ. ಎಸ್. ಸಿ. ಅವರಿಗೆ ಚೀಫ್-ಇಂಜಿನಿಯರ್ ಅವರು ತಿಳಿಸಿದರು ಎಂದು ಹೇಳುತ್ತೀರಿ. ಆ ರೀತಿ ಅವರು ತಿಳಿಸುವಾಗ ಸರ್ಕಾರದವರು ಕೊಡುವ ಮಾಹಿತಿಯ ಆಧಾರದ ಮೇರೆ ತಿಳಿಸಿದರೋ ಅಥವಾ ನೇರವಾಗಿ ತಿಳಿಸಿದರೋ ?

Sri H. M. CHANNABASAPPA.—I have said it. You did not follow. The Chief Engineer communicated that we want so many Junior Engineers. ನಂತರ ಸರ್ಕಾರದವರು ಮೆಕ್ಯಾನಿಕಲ್ ಇಂಜಿನಿಯರುಗಳು ಬಹಳ ಜನ ಬೇಕಾಗುವುದಿಲ್ಲವೆಂದು ಮನಗಂಡಮೇಲೆ, ಸಿವಿಲ್ ಇಂಜಿನಿಯರ್‌ಗಳು ಎಷ್ಟು ಜನ ಬೇಕಾಗಬಹುದು, ಮೆಕ್ಯಾನಿಕಲ್ ಇಂಜನಿಯರ್‌ಗಳು ಎಷ್ಟು ಜನ ಬೇಕಾಗಬಹುದು ಎಂದು ತೀರ್ಮಾನಮಾಡಿ ಅದನ್ನು ಪಿ. ಎಸ್. ಸಿ. ಅವರಿಗೆ ತಿಳಿಸಲಾಯಿತು. ಅದರಂತೆ ಅವರು ಆಯ್ಕೆ ಮಾಡಬಹುದಾಗಿತ್ತು. ಆದರೆ ಅವರು ಮಾಡಲಿಲ್ಲ, ಈ ಕಾರಣದಿಂದ ಅನಿವಾರ್ಯವಾಗಿ ಈ ಒಂದು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಸಿವಿಲ್ ಇಂಜಿನಿಯರಿಂಗ್ ಆದವರು ಎಷ್ಟು ಜನರು ಬೇಕಾಗುತ್ತಾರೆ, ಮೆಕ್ಯಾನಿಕಲ್ ಇಂಜಿನಿಯರಿಂಗ್ ಆದವರು ಎಷ್ಟು ಜನರು ಬೇಕಾಗುತ್ತಾರೆಂಬುದನ್ನು, ಚೀಫ್-ಇಂಜಿನಿಯರ್ ಅವರು ಮೊದಲೇ ಏತಕ್ಕೆ ತಿಳಿದುಕೊಂಡು ಪಿ. ಎಸ್. ಸಿ. ಅವರಿಗೆ ತಿಳಿಸಲಿಲ್ಲ? ಈಗ ಇದಕ್ಕೆಲ್ಲಾ ಅವರೇ ಜವಾಬ್ದಾರರಾಗಬೇಕಾಗುತ್ತದೆ. ಮೊದಲೇ ಅವರು ಸರ್ಕಾರದ ಜೊತೆ ವಿಚಾರವಿನಿಮಯ ಮಾಡಿದ್ದರೆ ಇಷ್ಟೊಂದು ಹಣ ಮತ್ತು ಇಷ್ಟೊಂದು ಸಮಯ ಹಾಳಾಗುವುದು ಉಳಿತಾಯವಾಗುತ್ತಿತ್ತು; ಮತ್ತು ಸರ್ಕಾರದವರೇ ಇಷ್ಟರೊಳಗೆ ನೇಮಕ ಮಾಡಿಕೊಂಡು ಅವರು ಕೆಲಸದ ಮೇರೆ ಹೋಗುವುದಕ್ಕೆ ಸಾಧ್ಯವಾಗುತ್ತಿತ್ತು.

Sri H. M. CHANNABASAPPA.—We have also communicated to the Public Service Commission our requirements. You must bear in mind that even before these things were finalised, Government have communicated to the P.S.C.

ಶ್ರೀ ಕಾಗೋಡು ತಿಮ್ಮಪ್ಪ.—ಅವರು ಸರ್ಕಾರದ ಮಾತನ್ನು ಕೇಳದಿದ್ದರೆ ಅವರನ್ನು ಸರ್ಕಾರದವರು ಇಂಪೀಚ್‌ಮೆಂಟ್ ಮಾಡಿದ್ದಾರೆಯೇ ?

Sri H.M. CHANNABASAPPA.—I am placing the facts before the House. It is my duty to place the facts before this House, without changing a full stop or comma. Any suggestion made by the hon. Members is a matter for consideration and action.

ಶ್ರೀ ಎಚ್, ಡಿ. ದೇವೇಗೌಡ.—ಜೂನಿಯರ್ ಇಂಜಿನಿಯರ್ ಅನ್ನು ನೇಮಕ ಮಾಡುವುದನ್ನು ಪಬ್ಲಿಕ್ ಸರ್ವೀಸ್ ಕಮಿಷನ್ನಿನ ಪರ್ವ್ಯೂನಿಂದ ತೆಗೆದು ಹಾಕುವುದು ಒಳ್ಳೆಯದಲ್ಲ. ಈಗಾಗಲೇ ಪೋಲೀಸ್ ಸಬ್‌ಇನ್‌ಸ್ಪೆಕ್ಟರ ನೇಮಕದಲ್ಲಿ ಡಿಪಾರ್ಟ್‌ಮೆಂಟರ್ ಕಮಿಟಿಯವರು ಮಾಡಿದ್ದುದರ ಬಗ್ಗೆ ನಾನಾಕಷ್ಟು ಆರೋಪಣೆಗಳು ಇವೆ. ಆದ್ದರಿಂದ ಜೂನಿಯರ್ ಇಂಜಿನಿಯರ ನೇಮಕವನ್ನು ಪಬ್ಲಿಕ್ ಸರ್ವೀಸ್ ಕಮಿಷನ್ನಿನವರೇ ನೇಮಕ ಮಾಡುವುದನ್ನು ಉಳಿಸಿಕೊಂಡು ಹೋಗುವುದು ಒಳ್ಳೆಯದಲ್ಲವೇ ? ಹಂಗಾಮಿಯಾಗಿ ಬೇಕಾದರೆ ಡಿಪಾರ್ಟ್‌ಮೆಂಟ್‌ನವರೇ ಮಾಡಿಕೊಳ್ಳಲಿ. ಕೇರಳದಲ್ಲಿರುವಂತೆ ಪೋಲೀಸ್ ಸಬ್‌ಇನ್‌ಸ್ಪೆಕ್ಟರ ನೇಮಕವನ್ನು ಪಬ್ಲಿಕ್ ಸರ್ವೀಸ್ ಕಮಿಷನ್ನಿಗೆ ಕೊಡುವುದು ಒಳ್ಳೆಯದು.

Sri H. M. CHANNABASAPPA:—I understand the feelings of the Hon. the Leader of the Opposition. It is only a question of opinion. I quite appreciate it. In your view, the Public Service Commission can handle it in a much better way. It is only a question of holding a balance.

Sri H. D. DEVE GOWDA.—Everybody is not Mr. Channabasappa. Why do you take that blame ?

Sri H. M. CHANNABASAPPA.—I do not want to take any blame on behalf of anybody. I am prepared to take blame on my own behalf, But the question is: we want some technical men to look into the qualifications and capabilities of the of the candidates. The Public Service Commissi n is a body constituted under the Constitution which lays down that Government should consult the commission while making appointments but it is not obligatory for the Government to implement the selections made by the commission, Government are now appointing a Committee; it is not a one-man or two-men Committee. There will be a Committe consisting of a couple of Chief Engineers, Scheduled Castes representatives and also a couple of eminent public administrators, so that all of them might put their heads together and do it expeditiously. The Public Service Commission has such an abundant amount of work that it feels it difficult to attend to this work expeditiously.

Sri H. D. DEVE GOWDA.—For your information, the Public Service Commission has got light work.

Sri H. M. CHANNABASAPPA.—I will examine that aspect also. Government is thinking in this direction also. Whichever body can deliver the goods quickly. efficiently and honestly will be entrusted with this.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ.—ನಮ್ಮಾರು 700 ಜನಗಳನ್ನು ಒಂದು ಡಿಪಾರ್ಟ್‌ಮೆಂಟರ್ ಕಮಿಟಿಯವರು ನೇಮಕ ಮಾಡಿದ್ದಾರೆ ಎಂದು ಹೇಳಿದ್ದಾರೆ. ಈರೀತಿ ಅವರು ನೇಮಕ ಮಾಡಿಕೊಂಡು ಕಾನ್‌ಸ್ಟಿಟ್ಯೂಷನಲ್ ಫ್ರಾಡ್ ನಡೆದಿದೆ. ಆ ತಪ್ಪನ್ನು ತಿರುಗಿ ಮಾಡಬೇಡಿ. ಆ ರೀತಿ ಅವರು 10 ವರ್ಷಗಳಿಂದ 700 ಜನಗಳು ನೇಮಕ ಮಾಡಿಕೊಳ್ಳಬೇಕಾದರೆ ಪಬ್ಲಿಕ್ ಸರ್ವಿಸ್ ಕಮಿಷನ್ ಅಸ್ತಿತ್ವದಲ್ಲಿ ಇದೆಯೇ ಎನ್ನುವ ಪ್ರಶ್ನೆ ಬರುತ್ತದೆ ಆದ್ದರಿಂದ ಯಾವ ದೃಷ್ಟಿಯಿಂದ ಅದನ್ನು ರದ್ದು ಮಾಡಿದ್ದಾರೋ ಗೊತ್ತಿಲ್ಲ. ಪರಿಶಿಷ್ಟ ಜನಾಂಗಕ್ಕೆ 18 ಪರ್ಸೆಂಟ್ ಕೆಲಸವನ್ನು ಕೊಡತಕ್ಕ ವ್ಯವಸ್ಥೆಯನ್ನು ನೋಡಿಕೊಳ್ಳುವುದಕ್ಕಾಗಿ ಕಮಿಟಿಯಲ್ಲಿ ಪರಿಶಿಷ್ಟ ವರ್ಗದ ಪ್ರತಿನಿಧಿಯೊಬ್ಬರನ್ನು ಕಮಿಟಿಯಲ್ಲಿ ಹಾಕಬೇಕು. ಹರಿಜನ ಗಿರಿಜನರಿಗೆ ಕಾನ್‌ಸ್ಟಿಟ್ಯೂಷನ್ ಪ್ರಕಾರ ರಕ್ಷಣೆಯನ್ನು ಕೊಡಬೇಕು ಎಂದು ನಾನು ಹೇಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವ ರೀತಿಯ ಕಾನ್‌ಸ್ಟಿಟ್ಯೂಷನಲ್ ಫ್ರಾಡ್ ನಡೆದಿಲ್ಲ. ಹರಿಜನಗಿರಿಜನರಿಗೆ ಅನ್ಯಾಯ ಮಾಡಬೇಕು ಎಂಬ ಉದ್ದೇಶ ಇಲ್ಲ. ಕಾನ್‌ಸ್ಟಿಟ್ಯೂಷನ್‌ನಲ್ಲಿ ಏನು ಅವಕಾಶ ಇದೆ ಅದಕ್ಕನುಗುಣವಾಗಿ ಅವಕಾಶ ಕೊಡಬೇಕು ಎಂದು ಅತಿ ಶೀಘ್ರದಲ್ಲಿ ಈ ಕೆಲಸವನ್ನು ಮಾಡಬೇಕು ಎನ್ನುವ ಒಂದು ವಿಚಾರ ಇದೆ. ಆದ್ದರಿಂದ ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಿ ಯಾವ ಕಾನ್‌ಸ್ಟಿಟ್ಯೂಷನಲ್ ಫ್ರಾಡ್ ನಡೆದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಇರಾಖೆಯ ಮುಖಾಂತರ ನೇಮಕ ಮಾಡುವ ಸಂದರ್ಭದಲ್ಲಿ ಕೆಲವು ಅನ್ಯಾಯಗಳು ನಡೆದಿವೆ. ನಮಗೆ ಸಿಕ್ಕಬೇಕಾದಂಥಹ ಸ್ಥಾನ ಸಿಕ್ಕಲಿಲ್ಲ. ಮುಂದೆ ಈ ತರಹ ನಡೆಯಬಾರದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದಕ್ಕೆ ಅವಕಾಶ ಮಾಡುವುದಿಲ್ಲ ಎಂದು ಹೇಳಿದವೇಲೆ ಈ ಪ್ರಶ್ನೆ ಉದ್ಭವವಾಗುವುದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಈಗ ಹರಿಜನ ಗಿರಿಜನರಿಗೆ 18 ಪರ್ಸೆಂಟ್ ಕೆಲಸವನ್ನು ಕೊಡ ಬೇಕೆಂದು ಇದೆ. ಈ ಹರಿಜನಗಿರಿಜನರಲ್ಲಿ ಮೆರಿಟ್‌ಡ್‌ಕ್ಯಾಂಡಿಡೇಟ್ಸ್ ಹೆಚ್ಚು ಜನ ಇದ್ದರೆ ಅವರಿಗೆ ಕೆಲಸವನ್ನು ಕೊಡಬಾರದು ಎಂದು ನಿಯಮವೇನಾದರೂ ಇದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ಬಹಳ ಸಿಂಪಲ್ ಕೊಶ್ಚನ್ ಇದನ್ನು ಕಾಂಪ್ಲೆಕ್ಸ್ ಮಾಡಿಕೊಂಡು ಹೋದರೆ ಏನು ಮಾಡುವುದು ? 18 ಅಲ್ಲ 9 ಪರ್ಸೆಂಟ್ ಆಗಲಿ ಯೋಗ್ಯ ಜನಗಳು ಸಿಕ್ಕಿದರೆ ಬೇಡ ಎಂದು ಯಾರು ಹೇಳುತ್ತಾರೆ?

ಶ್ರೀ ಎಂ. ಬಿ. ರಾಮಸ್ವಾಮಿ.—ಈಗ ಹರಿಜನಗಿರಿಜನರಿಗೆ 18 ಪರ್ಸೆಂಟ್ ಅಪಾಯಿಂಟ್ ಮೆಂಟ್‌ಗಳನ್ನು ಸರ್ಕಾರದವರು ಕೊಡುತ್ತಿದ್ದಾರೆ. ಈ ಪ್ಯೆಕಿ ಕೆಲವರು ಮೆರಿಟ್‌ನಲ್ಲಿ ಬಂದರೆ ಅದನ್ನು ಈ 18 ಪರ್ಸೆಂಟ್‌ನಲ್ಲಿ ಕಡಿದು ಹಾಕುತ್ತಾರೆ ಆದ್ದರಿಂದ ತಾವು 18 ಪರ್ಸೆಂಟ್ ಕೊಟ್ಟು ಮೆರಿಟ್‌ನಲ್ಲಿ ಎಷ್ಟು ಜನ ಬರುತ್ತಾರೆಯೋ ಅವರಿಗೆ ಜನರಲ್ ಪೂಲ್‌ನಲ್ಲಿ ಕೊಡಿ ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರಿಗೆ 18 ಪರ್ಸೆಂಟ್ ಕೊಡಬೇಕು. ಆದರೆ ಮೆರಿಟ್ ಇಲ್ಲದೆ ಇರುವವರಿಗೂ ಕೊಡಬೇಕು ಎಂದು ಕಾನ್‌ಸ್ಟಿಟ್ಯೂಷನ್‌ನಲ್ಲಿ ಎಲ್ಲೂ ಹೇಳಿಲ್ಲ. 18 ಪರ್ಸೆಂಟ್ ಮಿನಿಮಮ್ ಅಷ್ಟಾದರೂ ಕೊಡಬೇಕು ಎನ್ನತಕ್ಕಂಥಾ ರಕ್ಷಣೆಯನ್ನು ಕೊಟ್ಟಿದೆ. ಸಾಕಷ್ಟು ಮೆರಿಟೆಡ್ ಜನಗಳು ಬಂದರೆ ತೆಗೆದುಕೊಳ್ಳಬಹುದು ಎನ್ನುವ ಅರ್ಥ ಬರುತ್ತದೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಈಗ ಹರಿಜನಗಿರಿಜನಗಳ ಕ್ಯಾಂಡಿಟ್‌ಗಳಿಗೆ 18 ಪರ್ಸೆಂಟ್ ಅಪಾಯಿಂಟ್‌ಮೆಂಟ್ ಕೊಡಬೇಕೆಂದು ಕಾನೂನು ಇದೆ. ಆದ್ದರಿಂದ ಹರಿಜನಗಿರಿಜನ ಕ್ಯಾಂಡಿಡೇಟ್‌ಗಳು 80-90 ಅಂಕಗಳನ್ನು ತೆಗೆದುಕೊಂಡಿದ್ದರೆ ಅಂಥವರಿಗೆ ಜನರಲ್ ಪೂಲ್‌ನಲ್ಲಿ ಕೆಲಸ ಗಳನ್ನು ಏತಕ್ಕೆ ಕೊಡಬಾರದು ?

SRI H. M. CHANNABASAPPA,—Who refuses that ? If a man is efficient, he will have a claim in the general pool also. When I am on my legs, if the hon; Member goes on interfering, how am I to answer ? This is rather unfair to me. I am making a statement which is crystal clear in meaning. We will give protection that has been guaranteed by the Constitution and as hon. member Sri Jaya Prakash Narayan or somebody else suggested, when more peopleare coming fourth for the selection on grounds of merit, we shall be too happy.

NON - OFFICIAL RESOLUTIONS

re: steps to arrest the Spirvalling prices of essential commodities,
[Debate Contd.]

† ಶ್ರೀ ಟಿ. ತಿರ್ : ಶಾಮಣ್ಣ (ಪೋರ್ಟ್).—ಮಾನ್ಯ ಅಧ್ಯಕ್ಷರೆ, ಇಂದು ನಮ್ಮನ್ನು ಕಾಡಿಸುತ್ತಾ ಇರತಕ್ಕಂತಹ ಸಮಸ್ಯೆಗಳಲ್ಲಿ ಅತೀ ಮುಖ್ಯವಾದ ಸಮಸ್ಯೆ, ಮತ್ತು ಜನರನ್ನು ಅತೀ ಹೆಚ್ಚು ತೊಂದರೆಗೆ ಈಡುಮಾಡುವಂತಹ ಸಮಸ್ಯೆ ಅಂದರೆ ದಿನನಿತ್ಯ ಬಳಸುತ್ತಿರುವ ಸಾಮಾನುಗಳ ಬೆಲೆ ಏರಿಕೆ. ಇವೊತ್ತಿನ ದಿವಸ ಸಾಮಾನುಗಳ ಬೆಲೆ ಯದ್ವಾತದ್ವಾ ಆಗಿ ಗಗನಕ್ಕೆ ಏರಿರುವುದು ಎಲ್ಲರ ಗಮನವನ್ನು ಸೆಳೆದಿದೆ. ನಮ್ಮ ದೇಶದ ಚರಿತ್ರೆಯಲ್ಲಿ ಈ ರೀತಿ ಬೆಲೆಗಳು ಏರಿರಲಿಲ್ಲ. ಈ

ರೀತಿ ಬೆಲೆಗಳು ಏರಿರುವುದು ನಮ್ಮ ಜನರ ದೌರ್ಭಾಗ್ಯವೆಂದು ಹೇಳಬಹುದು. ನಾವು ನಮ್ಮ ಕಾಸ್ಟ್ ಆಫ್ ಇಂಡೆಕ್ಸ್ 1961ನ್ನು ಬೇಸಿಕಾಗಿ ಇಟ್ಟುಕೊಂಡು ನೋಡಿದರೆ ಅದು ಈ ರೀತಿ ಇದೆ.

ವರ್ಷ	ಆಹಾರ ಪದಾರ್ಥಗಳು	ಇತರ ವಸ್ತುಗಳು
1967	188	169
1968	196	174
1969	197	182
1970	195	184
1971	200	190
1972-73	250	

ಕಳೆದ 6-7 ವರ್ಷಗಳಲ್ಲಿ 188 ಇದ್ದದ್ದು ಈ ವರ್ಷ 250ಕ್ಕೆ ಹೋಗಿರುವುದು ಜನರಲ್ಲಿ ಬಹಳ ಕಳವಳವನ್ನು ಉಂಟು ಮಾಡಿದೆ. ನಮ್ಮ ದೇಶದಲ್ಲಿ ಮತ್ತು ರಾಜ್ಯದಲ್ಲಿರತಕ್ಕಂತಹ ಅನೇಕ ಪೀಡೆಗಳ ಪೈಕಿ ಬೆಲೆಗಳ ಏರಿಕೆಯು ಒಂದು. ಇದಕ್ಕೆ ಕಾರಣಗಳಾದರೂ ಅನೇಕ ಇವೆ. ಅದರಲ್ಲಿ ಮುಖ್ಯವಾದುದು ಉತ್ಪನ್ನ ಬೇಕಾದದ್ದಕ್ಕಿಂತ ಕಡಿಮೆಯಾದುದು ಎಂದು ಹೇಳಿದರೆ ತಪ್ಪಾಗಲಾರದು. ಎಲ್ಲಕ್ಕಿಂತಲೂ ಮೇಲಾಗಿ ಹಣದ ಬೆಲೆ ಯದ್ವಾತದ್ವವಾಗಿರುವುದು. ಹೀಗೆ ಇರತಕ್ಕಂತಹ ಕಾರಣಗಳನ್ನು ಹೇಳಿದರೆ, ಅದು ರಾಜ್ಯ ಸರ್ಕಾರಕ್ಕೆ ಸೇರಿದ್ದಲ್ಲ; ಅದು ಕೇಂದ್ರ ಸರ್ಕಾರಕ್ಕೆ ಸೇರಿದು ಎಂದು ಹೇಳಬಹುದು. ಆದರ ಕೇಂದ್ರ ಸರ್ಕಾರದಲ್ಲಿ ಮತ್ತು ರಾಜ್ಯ ಸರ್ಕಾರದಲ್ಲಿ ಆಡಳಿತ ನಡೆಸುತ್ತಿದ್ದ ಪಕ್ಷ ಒಂದೇ ಆಗಿರುವುದರಿಂದ ರಾಜ್ಯದ ಮುಖ್ಯಮಂತ್ರಿಯಾಗಲಿ ಅಥವಾ ಇತರ ಸಂಬಂಧಪಟ್ಟ ಮಂತ್ರಿಯವರೇ ಆಗಲಿ ಕೇಂದ್ರ ಸರ್ಕಾರಕ್ಕೆ ಇದರ ಬಗ್ಗೆ ಸೂಕ್ತವಾದ ಕಾರ್ಯಕ್ರಮವನ್ನು ತಗೆದುಕೊಳ್ಳಬೇಕೆಂದು ಒತ್ತಾಯ ತರಬೇಕಾಗಿತ್ತು. ಆ ಒಂದು ಮುಖ್ಯವಾದ ಜವಾಬ್ದಾರಿ ರಾಜ್ಯಸರ್ಕಾರಕ್ಕೆ ಸೇರಿದ್ದು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಚಲಾವಣೆಯಲ್ಲಿ 1500 ಕೋಟಿ ರೂಪಾಯಿ ನೋಟುಗಳು ಇದ್ದವು. ಈಗ ಅದು 4,500 ಕೋಟಿಗೆ ಏರಿದೆ. ಇವೆಲ್ಲಕ್ಕಿಂತಲ್ಲೂ ಮುಖ್ಯವಾದುದು ಏನೆಂದರೆ, ಖೋಟಾ ನೋಟಿನ ಚಲಾವಣೆಯನ್ನು ತಪ್ಪಿಸುವುದಕ್ಕೆ ಸರ್ಕಾರದವರು ಅಸಹಾಯಕರಾಗಿರುವುದು ಬಹಳ ಶೋಚನೀಯವಾದ ವಿಚಾರ.

ಮೂರನೆಯ ಕಾರಣ ಏನೆಂದರೆ ಸರ್ಕಾರದವರು ವರ್ಷ ವರ್ಷ ತೆರಿಗೆಗಳನ್ನು ಏರಿಸುತ್ತಿರುವುದು. ಅದೇ ರೀತಿ ಸಾರಿಗೆ ಖರ್ಚುಗಳನ್ನು ಸಹ ವರ್ಷ ವರ್ಷ ಹೆಚ್ಚು ಮಾಡುತ್ತಿರುವುದು. ಹಾಗೆಯೇ ಸಾರಿಗೆಗೆ ಸಂಬಂಧಪಟ್ಟ ಪೆಟ್ರೋಲ್, ಡೀಸೆಲ್, ಎಕ್ಸ್‌ಪ್ಲಸ್, ಟ್ಯಾಕ್ಸ್, ಟೈಯರ್ ಟ್ಯೂಬ್ಸ್ ಇತ್ಯಾದಿ ಬಿಡಿ ಭಾಗಗಳನ್ನು ಸಹ ಏರಿಸುವುದು ಬೆಲೆಗಳ ಏರಿಕೆಗೆ ಮುಖ್ಯವಾದ ಕಾರಣಗಳು.

ಅದೇ ರೀತಿಯಲ್ಲಿ ನಮ್ಮ ಯೋಜನೆಗಳು ಒಂದರ ಮೇಲೊಂದು ಆಗುತ್ತಾ ಇವೆ. ಆದರೆ ಅದರ ಪ್ರತಿಫಲ ಫಲಕಾರಿಯಾಗಿ ಆಗದಿರುವುದು ಶೋಚನೀಯವಾದ ವಿಚಾರ. ಈ ಯೋಜನೆಗಳೆಲ್ಲವೂ ಫೈಲ್‌ಗೆ ಆಗಿದ್ದೆಎಂದರೆ ತಪ್ಪಾಗಲಾರದು. ಹಾಗೆಯೇ ಸರ್ಕಾರದವರು ಲಂಚ ರುಷುವತ್ತುಗಳನ್ನು ತಪ್ಪಿಸುವುದಕ್ಕೆ ನಿಸ್ಸಾಹಯಕ್ತರಾಗಿದ್ದಾರೆ ಮತ್ತು ಆರ್ಡರ್‌ತೆಯನ್ನು ಕಳೆದುಕೊಂಡಿದ್ದಾರೆ. ಈ ಲಂಚದ ಹಾವಳಿ ಯಾವಾಗ ಹೆಚ್ಚಾಗುತ್ತದೆಯೋ, ಆಗ ಬೆಲೆಗಳನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ಇನ್ನು ಹೋರ್ಡಿಂಗ್ಸ್ ಮತ್ತು ಪ್ರಾಫಿಟಿಯರಿಂಗ್ ಸಹ ನಮ್ಮಲ್ಲಿ ಆರ್ಟಿಫಿಶಿಯರ್ ಸ್ಕೆರ್ಸಿಟಿಯನ್ನು ಉಂಟು ಮಾಡಿ ಬೆಲೆಗಳನ್ನು ಏರಿಸುತ್ತದೆ. ಆ ಮೇಲೆ ಕ್ರಳ್ಳ ಸ್ಟಾಗ್‌ಣೇಷನ್ ಯನ್ನು ಸಹ ತಡೆಟ್ಟುವುದಕ್ಕೆ ಸರ್ಕಾರದವರು ನಿಸ್ಸಾಹಯಕರಾಗಿದ್ದಾರೆ. ಇದರಿಂದ ಸಹ ಬೆಲೆಗಳು ಏರುತ್ತಿವೆ.

ಇವುಗಳ ಜೊತೆಗೆ ಬೆಲೆಗಳು ಸಾಧಾರಣವಾಗಿ ಏರುವುದಕ್ಕೆ ಮುಖ್ಯವಾದ ಇನ್ನೊಂದು ಕಾರಣವೇನೆಂದರೆ, ನಮ್ಮಲ್ಲಿ ಬರುವಂತಹ ಬರಗಾಲ ಪರಿಸ್ಥಿತಿಗಳು, ಮತ್ತು ಅತಿವೃಷ್ಟಿ ಹಾಗೂ ಅನಾವೃಷ್ಟಿ ಇನ್ನೊಂದು ಕಾರಣವೇನೆಂದರೆ ಸರ್ಕಾರದವರು ಆಗಿಂದಾಗ್ಗೆ ಮಾಡುತ್ತಿರುವ ಘೋಷಣೆಗಳು. ಈ ಘೋಷಣೆಗಳಿಂದ ಅವುಗಳನ್ನು ಕಾರ್ಯಗತ ಮಾಡದೆ, ಬೆಲೆಗಳು ಏರುತ್ತಿವೆ. ವರ್ಷದ ಆರಂಭದಲ್ಲಿ ಪುಡ್‌ಗ್ರೈನ್ಸ್ ಹೋರ್ಸೇಲ್ ಟ್ರೇಡ್ ತಗೆದುಕೊಳ್ಳುತ್ತೇವೆಂದು ಒಂದು ಸಲ ಹೇಳುತ್ತಾರೆ. ಇನ್ನೊಂದು ಸಲ ಮುಂದಿನ ವರ್ಷ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಿದ್ದಾರೆ. ಇವರು ಹೀಗೆ ಒಂದೊಂದು ಸಲ ಒಂದೊಂದು ಹೇಳಿಕೆ ಕೊಟ್ಟರೆ ಬೆಲೆಗಳು ಏರುತ್ತವೆಯೇ ಹೊರತ್ತು ಇದರಿಂದ ಜನರಿಗೆ ಏನೂ ಪ್ರಯೋಜನವಾಗುವುದಿಲ್ಲ. ಇದರ ಬಗ್ಗೆ ಸರ್ಕಾರದವರು ಒಂದು ಶಿಘ್ರವಾದಂತಹ ಮತ್ತು ದಕ್ಷವಾದಂತಹ ಕಾರ್ಯಕ್ರಮ ತೆಗೆದುಕೊಳ್ಳದೆ ಇರುವುದು ತುಂಬಾ ವ್ಯಸನಪಡಬೇಕಾದ ವಿಚಾರ. ಈಗ ಹೋರ್ಸೇಲ್ ಟ್ರೇಡ್ ತೆಗೆದುಕೊಳ್ಳಬೇಕಾದರೆ ಸುಮಾರು 600 ಕೋಟಿ ರೂಪಾಯಿ

(ಶ್ರೀ ಟಿ. ಆರ್. ಶಾಮಣ್ಣ)

ಬೇಕೆಂದು ಹೇಳುತ್ತಿದ್ದಾರೆ. ಹಣದ ಉಬ್ಬರ ಏರುವ ಈ ಕಾಲದಲ್ಲಿ 600 ಕೋಟಿ ರೂಪಾಯಿ ತಂದು ಖರ್ಚು ಮಾಡುತ್ತಾರೋ ಎಂಬ ಸಂದೇಹ ನನಗೆ ಬಂದಿದೆ. ಇಂತಹ ಸಮಸ್ಯೆಗಳ ಬಗ್ಗೆ ನಾವು ಏನು ಹೇಳಿದರೂ ತಪ್ಪಿನ ಹೊರೆಯನ್ನು ವಿರೋಧ ಪಕ್ಷದವರ ಮೇಲೆ ಹಾಕುತ್ತಿದ್ದಾರೆ. ಇವತ್ತು ಈ ಸರ್ಕಾರ ಬುರ್‌ಡೋಜರ್ ಮೆಜಾರಿಟಿ ಪಡೆದು ಆಡಳಿತಕ್ಕೆ ಬಂದಿದೆ. ಇದರಲ್ಲಿ ಏನಾಗಿದೆ ಎಂದರೆ, ಪ್ರಕೃತಿ ಮತ್ತು ದೇವರು ವರ ಕೊಡುತ್ತದೆ ಎಂಬುದನ್ನು ಮರತು ಇಂದಿರಾ ಗಾಂಧಿಯೇ ದೇವರು ಎಂಬ ಮೂಢನಂಬಿಕೆ ಇಟ್ಟುಕೊಂಡು ಜನರು ತಮ್ಮ ಕರ್ತವ್ಯ ಮತ್ತು ವ್ಯಕ್ತಿತ್ವವನ್ನು ಕಳೆದುಕೊಂಡು ಕೆಲಸ ಮಾಡುತ್ತಿದ್ದಾರೆ. ಇವತ್ತು ಪೂರ್ಣ ಜವಾಬ್ದಾರಿಯದ್ದು ಇಂದಿರಾಗಾಂಧಿ ಮೇಲೆ ಹಾಕಿ ತಮ್ಮ ವ್ಯಕ್ತಿತ್ವವನ್ನೇ ಕಳೆದುಕೊಂಡು ಆಡಳಿತ ನಡೆಸತಕ್ಕದ್ದು ಇವರ ನಪುಂಸಕತನವನ್ನು ತೋರಿಸುತ್ತದೆ ಎಂದು ಹೇಳಬೇಕಾಗಿದೆ. ಆದ್ದರಿಂದ ಸರ್ಕಾರದವರು ಬೆಲೆಗಳ ಏರಿಕೆಯನ್ನು ತಡೆಗಟ್ಟುವುದಕ್ಕೆ ಪೂರ್ಣವಾಗಿ ಸೋತಿದೆ ಎಂದು ಹೇಳಿದರೆ ತಪ್ಪಾಗಲಾರದು. ಇನ್ನು ಹಣದ ಉಬ್ಬರದ ಬಗ್ಗೆ ಮಾತನಾಡಬೇಕಾದರೆ, ಇವೊತ್ತಿನ ದಿನಸಿ ಒಂದು ರೂಪಾಯಿಯ ಬೆಲೆ 39 ಪೈಸೆಗೆ ಇಳಿದಿದೆ. ಹಿಂದೆ ಡಾಕ್ಟರ್ ಲೋಹಿಯಾರವರು ಸಹ ಒಂದು ಸಲ ರೂಪಾಯಿಯ ಬೆಲೆ 16 ಪೈಸೆಗೆ ಇಳಿದಿದೆ ಎಂದು ಹೇಳಿದ್ದರು. ಸರ್ಕಾರದವರು ವಿಪರೀತವಾಗಿ ನೋಟು ಎತ್ತುವುದರಿಂದ, ನೋಟಿನ ಮೇಲೆ ಹೆಚ್ಚು ಬಡ್ಡಿ ಕೊಡುವುದರಿಂದ ಮತ್ತು ಮೇಲಿಂದ ಮೇಲೆ ತೆರಿಗೆಗಳನ್ನು ಹಾಕುವುದರಿಂದ ನಮ್ಮಲ್ಲಿ ಹಣದ ಉಬ್ಬರ ಉಂಟಾಗುತ್ತಿದೆ. ಸರ್ಕಾರದವರು ಒಂದು ರೈಲ್ವೆ ಬಜೆಟ್ ತಂದರೂ ಅದರಲ್ಲಿ ಹೆಚ್ಚುವರಿಗೆ ಫೈಟ್ಸ್ ಮತ್ತು ರೇಟ್ಸ್ ಇದ್ದೇ ಇರುತ್ತದೆ. ಈ ರೀತಿ ಮಾಡುವುದರಿಂದ ಸಾಗಾಣಿಕೆ ಮೇಲೆ ಜಾಸ್ತಿ ಖರ್ಚು ಬೀಳುತ್ತದೆ. ಸಾಗಾಣಿಕೆಯ ಖರ್ಚು ಜಾಸ್ತಿಯಾದಾಗ ತನ್ನಷ್ಟಕ್ಕೆ ಬೆಲೆ ಏರಿಯೇ ಏರುತ್ತದೆ. ಅಲ್ಲದೆ ಕಡಿಮೆಯಾಗುವುದಿಲ್ಲ.

10-30 A.M.

ಇದರ ಜೊತೆಗೆ ಮುಖ್ಯವಾಗಿ ಸಾಮಾನುಗಳನ್ನು ಉತ್ಪತ್ತಿ ಮಾಡತಕ್ಕ ರೈತರಿಗೆ ಇದರಿಂದ ಏನೂ ಪ್ರಯೋಜನವಿಲ್ಲ. ಆ ಸಾಮಾನುಗಳನ್ನು ಉಪಯೋಗ ಮಾಡತಕ್ಕ ಬಳಕೆದಾರರಿಗೂ ಏನೂ ಪ್ರಯೋಜನವಾಗುತ್ತಾ ಇಲ್ಲ. ಈ ಮಧ್ಯೆ ಮಧ್ಯವರ್ತಿ ಜನಗಳು ಅದನ್ನು ತಮ್ಮ ಇಷ್ಟ ಪ್ರಕಾರ ಲೂಟಿಮಾಡಿ ಬೇಕಾದ ಹಾಗೆ ಲಾಭವನ್ನು ನಿರ್ಮಾದನೆ ಮಾಡುತ್ತಿದ್ದಾರೆ. ಕೆಲವು ಮಧ್ಯವರ್ತಿ ಜನಗಳು ಕಮ್ಯೂನಿಸ್ಟ್ ಸರ್ಕಾರ ಬರಲಿ, ಸೋಷಿಯಲಿಸ್ಟ್ ಸರ್ಕಾರ ಬರಲಿ, ಅದೇ ಒಂದು ಧಾಟಿಯಲ್ಲಿ ನೇರಿಕೊಂಡು ಈ ಆಡಳಿತವನ್ನು ಯಾವ ರೀತಿಯಲ್ಲಿ ನಡೆಸಬೇಕೆಂಬ ಬಗ್ಗೆ ಅನೇಕ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಬೆಲೆಗಳು ಈ ವರ್ಷ ಇದ್ದುದು ಮುಂದಿನ ವರ್ಷ ಇರುವುದಿಲ್ಲ. ಈ ತಿಂಗಳು ಇದ್ದುದು ಮುಂದಿನ ತಿಂಗಳು ಇರುವುದಿಲ್ಲ. ಇವತ್ತು ಇದ್ದ ಬೆಲೆ ನಾಳೆ ಇರುವುದಿಲ್ಲ. ಹೀಗೆ ಸಾಮಾನುಗಳ ಬೆಲೆ ದಿನ ದಿನಕ್ಕೂ ಏರುವುದಕ್ಕೆ ಕಾರಣವೇನೆಂಬುದನ್ನು ಸರ್ಕಾರದವರು ಇದುವರೆಗೂ ಯೋಚನೆಮಾಡದೇ ಇರುವುದು ಬಹಳ ಕಳವಳಕರವಾದ ವಿಷಯ. ಇದರ ಬಗ್ಗೆ ಸರ್ಕಾರದವರು ಕೂಲಂಕಷವಾಗಿ ಈಗಲೇ ಯೋಚನೆ ಮಾಡದಿದ್ದರೆ ಬಡ ಜನರು ನಿಜವಾಗಿ ಮುಂದೆ ಬಹಳ ಕಷ್ಟಪಡಬೇಕಾಗುತ್ತದೆ.

ಇನ್ನು ಈ ಮಧ್ಯೆ ಡಿ.ಎ. ಮತ್ತು ಬೋನಸ್‌ವನ್ನು ಹೆಚ್ಚಿಸಬೇಕೆಂದು ಹೇಳುತ್ತಿದ್ದಾರೆ. ಎಷ್ಟು ಡಿ.ಎ. ಮತ್ತು ಬೋನಸ್‌ಗಳನ್ನು ಹೆಚ್ಚು ಮಾಡಲಿ, ಸಾಮಾನುಗಳ ಬೆಲೆ ಈ ರೀತಿಯಾಗಿ ಏರುತ್ತಾ ಹೋದರೆ, ಎಷ್ಟು ಡಿ.ಎ. ಮತ್ತು ಬೋನಸ್‌ಗಳನ್ನು ಕೊಟ್ಟರೂ ಏನೂ ಪ್ರಯೋಜನವಾಗುವುದಿಲ್ಲ. ಇದರಿಂದ ಸರ್ಕಾರದ ಖರ್ಚು ಬರೀ ಎಸ್ಟಾಬ್ಲಿಷ್‌ಮೆಂಟಿಗೆ ಹಾಗೂ ಇತರ ಸಾಲಗಳಿಗೆ ಬಡ್ಡಿ ಕೊಡುವುದಕ್ಕೇ ಜಾಸ್ತಿಯಾಗುತ್ತದೆ. ಡೆವಲಪ್‌ಮೆಂಟ್ ಆಕ್ಟಿವಿಟೀಸ್‌ಗೆ ಹೆಚ್ಚಿಗೆ ಖರ್ಚು ಮಾಡುವುದಕ್ಕೆ ಆಗದೆ, ಮುಂದೆ ಈ ಸರ್ಕಾರ ಉತ್ಪನ್ನ ಬಾಬುಗಳಿಗೆ ಹಣವನ್ನು ಸಾಕಾಗುವಷ್ಟು ಒದಗಿಸುವುದಕ್ಕಾಗದೆ, ಹೆಚ್ಚಿನ ಸಂಬಳ ಸಾರಿಗೆಗಳನ್ನು ಮತ್ತು ಸಾಲದ ಬಾಕಿಯನ್ನು ತೀರಿಸುವುದಕ್ಕೂ ದುಡ್ಡು ಇಲ್ಲದೇ ಇರುವ ಪರಿಸ್ಥಿತಿ ನಿಜವಾಗಿಯೂ ಬರುತ್ತದೆಂಬ ಅಂಶವನ್ನು ಸರ್ಕಾರ ಈಗಲೇ ಗಮನದಲ್ಲಟ್ಟುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ನಿಮಿಷನಿಮಿಷಕ್ಕೂ ಸಾಮಾನುಗಳ ಬೆಲೆ ಏರುತ್ತಾ ಇರುವುದನ್ನು ನೋಡಿದರೆ ಜನಸಾಮಾನ್ಯರು ಜೀವನಮಾಡುವುದೇ ಬಹಳ ಕಷ್ಟವಾಗುತ್ತದೆ. ನನ್ನ ಮನೆಯಲ್ಲಿಯೇ 10 ಜನರು ಇದ್ದಾರೆ. ಬರೀ ಸಾಲಕ್ಕೆ 140 ರೂಪಾಯಿಗಳವರೆಗೆ ಪ್ರತಿ ತಿಂಗಳೂ ಖರ್ಚುಮಾಡುತ್ತಿದ್ದೇನೆ. 10 ಜನ ಇರತಕ್ಕ

ಒಂದು ಮನೆಯಲ್ಲಿ ಕೇವಲ 140 ರೂಪಾಯಿ ಮಾಹೆಯಾನ ವರಮಾನ ಬಂದರೆ, ಅವರು ಯಾವ ರೀತಿ ಜೀವನ ಮಾಡುತ್ತಿದ್ದಾರೆಂಬುದನ್ನು ನೋಡಿದರೆ, ನನಗೆ ಭಯವಾಗುತ್ತದೆ. ಸಾಪಿರಾರು ರೂಪಾಯಿಗಳಷ್ಟು ಸಂಬಳ ಬರುವವರಿಗೆ ಈಗ ಬೆಲೆಯ ಏರಿಕೆಯಿಂದ ಜೀವನಮಾಡುವುದೇ ಬಹಳ ಕಷ್ಟವಾಗಿರುವಾಗ ಬಡವರಾಗಿರುವವರಿಗೆ ಇನ್ನೂ ಬಹಳ ಕಷ್ಟವಾಗುತ್ತದೆ. ಇದನ್ನು ಸರ್ಕಾರದವರು ಬಹಳವಾಗಿ ಯೋಚನೆಮಾಡಬೇಕಾಗಿದೆ. ಈ ಪರಿಸ್ಥಿತಿಯಲ್ಲಿ ಜನತೆ ತುಂಬಾ ವಿಕೋಪಕ್ಕೆ ಹೋಗುವುದಕ್ಕೆ ಅವಕಾಶ ಕೊಡದೇ ಇರುವ ಹಾಗೆ ಸರ್ಕಾರದವರು ಈಗಲೇ ಎಚ್ಚರಿಕೆ ವಹಿಸಬೇಕು. ಏಕೆಂದರೆ ಬಹಳವಾಗಿ ಬಡ ಜನರು ಕಷ್ಟಕ್ಕೆ ಈಡಾಗಿದ್ದಾರೆ. ಅಕ್ಕಿ ಬೆಲೆ ಯದ್ವಾತದ್ವಾ ಏರಿದೆ. ಗೋಧಿ ಹೆಚ್ಚಿಗೆ ಬೇಕೆಂದಾಗ ತೆಗೆದುಕೊಳ್ಳುವುದಕ್ಕೆ ಹಣದ ಅಭಾವ, ಈಗ ಗೋಧಿ ಸ್ಟಾಕ್ ಇದ್ದರೂ ಅದು ಸಿಗುತ್ತಿಲ್ಲ. ಹಣ ಹೆಚ್ಚು ಕೊಡುತ್ತೇವೆಂದರೂ ಕೂಡ ಅದು ಸಿಗುವುದೇ ಕಷ್ಟ. ಅದರಲ್ಲಿಯೂ ರವೆ ಮತ್ತು ಮೈದಾ ಇವುಗಳ ಅಭಾವವೂ ಬಹಳ ಜಾಸ್ತಿಯಾಗಿದೆ. ಒಂದು ಕೆ.ಜಿ.ಗೆ ಎರಡೂವರೆ ರೂಪಾಯಿಗಳನ್ನು ಕೊಟ್ಟರೂ ಒಳ್ಳೆಯ ರವೆ ಸಿಗುವುದಿಲ್ಲ. ಒಳ್ಳೆಯ ಮೈದಾ ಸಹ ಸಿಗುತ್ತಿಲ್ಲ. ರಾಗಿ ಮತ್ತು ಜೋಳ ಇವನ್ನು ಬಡವರು ಉಪಯೋಗಿಸುವ ವಸ್ತುಗಳು. ಅದೂ ಸಹ ಬಹಳ ಬೆಲೆಯಾಗಿದೆ. ಅದರ ಬೆಲೆಗಳು ದಿನದಿನಕ್ಕೂ ಏರುತ್ತಲೇ ಇದೆ. ಇನ್ನು ಬಟ್ಟೆಗಳ ಬೆಲೆ ಒಂದು ಮೀಟರ್‌ಗೆ 2-40 ರೂಪಾಯಿಗಳಿಂದ 3-40 ರೂಪಾಯಿಗಳಿಗೇರಿದೆ. ಯಾವ ವರ್ಷದಲ್ಲಿಯೂ ಆಹಾರ ಪದಾರ್ಥಗಳ ಬೆಲೆ ಇಷ್ಟು ಜಾಸ್ತಿಯಾಗಿ ಏರಿರಲಿಲ್ಲ. ಹೋದ ವರ್ಷ 2 ರೂಪಾಯಿ ಬೆಲೆ ಇದ್ದುದು ಈ ವರ್ಷ 3 ರೂಪಾಯಿಗಳು ಚಿಲ್ಲರೆಯಾಗಿದೆ. ನಿತ್ಯವೂ ಉಪಯೋಗಿಸುವ ಎಣ್ಣೆಗೆ ಇರತಕ್ಕ ಅಭಾವ ಹಾಗೂ ಬೆಲೆ ಏರಿಕೆ ಆಗಿರುವಷ್ಟು ಬೇರೆ ಯಾವ ವಸ್ತುವಿಗೂ ಏರಲಿಲ್ಲ. ಅನೇಕ ಪದಾರ್ಥಗಳ ಬೆಲೆ ಒಂದಕ್ಕೆ ಎರಡರಷ್ಟು ಮೂರರಷ್ಟು ಏರಿದೆ. ಕೇವಲ ಕೆಲವೇ ತಿಂಗಳಲ್ಲಿ ಬೆಲೆಗಳು ಇಷ್ಟು ಏರಿವೆ. ಜನಜೀವನವನ್ನು ಬಡವರು ಹೇಗೆ ನಡೆಸಬೇಕೋ ಎಂದು ಹಾತೊರೆಯುತ್ತಿದ್ದಾರೆ ಇನ್ನು ಬೆಣ್ಣೆಯನ್ನು ಉಪಯೋಗಿಸುವುದೇ ಬಹಳ ಕಡಿಮೆ. ಎಣ್ಣೆ ಉಪಯೋಗಿಸುವುದಕ್ಕೆ ಇಷ್ಟು ಕಷ್ಟವಿರುವಾಗ, ಇನ್ನು ಬೆಣ್ಣೆ ಉಪಯೋಗಿಸುವವರು ಅಷ್ಟು ಹೆಚ್ಚಿಗೆ ಇಲ್ಲವೇ ಇಲ್ಲ ಅಂದ ಮೇಲೆ ಈಗ ಎಣ್ಣೆ ಉಪಯೋಗಿಸುವುದಕ್ಕೂ ಸಹ ಬಹಳ ಕಷ್ಟವಾಗಿದೆ. ಇನ್ನು ಸಿಮೆಂಟ್ ಮತ್ತು ಕಟ್ಟಡ ಕಟ್ಟುವುದಕ್ಕೆ ಉಪಯೋಗಿಸುವ ವಸ್ತುಗಳ ಬೆಲೆಗಳನ್ನು ನೋಡಿದರೆ, ಅವನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಸರ್ಕಾರದವರ ಸಿಮೆಂಟಿನ ಬೆಯನ್ನು ನಿಯಂತ್ರಣ ಮಾಡಬೇಕು. ವ್ಯಾಪಾರಿಗಳು ಹಾಗೂ ಕೆಲವು ಸಿಮೆಂಟ್ ಡೀಲರ್ಸ್ ಬಿಟ್ಟರೆ, ಬೆಂಗಳೂರಿನಲ್ಲಿ ಎಷ್ಟೋ ಜನರು ಕೆಲವಾರು ಎಜೆಂಟುಗಳ ಮೂಲಕ ರೈಲ್ವೆ ಸ್ಟೇಷನ್ ಮೂಲಕವೇ ಒಂದೊಂದು ಸಿಮೆಂಟ್ ಮೂಟೆಗೆ 16 ರೂಪಾಯಿಗಳಿಂದ 20 ರೂಪಾಯಿಗಳವರೆಗೆ ಕೊಟ್ಟು ತೆಗೆದುಕೊಂಡು ಹೋಗುತ್ತಿದ್ದಾರೆ. ಇದನ್ನು ಸರ್ಕಾರ ನೋಡಿಕೊಂಡು ಕಣ್ಣು ಮುಚ್ಚಿಕೊಂಡು ಕೂತಿದೆ. ಸರ್ಕಾರ ನಾಚಿಕೆಪಡತಕ್ಕ ವಿಷಯವಾಗಿ ಇದು ಇದೆ. ಸಿಮೆಂಟ್ ಅಭಾವ ಹೋಗುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕಾಗಿದೆ. ಅದಕ್ಕಾಗಿ ಸರ್ಕಾರದವರು ಚೆನ್ನಾಗಿ ಕೆಲಸಮಾಡುತ್ತಿದ್ದಾರೆಂದು ನಾನು ನಂಬಿದ್ದೇನೆ. ಆದರೆ ಇದನ್ನು ನಿಯಂತ್ರಣಗೊಳಿಸುವುದಕ್ಕೆ ಯೋಗ್ಯವಾಗಿ ಆಡಳಿತ ನಡೆಸತಕ್ಕವರಿಗೆ ಆಗುವುದಿಲ್ಲವೆಂದರೇನು ? ಈ ರೀತಿ ಮಾಡುವುದಕ್ಕೆ ನಿಮಗೆ ನಾಚಿಕೆಯಾಗುವುದಿಲ್ಲವೇ ಎಂದು ಹೇಳಿದರೆ, ಯಾವುದಾದರೂ ನಬೂಬು ಕೊಟ್ಟುಬಿಡುತ್ತಾರೆ. ಆದ್ದರಿಂದ ಇದಕ್ಕೆ ಒಂದು ಪರಿಹಾರವನ್ನು ಸರ್ಕಾರದವರು ಕಂಡು ಹಿಡಿಯದೇ ಇರುವುದು ಬಹಳ ಶೋಚನೀಯವಾಗದೆ. ಆದರೆ ಯಾವ ಸಾಮಾನನ್ನು ತೆಗೆದು ಕೊಂಡರೂ ಬೆಲೆ ಮಾಡುವುದನ್ನು ತಪ್ಪಿಸುವುದಕ್ಕೆ ಸರ್ಕಾರದವರು ಯಾವ ಕ್ರಮವನ್ನು ತೆಗೆದು ಕೊಳ್ಳುತ್ತಾ ಇಲ್ಲ. ಕೆಲವು ಇಲಾಖೆಗಳಲ್ಲಿ ಹಣ ವ್ಯರ್ಥ ದುರುಪಯೋಗವಾಗುತ್ತಿದೆ, ಇದನ್ನು ಸರಿಪಡಿಸುವುದಕ್ಕೆ ಸರ್ಕಾರದವರು ಏನೂ ಮಾಡುತ್ತಾ ಇಲ್ಲ. ಇವನ್ನು ಸರಿಪಡಿಸುವುದಕ್ಕೆ ಏನು ಮಾಡಬೇಕೆಂಬ ಬಗ್ಗೆ ಕೆಲವಾರು ವಿಚಾರಗಳನ್ನು ನಾನು ಹೇಳುತ್ತೇನೆ. ಒಂದನೆಯಾಗಿ ಸರ್ಕಾರದವರು ಸಾಧ್ಯವಾದಷ್ಟೂ ಕೂಡ ಸಾಮಾನುಗಳ ಸರಬರಾಜು ಹಾಗೂ ಅವುಗಳ ವಿತರಣೆಯ ಬಗ್ಗೆ ಸರಿಯಾದಂಥ ಹಾಗೂ ನ್ಯಾಯವಾದಂಥ ಕಂಟ್ರೋಲನ್ನು ಇಟ್ಟುಕೊಳ್ಳದೇ ಹೋದರೆ, ಆಗ ಸರಿಯಾದಂಥ ರೀತಿಯಲ್ಲಿ ಜನಗಳಿಗೆ ಸಾಮಾನುಗಳು ವಿತರಣೆಯಾಗುವುದಕ್ಕೆ ಬಹಳ ಕಷ್ಟವಾಗುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಏನು ಸರಿಯಾದಂಥ ವ್ಯವಸ್ಥೆಗಳನ್ನು ಮಾಡಬೇಕೆಂಬುದನ್ನು ಹೇಳಬೇಕು. ಯಾವ್ಯಾವ ಕ್ರಮಗಳನ್ನು ಈ ವಿಚಾರದಲ್ಲಿ ತೆಗೆದುಕೊಳ್ಳಬೇಕೆಂಬುದನ್ನು ವಿವರವಾಗಿ ತಿಳಿಸಬೇಕು.

ಶ್ರೀ ಟಿ. ಆರ್. ಶಾಮಣ್ಣ.—ಈಗ ನನಗೆ ತೋರುವ ರೀತಿಯಲ್ಲಿ ಸಾಮಾನುಗಳನ್ನು ಉತ್ಪನ್ನ ಮಾಡುವ ರೈತನಿಗಾಗಲೀ ಅಥವಾ ಬೇರೆಯವರಿಗಾಗಲೀ ಇದರಲ್ಲಿ ಹೆಚ್ಚು ಲಾಭ ಪಡೆಯುತ್ತಾ ಇಲ್ಲವೆಂದು ಹೇಳಬಹುದು. ಈ ಬೆಲೆಗಳ ಏರಿಕೆಗೆ ಮುಖ್ಯ ಕಾರಣರು ಯಾರೆಂದರೆ ಕೆಲವು ಸಮಾಜ ದ್ರೋಹಿಗಳು ಹಾಗೂ ಕೆಲವು ವರ್ತಕರು ಎಂಬುದಾಗಿ ಹೇಳಿದರೆ ತಪ್ಪಾಗಲಾರದು. ನಾನು ನಿಜವಾಗಿ ಎಲ್ಲಾ ವರ್ತಕರ ಮೇಲೆ ಆರೋಪಣೆ ಮಾಡುವುದಿಲ್ಲ. ಅನೇಕರು ಸಾಹುಕಾರರಾಗಬೇಕೆಂಬ ಉದ್ದೇಶವಿಂದ ಸಾಮಾನುಗಳ ಬೆಲೆಗಳನ್ನು ಏರಿಸುವುದಕ್ಕೆ ಮುಂಚಿತವಾಗಿಯೇ ಹೆಚ್ಚು ಹೆಚ್ಚಾಗಿ ಸಾಮಾನುಗಳನ್ನು ದಾಸ್ತಾನು ಮಾಡುತ್ತಾರೆ. ಹಾಗೂ ಸಾಮಾನುಗಳ ಬೆಲೆಯು ಏರಿದ ಕೂಡಲೇ ಅವನ್ನು ಹೆಚ್ಚು ಲಾಭಕ್ಕಾಗಿ ಬ್ಲಾಕ್‌ಮಾರ್ಕೆಟ್ಟಿನಲ್ಲಿ ಅಕ್ರಮವಾಗಿ ಮಾರಿ ಶ್ರೀಮಂತರಾಗುತ್ತಿದ್ದಾರೆ. ಆದ್ದರಿಂದ ಇಂಥಾದ್ದಕ್ಕೆ ಯಾರು ಕಾರಣರೋ ಅಂತಹವರನ್ನು ಓಪನ್ ಮಾರ್ಕೆಟ್ಟಿನಲ್ಲಿ ಒಂದು ಅರಳಿ ಕಟ್ಟೆಯ ಮೇಲೆ ಕುಳ್ಳಿರಿಸಿ ಚಡಿ ಏಟು ಹೊಡೆಸಬೇಕು. ಅಂತಹವರ ಆಸ್ತಿಪಾಸ್ತಿಗೂ ಕೂಡ ಮುಟ್ಟುಗೋಲು ಹಾಕಬೇಕು. ಈ ರೀತಿಯಾಗಿ ಕಠಿಣ ಕ್ರಮವನ್ನು ತೆಗೆದುಕೊಳ್ಳದೇ ಹೋದರೆ ಅವರನ್ನು ನಿಜವಾಗಿ ಒಂದು ಹತೋಟಿಗೆ ತರುವುದಕ್ಕಾಗುವುದಿಲ್ಲ. ಸಾಮಾನುಗಳ ಬೆಲೆಯನ್ನು ಕಡಿಮೆ ಮಾಡುವುದಕ್ಕಾಗುವುದಿಲ್ಲ. ಇಷ್ಟು ಹೆಚ್ಚು ಬೆಲೆಯನ್ನು ಏರಿಸುವುದಕ್ಕೆ ಅವರೇ ಮುಖ್ಯ ಕಾರಣರು. ಬೆಂಗಳೂರಿನಲ್ಲಿದ್ದಂಥ ಅನೇಕ ವರ್ತಕರು ಅದರಲ್ಲಿಯೂ ಸಣಬಿನಲ್ಲಾ ಸತ್ತು ಹೋದರು. ಈ ಬೆಂಗಳೂರಿನ ಸುತ್ತ ಮುತ್ತಲಿನಿಂದ ಬಂದಂಥ ಕೆಲವು ವರ್ತಕರು ಇಲ್ಲಿ ಸೇರಿಕೊಂಡು ದೊಡ್ಡ ಸಾಹುಕಾರರಾಗಿ ಬಿಟ್ಟಿದ್ದಾರೆ. ಅಂತಹವರು ಜೀವನ ಮಾಡತಕ್ಕ ಮಟ್ಟವನ್ನು ನೋಡಿದರೆ ಇವರು ಪೊದಲಿನಿಂದಲೂ ಎಷ್ಟು ದೋಚಿದ್ದಾರೋ ಎಂಬುದು ಚೆನ್ನಾಗಿ ಮೈಕ್ಕವಾಗುತ್ತದೆ. ಇವರು ಯಾವ ರೀತಿ ಬೆಂಗಳೂರಿಗೆ ಬಂದರು ಆಗ ಇವರು ಯಾವ ರೀತಿ ಇದ್ದರು; ಈಗ ಇವರು ಯಾವ ರೀತಿಯಿದ್ದಾರೆ ಎಂಬುದನ್ನು ನಾವು ನೋಡಿದರೆ ಇದು ಗೊತ್ತಾಗುತ್ತದೆ.

ಇನ್ನು ಎರಡನೆಯದಾಗಿ ಈ ಆಹಾರಧಾನ್ಯಗಳ ಬಗ್ಗೆ ನಿಯಂತ್ರಣ ಇರಬೇಕೇ ಬೇಡವೇ ಅನ್ನತಕ್ಕ ವಿಚಾರದಲ್ಲಿ ಆ ನಿಯಂತ್ರಣ ಇರಬೇಕೆಂಬುದು ನನ್ನ ಖಚಿತವಾದ ಅಭಿಪ್ರಾಯ, ಆದರೆ ಸರ್ಕಾರದವರು ಅದನ್ನು ನಡೆಸುವುದಕ್ಕೆ ವಿಶಕ್ತರಾಗಿದ್ದಾರೆ; ಅವರಲ್ಲಿ ಆ ದಕ್ಷತೆ ಇರುವುದಿಲ್ಲ. ಆದರಿಂದ ಅವರು ಇದನ್ನು ಜಾರಿಗೆ ತಂದರೆ ಏನಾಗತ್ತದೆಂಬುದೂ ಕೂಡ ನನಗೆ ಗೊತ್ತಿದೆ. ತೋಳ್ ತೋಳ್ ನೀನು ಕುರಿಯನ್ನು ಕಾಯುತ್ತೀಯಾ ಎಂದರೆ ಅದು ನನಗೆ ನಂಬಳನೇ ಬೇಡ ಆ ಕೆಲಸ ಕೊಡುವುದಾದರೆ ಅದು ಹಾಗೆ ಆಗುತ್ತದೆ. ಅದಕ್ಕಾಗಿ ನಾನು ಸರ್ಕಾರದವರಿಗೆ ಹಾಕತಕ್ಕ ಸವಾಲು ಏನೆಂದರೆ ಇದನ್ನು ನಿಮ್ಮ ಕೈಲಾದರೆ ಮಾಡಿ, ಇಲ್ಲದಿದ್ದರೆ ಫ್ರೀ ಟ್ರೇಡಿಗೆ ಅರೋ ಮಾಡಿ' ಎಂದು ಕೇಳುತ್ತಿದ್ದೇನೆ. ಮುಖ್ಯವಾಗಿ ಈ ಬೆಲೆಗಳಲ್ಲಿ ಏದ್ಯಾತದ್ಯ ಏರುವುದಕ್ಕೆ ಒಂದು ಕಾರಣ ಏನೆಂದರೆ ಸರ್ಕಾರದವರು ವಿಪರೀತವಾಗಿ ತೆರಿಗೆಗಳನ್ನು ಹಾಕುತ್ತಿರುವುದೂ ಕೂಡ ಇದಕ್ಕೆ ಕಾರಣವಾಗಿದೆ ಎಂದು ಹೇಳುತ್ತೇನೆ. ಒಬ್ಬನೇ ವ್ಯಕ್ತಿ ಒಂದು ಕಡೆ ಇನ್‌ಕಂ ಟ್ಯಾಕ್ಸ್‌ನ್ನು ಕೊಡುತ್ತಿದ್ದರೆ ಅವನೇ ಮತ್ತೊಂದು ಕಡೆಯಲ್ಲಿ ಸೇಲ್ಸ್ ಟ್ಯಾಕ್ಸ್‌ನ್ನೂ ಕೊಡಬೇಕು. ಇನ್ನೊಂದು ಕಡೆಯಲ್ಲಿ ಎಕ್ಸ್‌ಸೈಜ್ ಟ್ಯಾಕ್ಸ್ ಮತ್ತೊಂದು ಕಡೆಯಲ್ಲಿ ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್-ಆಕ್ಟ್ರಾಯಿ ಹೀಗೆ ಒಂದಲ್ಲ ಹತ್ತಾರು ತೆರಿಗೆಗಳನ್ನು ಕೊಡಬೇಕಾಗುತ್ತದೆ. ಇದರಿಂದಲೂ ಬೆಲೆಗಳು ಏರುವುದಕ್ಕೆ ಅವಕಾಶವಿದೆ. ಇದನ್ನು ಕಡಮೆ ಮಾಡುವುದಕ್ಕೆ ಸಾಧ್ಯವಿಲ್ಲವೇ ಎಂಬುದನ್ನು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಅಲೋಚನೆ ಮಾಡಬೇಕಾಗಿದೆ. ನಾಳೆ ದೆಹಲಿಯಲ್ಲಿ ಮುಖ್ಯ ಮಂತ್ರಿಗಳ ಸಮ್ಮೇಳನ ಅಲ್ಲಿ ನಡೆಯುತ್ತಿದೆ, ಅಲ್ಲಿ ರಾಜ್ಯಮಟ್ಟದಲ್ಲಿ ಹೀಗೆ ಮನಸ್ಸಿಗೆ ಬಂದಹಾಗೆ ಈ ತೆರಿಗೆಗಳನ್ನು ಏರಿಸುತ್ತಿರುವುದರಿಂದ ಸಾಮಾನುಗಳ ಧಾರಣೆ ವಾಸಿಯೂ ಏರುತ್ತಾ ಹೋಗುತ್ತದೆ ಅದನ್ನು ಕಡಮೆ ಮಾಡುವುದಕ್ಕೆ ಮಾರ್ಗಗಳೇನು ಎಂಬುದನ್ನು ಅವರು ಅಲ್ಲಿ ಚರ್ಚೆ ಮಾಡಿ ಕಂಡುಹಿಡಿಯಬೇಕಾಗ್ಯು ಅಗತ್ಯ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಆಯಿತು, ಮಾನ್ಯ ಸದಸ್ಯರು ಹೇಳುತ್ತಿರುವಂತೆ ತೆರಿಗೆಗಳನ್ನು ಕಡಮೆ ಮಾಡೋಣ. ಆದರೆ ರಾಜ್ಯದಲ್ಲಿ ಸಾರ್ವತ್ರಿಕವಾಗಿ ಜರುಗಬೇಕಾದ ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರ ಹಣವನ್ನು ಎಲ್ಲಿಂದ ತರಬೇಕು?

ಶ್ರೀ ಟಿ. ಆರ್. ಶಾಮಣ್ಣ.—ಟ್ಯಾಕ್ಸ್‌ಗಳನ್ನು ಹೆಚ್ಚು ಮಾಡಬಾರದು ಎಂದು ಹೇಳುತ್ತಿರುವಾಗ ನಾವು ಈ ಸಾಮಾನುಗಳ ಉತ್ಪತ್ತಿಯನ್ನು ಹೆಚ್ಚಿಸಿದರೆ—ಇದನ್ನು ಒಂದು ವಾರ್ ಫುಟಿಂಗಿನಲ್ಲಿ ನಡೆಸಿಕೊಂಡು ಬಂದರೆ ಆಗ ಸ್ವಾಭಾವಿಕವಾಗಿ ಸಾಮಾನುಗಳ ಧಾರಣೆ ಏರುವುದಕ್ಕೆ ಅವಕಾಶವಿರುವುದಿಲ್ಲ. ಅದಾದ ನಂತರ ಸರ್ಕಾರದವರು ಈ ಹಿಂದೆ ಏನೊಂದು ತೆರಿಗೆಗಳನ್ನು ಹಾಕಿದ್ದರೋ ಅವುಗಳನ್ನೇ ಕಟ್ಟುನಿಟ್ಟಾಗಿ ವಸೂಲ್ಮಾಡುವುದಕ್ಕೆ ಕ್ರಮ ಕೈಗೊಂಡಿದ್ದರೆ ಅವರು

ತೆರಿಗೆಯನ್ನು ಪರಿಸಬೇಕಾದ ಅಗತ್ಯವೇ ಬರುತ್ತಿರಲಿಲ್ಲ. ನ್ಯಾಯವಾಗಿ ತೆರಿಗೆಯನ್ನು ಕೊಡಬೇಕಾದಂಥ ಕೆಲವರು ಕೊಡದೆ ಲಂಚರುಷತ್ತುಗಳನ್ನು ಕೊಟ್ಟು ತಪ್ಪಿಸಿಕೊಂಡಿದ್ದಾರೆ, ಇನ್ನು ಕೆಲವರು ಕೊಡುವುದರಲ್ಲಿ ಪೂರ್ಣವಾಗಿ ಕೊಡದೆ ಆದರಲ್ಲಿ ಬಹು ಭಾಗವನ್ನು ಕದಿಯತಕ್ಕವರೂ ಇದ್ದಾರೆ. ಇದಕ್ಕೆಲ್ಲಾ ಕಾರಣ ಲಂಚದ ಪ್ರಭಾವ ಎಂದರೆ ತಪ್ಪಾಗಲಾರದು. ನರ್ಕಾರದವರು ವಿಧಿಸಿರತಕ್ಕದ್ದನ್ನು ಸರಿಯಾಗಿ ವಸೂಲ್ಮಾಡಿದರೆ ಹಾಲಿ ಅವರಿಗೆ ಬರತಕ್ಕ ವರಮಾನಕ್ಕಿಂತ ಶೇ: 25—35 ರಷ್ಟು ಜಾಸ್ತಿ ಉತ್ಪತ್ತಿ ಬರುತ್ತದೆ. ಅಂದರೆ 7—8 ಕೋಟಿ ರೂಪಾಯಿಗಳ ವರಮಾನ್ನ ಹೆಚ್ಚಿದಂತಾಯಿತು. ಅಷ್ಟು ಸಾಲದೆ ಒಂದು ಬಾಬಿನಲ್ಲಿ!

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ಪ್ರೊಡಕ್ಷನ್ ಯಿಂಚಿನ ವೇಗದಲ್ಲಿ ಒಂದು ವಾರ್ ಫುಟಿಂಗ್ ಮೇಲೆ ನಡೆಯಬೇಕೆಂದು ಹೇಳುತ್ತಿರುವುದೇನೋ ಸರಿಯೇ. ಆದರೆ ಆಗಾಗ ಅಲ್ಲಲ್ಲೇ ನಡೆಯುತ್ತಿರುವ ರಾಕೌಟ್ ಮತ್ತು ಸ್ಟ್ರೈಕ್ ಇವುಗಳಿಗೆಲ್ಲಾ ಅವರೇನು ಹೇಳುತ್ತಾರೆ ಶ್ರೀ ಶ್ಯಾಮಣ್ಣನವರು ಅವುಗಳು ನಡೆಯಬಾರದೆಂದು ಹೇಳುತ್ತಾರೋ? ಹೇಗೆ?

ಶ್ರೀ ಟಿ. ಆರ್. ಶಾಮಣ್ಣ.—ಈಗ ನಾನೂ ಆದನ್ನೇ ಹೇಳಬೇಕೆಂದಿದ್ದೆ. ಸಾಮಾನುಗಳ ಉತ್ಪನ್ನ ಅಗತ್ಯವಾಗಿ ಆಗಲೇಬೇಕು. ಆಗದಿದ್ದರೆ ದೇಶ ಖಂಡಿತ ಉದ್ಧಾರವಾಗುವುದಿಲ್ಲ. ನಾನು ಮೊನ್ನೆ ಕಲ್ಕತ್ತಾಕ್ಕೆ ಹೋಗಿದ್ದೆ. ಅಲ್ಲಿಯ ಕೆಲವು ವಿಚಾರಗಳನ್ನು ತಿಳಿದುಕೊಂಡು ಬಂದಿದ್ದೇನೆ. ಅಲ್ಲಿ ಈ ಸ್ಟ್ರೈಕ್ ಮತ್ತು ರಾಕೌಟುಗಳ ದೆಶೆಯಿಂದ ಅನೇಕ ಫ್ಯಾಕ್ಟರಿಗಳನ್ನು ಮುಚ್ಚಿರಾಗಿದೆ. ಅಲ್ಲಿ ಜನರ ಜೀವನ ಬಹಳ ಆಸ್ತವ್ಯಸ್ತವಾಗಿದೆ. ಅದಕ್ಕಾಗಿ ನಾನು ಹೇಳುವುದಿಷ್ಟೆ. ಅವರಿಗೆ ಹೊಟ್ಟೆ ತುಂಬಾ ಕೊಡಿ—ಅದಕ್ಕೆ ಸರಿಯಾಗಿ ಅವರು ಕೆಲಸ ಮಾಡಿ ಉತ್ಪತ್ತಿ ತೋರಿಸದಿದ್ದರೆ ಅವರನ್ನು ಜೈಲಿಗೆ ಹಾಕಿ ಏನು ಶಿಕ್ಷೆ ಬೇಕಾದರೂ ಅವರಿಗೆ ಕೊಡಿ ಅದರ ಬಗ್ಗೆ ನನ್ನ ಬಿನ್ನಾಭಿಪ್ರಾಯವಿಲ್ಲ. ಕಮ್ಯುನಿಸ್ಟ್ ನರ್ಕಾರಗಳು ಇರತಕ್ಕ ಕಡೆಗಳಲ್ಲಿ...

ಶ್ರೀ ಎಚ್. ಎಂ. ಚನ್ನಬಸಪ್ಪ.—ಕಮ್ಯುನಿಸ್ಟ್ ರಾಷ್ಟ್ರಗಳಲ್ಲಿ ಈ ಸ್ಟ್ರೈಕುಗಳಿಗೆ ಅವಕಾಶವೇ ಇರಲ್ಲಾ.

ಶ್ರೀ ಎಂ. ಎಸ್. ಕೃಷ್ಣನ್.—ಅಲ್ಲಿ ಕ್ಲಾಸ್ ಕಾನ್ಫ್ಲಿಕ್ಟ್ ಇಲ್ಲ—ಇಲ್ಲಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಅಲ್ಲಿ ಆ ದೇಶವೆಲ್ಲಾ ಒಂದು ದೊಡ್ಡ ರಾಕಪ್ ಇದ್ದಂತೆ ಇಲ್ಲವೆ?

ಶ್ರೀ ಟಿ. ಆರ್. ಶಾಮಣ್ಣ.—ಮುಖ್ಯವಾಗಿ ನಾನು ಹೇಳುತ್ತಿರುವುದು ಜನರಲ್ಲೂ ಕೂಡ ಈ ಸ್ಟ್ರೈಕ್ ಮಾಡತಕ್ಕ ಮನೋಭಾವ ಹೋಗಿ ಪ್ರೊಡಕ್ಷನ್ ಕಡೆಗೆ ಅವರ ಗಮನ ಹರಿಯದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ. ಅಂಥಾ ಒಂದು ವಾತಾವರಣವನ್ನು ಸರಕಾರದವರ ಉಂಟು ಮಾಡಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಂದರೆ ನಾವು ಅವರು 10 ಕೇಳಿದಾಗ 10ನ್ನು ಕೊಟ್ಟರೆ ಅವರು ಮತ್ತೇ 15 ಕೇಳುತ್ತಾರೆ, ಅದನ್ನೂ ಕೊಟ್ಟಾಗ ಅವರು ಮತ್ತೆ 20 ಕೇಳುತ್ತಾರೆ—ಇದಕ್ಕೆ ಕೊನೆ ಎಲ್ಲಿದೆ?

ಶ್ರೀ ಟಿ. ಆರ್. ಶಾಮಣ್ಣ.—ನಿಜ. ನರ್ಕಾರದವರು ಈ ಬೆಲೆಗಳನ್ನು ಎಲ್ಲಿಯವರೆಗೂ ತಡೆಗಟ್ಟುವುದಿಲ್ಲವೋ ಅಲ್ಲಿಯವರೆಗೂ ಈ ರೋಗ ನಿಲ್ಲುವುದಿಲ್ಲ. ಕೆಲಸ ಮಾಡತಕ್ಕವನಿಗೂ ಮತ್ತು ದೇಶದ ಉತ್ಪನ್ನಗಳನ್ನು ಹೆಚ್ಚಿಸತಕ್ಕವರಿಗೂ ಅವರ ಕಷ್ಟಕ್ಕೆ ತಕ್ಕಂತೆ ಕೊಡಲೇಬೇಕು. ಅವರ ಉತ್ಪನ್ನಕ್ಕೆ ತಗುಲುವ ವೆಚ್ಚವನ್ನು ಅವರಿಗೆ ಕೊಡದ್ದಿದರೆ ಅದು ಹೇಗೆ ಸಾಧ್ಯ? ಬೆಳೆಯತಕ್ಕವನನ್ನೂ ಮತ್ತು ಬಳೆಸತಕ್ಕವನನ್ನೂ ನರ್ಕಾರದವರು ಒಂದೇ ದೃಷ್ಟಿಯಿಂದ ನೋಡಬೇಕು. ಒಂದು ಯುದ್ಧ ನಡೆಯ ತಕ್ಕ ಸಂದರ್ಭದಲ್ಲಿ ಇದು ನನ್ನ ದೇಶ ಇವರು ನಮ್ಮ ಜನರು ಇವರಿಗೆ ನಾನು ಹೋರಾಡಲೇ ಬೇಕು ಎಂಬ ಭಾವನೆ ಹೇಗೆ ಆ ಸೈನಿಕರಲ್ಲಿ ಮೂಡುತ್ತದೆಯೋ ಹಾಗೇ ಈ ಜನರಲ್ಲೂ ಮೂಡಬೇಕು. ಅವೇ ತತ್ವ ಇದರಲ್ಲೂ ಅಡಕವಾಗಿದೆ.

ಆದರೆ ಇಲ್ಲಿ ನನ್ನ ಕಳವಳ ಏನೆಂದರೆ ರಾಜ್ಯ ಸರ್ಕಾರಕ್ಕೆ ನಗಟು ವ್ಯಾಪಾರವನ್ನು ಕೈಗೊಂಡರೆ ಇವರಿಗೆ ಭಾರಿ ಬಂಡವಾಳ ಬೇಕು—ಅದು ಇವರಲ್ಲ. ಇನ್ನು ಎರಡನೆಯದಾಗಿ ರಾಜ್ಯದಲ್ಲಿ ಒಳ್ಳೆ ಉತ್ತಮ ಬೆಳೆಯಾಗಿರಬೇಕು—ಅದೂ ಕೂಡ ಇಲ್ಲ. ಇಲ್ಲಿ ಹಣವೂ ಇಲ್ಲ—ಧಾನ್ಯಗಳ ಉತ್ಪನ್ನವೂ ಕಡಮೆ ಅಂದಾಗ ಏನು ಮಾಡುವುದು? ಸಾಲದ್ದಕ್ಕೆ ಇವರು ಪೂರ್ತಿಯಾಗಿ ಸಮಾಜವಾದಿಗಳೂ ಅಲ್ಲ—ಅತ್ತ ರಾಗಿ ಕಮ್ಯುನಿಸ್ಟರೂ ಅಲ್ಲ...

ಶ್ರೀ ಎಂ. ಎಸ್. ಕೃಷ್ಣನ್.—ಇನ್ನು ನಿಮ್ಮ ಪಕ್ಷದ ಧೋರಣೆಯೇನಾಗಿದೆ ?

ಶ್ರೀ ಟಿ. ಆರ್. ಶಾಮಣ್ಣ.—ನಾನು ಹೇಳುತ್ತಿರುವುದು, ಮನಸ್ಸಿನ ಪರಿವರ್ತನೆಯಾಗದೆ ಕಮ್ಯೂನಿಸ್ಟ್ ಎಂದರೇನು ಅರ್ಥ ? ಕತ್ತೆಗೆ ಹುಲಿ ಬಣ್ಣದ ಚರ್ಮ ಹೊದಿಸಿದಂತಾಗುವುದಿಲ್ಲವೇ ಎಂದು ಕೇಳುತ್ತೇನೆ. ಜನರ ಮನ ಸಂಪೂರ್ಣವಾಗಿ ಪರಿವರ್ತನೆಯಾದರೆ ಅವರು ಯಾವ ಮಾರ್ಗವನ್ನಾದರೂ ಅನುಸರಿಸಲಿ ಅದರ ಬಗ್ಗೆ ನನ್ನ ಟೀಕೆ ಇಲ್ಲ. ಆದರೆ ನಾನು ಈ ಸಂದರ್ಭದಲ್ಲಿ ಹೇಳಬೇಕೆಂದಿರುವುದಿಷ್ಟೆ : ಸರ್ಕಾರದವರು ಒಂದು ಕಾನೂನನ್ನಾದರೂ ತಂದು ಈ ದೇಶದ ಅಗತ್ಯಗಳನ್ನು ನೀಗತಕ್ಕ ಮನುಗಳೇನಿವೆ ಅವುಗಳನ್ನು ಜನರು ಒಂದು ವಾರ್ ಫುಟಿಂಗ್‌ನಲ್ಲಿ ನಡೆಸುವುದಕ್ಕೆ ಪ್ರಯತ್ನ ಮಾಡಬೇಕು—ಅವರಿಗೆ ಅಗತ್ಯವಾದ ಎಲ್ಲಾ ಸೌಲಭ್ಯಗಳನ್ನೂ ಕೊಡಬೇಕೆಂದು ಹೇಳುತ್ತೇನೆ. ಹಾಗೆ ಮಾಡಿ ದೇಶದಲ್ಲಿ ಉತ್ಪನ್ನವಾದ್ದನ್ನು ಸರಿಯಾದ ರೀತಿಯಲ್ಲಿ ವಿತರಣೆ ಮಾಡತಕ್ಕದ್ದು ಎರಡನೇ ಮುಖ್ಯವಾದ ಕೆಲಸ ಎಂದು ಹೇಳುತ್ತೇನೆ. ಹೀಗೆ ಮಾಡಿದರೆ ಕ್ರಮೇಣ ಬೆರೆಗಳನ್ನು ನಾವು ತಡೆಗಟ್ಟುವುದಕ್ಕೆ ಖಂಡಿತ ಸಾಧ್ಯವಾಗುತ್ತದೆಂದು ನಾನು ಹೇಳುತ್ತೇನೆ. ಈ ತೀರ್ಮಾನಕ್ಕೆ ಸರ್ಕಾರದವರು ಬರುವತನಕ ಈ ಧಾರಾಣೆವಾಸಿಗಳು ಖಂಡಿತ ಕಡಮೆಯಾಗುವುದಿಲ್ಲ. ನಮಗೆ ಈ ಪಟ್ಟಣಗಳಲ್ಲಾದರೂ ಕೂಲಿಯ ಜನರು ಸಿಕ್ಕುತ್ತಾರೆ ಹಳ್ಳಿಗಳಲ್ಲಿ ಸಿಕ್ಕುತ್ತಿಲ್ಲ. ಒಂದು ಹೆಣ್ಣಾಳಿಗೆ ದಿನಕ್ಕೆ ಊಟ ಹಾಕಿ ಮೂರು ರೂಪಾಯಿ ಕೂಲಿ ಕೊಡುತ್ತೇವೆಂದರೂ ಅಳುಗಳು ಈ ದಿವಸ ಅಲ್ಲಿ ಸಿಕ್ಕುತ್ತಿಲ್ಲ. ಒಂದು ಗಂಡಾಳಿಗೆ ಐದು ರೂಪಾಯಿ ಕೂಲಿ ಕೊಟ್ಟು ಊಟಕ್ಕೂ ಹಾಕಬೇಕು. ಹೀಗೆ ಹಳ್ಳಿಯವರು ದುಬಾರಿ ಕೂಲಿಗಳನ್ನು ಕೊಟ್ಟು ನಮಗೆ ಅಗತ್ಯವಾದ ಧಾನ್ಯಗಳಲ್ಲಿ ಅಗ್ಗದದರಲ್ಲಿ ಎಷ್ಟು ಕೇಳಿದರೆ ಅಷ್ಟನ್ನೂ ಬೆಳೆದು ಒದಗಿಸುವುದಕ್ಕೆ ಅವರಿಂದ ಸಾಧ್ಯವಿಲ್ಲ. ಈ ಅಂಶ ಸರ್ಕಾರದವರು ಮನಗಾಣಬೇಕು. ಹಳ್ಳಿಗಳ ಪರಿಸ್ಥಿತಿ ಬಹಳ ಕಠಿಣವಾಗಿದೆ. ಆದರೆ ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರೆ ಮಂತ್ರಿಗಳು ಯಾರೂ ತಪ್ಪು ತಿಳಿದುಕೊಳ್ಳಬಾರದು. ಈ ಬಾಬಿಗೆ ಇನ್ನೂ ಹೆಚ್ಚಿನ ದಕ್ಷತೆಯುಳ್ಳ ಒಬ್ಬ ಪ್ರತ್ಯೇಕ ನಚಿವರೇ ಇದಕ್ಕೆ ಬೇಕು. ಆದರೆ ಶ್ರೀಮಾನ್ ಚನ್ನಬಸಪ್ಪನವರು ರಾಯಚೂರಿಗಿದ್ದರೂ ಅವರು ಬಹಳ ಸಿದ್ಧಾಂತರು—ಆದ್ದರಿಂದ ಅವರು ಬೇಗ ಜನರನ್ನು ಮೇಲೆಳೆದುಕೊಳ್ಳುತ್ತಾರೆ. ಆದುದರಿಂದ ಇದಕ್ಕೆ ಸ್ವಲ್ಪ ಇನ್ನೂ ಚಮತ್ಕಾರವಾದ ಒಬ್ಬ ಬುದ್ಧಿವಂತರು ಅಂದರೆ ನಮ್ಮ ಶ್ರೀಮಾನ್ ಸಿದ್ಧವೀರಪ್ಪನವರಂತ ಒಬ್ಬರು ದಕ್ಷರು ಇದಕ್ಕೆಬೇಕು. ಶ್ರೀಮಾನ್ ಸಿದ್ಧವೀರಪ್ಪನವರಿಗೆ ಬೇಕಾದಷ್ಟು ಥಾಕತ್ತಿದೆ ಶ್ರೀಮಾನ್ ಚನ್ನಬಸಪ್ಪನವರು ಕೆಲವು ಸಂದರ್ಭಗಳಲ್ಲಿ ಕಠಿಣವಾಗಿ ವರ್ತಿಸಿ ಎದುರು ಹಾಕಿಕೊಳ್ಳುತ್ತಾರೆ. ಆದುದರಿಂದ ಶ್ರೀ ಸಿದ್ಧವೀರಪ್ಪನವರೇ ಉತ್ತಮವೆಂದು ಕಾಣುತ್ತದೆ, ಅವರಿಗೆ ಒಳ್ಳೆಯ ದಕ್ಷತೆಯಿದೆ, ಆಹಾರ ಇರಾಖೆ ಪೋರ್ಟ್‌ಫೊಲಿಯೋ ದೊಡ್ಡದು, ಮುಖ್ಯವಾದುದು, ಅದನ್ನು ಅವರಿಗೆ ವಹಿಸಿದರೆ ಒಳ್ಳೆಯದು. ಈಗ ಬರಗಾಲದ ಜೊತೆಗೆ ಪವರ್ ಕಟ್ ಬೇರೆ ಮಾಡಿದ್ದಾರೆ, ಇದರಿಂದ ಕೈಗಾರಿಕಾ ಉತ್ಪತ್ತಿಗೆ ಸಹ ಕಡಿಮೆಯಾಗುವುದು, ಪ್ರಕೃತಿ ವಿರೋಧವಾಗಿದೆ, ಎಲ್ಲರನ್ನೂ ಎದುರುಹಾಕಿಕೊಳ್ಳುವ ಪರಿಸ್ಥಿತಿ ಬರುತಿದೆ. ಯುದ್ಧದ ಪರಿಸ್ಥಿತಿಯಲ್ಲಿ ತೆಗೆದುಕೊಳ್ಳುವಂತೆ ಸೂಕ್ತ ಕ್ರಮ ತೆಗೆದುಕೊಂಡು ಬರಗಾಲದ ಸಮಸ್ಯೆಯನ್ನು ಬಗೆಹರಿಸಬೇಕು. ಈಗ ಹೋಲಸೇರ್ ಟ್ರೇಡಿಂಗ್ ಸರಕಾರ ವಹಿಸಿಕೊಳ್ಳಲಿದೆ, ರಬಿ ಬೆಳೆ ಬಂದ ನಂತರ ಈ ಕೆಲಸ ಕೈಕೊಳ್ಳುವುದಾಗಿ ಹೇಳುತ್ತಿರುವಾಗ ರಬಿ ಬೆಳೆ ಹಿಂದೆ ಬಿದ್ದಿದೆ. ಆದುದರಿಂದ ಇದನ್ನು ಹೇಗೆ ವಹಿಸಿಕೊಂಡು ಆಹಾರಧಾನ್ಯ ಶೇಖರಿಸುವೆರಿ ಎಂಬುದನ್ನು ಧೀರ್ಘವಾಗಿ ಯೋಚಿಸಬೇಕು. ನೀತಿಯ ಬಗ್ಗೆ ವಿರೋಧವಿಲ್ಲ. ಆದರೆ ಕಾರ್ಯಗತ ಮಾಡುವ ಶಕ್ತಿ, ಇದರಲ್ಲಿರುವ ನಂಬಿಕೆ ಸಾಲದು ಎಂದು ಹೇಳಬೇಕಾಗಿದೆ. ಇದು ಅತಿ ಮುಖ್ಯವಾದ ವಿಚಾರ. ಅರ್ಧ ಗಂಟೆಯಲ್ಲಿ ಚರ್ಚೆಮಾಡುವುದು ಆಥವ ನಲಹೆ ಕೊಡುವುದು ಕಷ್ಟ. ಆದುದರಿಂದ ಇದಕ್ಕೇ ಒಂದು ಸಭೆ ಕರೆದು ಕೆಲವು ದಿವಸ ಈ ವಿಷಯವನ್ನು ಚರ್ಚೆಮಾಡಬೇಕು. ಒಟ್ಟಿನಲ್ಲಿ ಹೇಳುವುದಾದರೆ ಜನರ ಸಹನೆ ಮೀರುತ್ತಿದೆ, ಬೇರೆ ಕಡೆ ಇಂಥ ಪರಿಸ್ಥಿತಿ ಬಂದಿದ್ದರೆ ಜನರು ದಂಗೆ ಏಳುತ್ತಿದ್ದರು. ಈಗ ಜನರ ಸಹನೆಯನ್ನು ಪರೀಕ್ಷೆ ಮಾಡಲು ಅವಕಾಶವಿಲ್ಲ. ಇದು ಆಂದೋಳನಕ್ಕೆ ಅವಕಾಶ ಕೊಡುವುದು. ಆದಷ್ಟು ಬೇಗ ಈ ಸಮಸ್ಯೆಯನ್ನು ಬಗೆಹರಿಸಬೇಕು, ಇಲ್ಲದಿದ್ದರೆ ಕ್ಷೇಮವಾಗುವುದಿಲ್ಲ ಎಂದು ಇಷ್ಟು ಹೇಳಿ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಭಾಷಣ ಮುಗಿಸುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಶ್ರೀ ಶ್ರೀರಾಮುಲುರವರ ನಿರ್ಣಯವೊಂದಿದೆ, ಆದೂ ಸ್ವಲ್ಪ ಹೆಚ್ಚು ಕಡಮೆ ಇದೇ ರೀತಿ ಇದೆ, ಅದನ್ನೂ ಮಂಡಿಸಿ ಎರಡರಮೇಲೂ ಮಾತನಾಡಿದರೆ ಉತ್ತರ ಕೊಡಲು ಅನುಕೂಲವಾಗುವುದು.

ಅಧ್ಯಕ್ಷರು.—ಶ್ರೀ ಶಾಮಣ್ಣನವರಿಗೆ ಮಾತನಾಡಲು 30 ನಿಮಿಷ ಅವಕಾಶ ಕೊಟ್ಟಿದ್ದರೂ ಅವರು ಜಾಸ್ತಿ ಅವಕಾಶ ತೆಗೆದುಕೊಂಡರು. ಆದುದರಿಂದ ಮಾನ್ಯ ಸದಸ್ಯರಿಗೆ ಹೆಚ್ಚು ಅವಕಾಶ ಕೊಡಲು ನಾನು ಶ್ರೀ ಶ್ರೀರಾಮುಲುರವರು ತಮ್ಮ ನಿರ್ಣಯವನ್ನು ಮಂಡಿಸಬೇಕೆಂದು ಸೂಚಿಸುತ್ತೇನೆ.

(ii) re : Vigilance over the anti-social elements in food articles and to arrest rise of prices of such commodities.

ಶ್ರೀ ಕೆ. ಶ್ರೀರಾಮುಲು (ಗಾಂಧಿನಗರ).—ನನ್ನ ನಿರ್ಣಯ ಈ ರೀತಿ ಇದೆ, "ಅನೌಪಚಾರಿಕ ಪಡಿತರ ಪದ್ಧತಿಯ ಮೇರೆಗೆ ಸಾರ್ವಜನಿಕ ವಿತರಣೆಗಾಗಿ ಆಹಾರ ಧಾನ್ಯಗಳಲ್ಲಿ ವ್ಯವಹರಿಸ ತ್ತಿದ್ದು ಸದರಿ ಪದಾರ್ಥಗಳನ್ನು ಅಕ್ರಮವಾಗಿ ಸಂಗ್ರಹಿಸುವ ಹಾಗೂ ಕಲಬೆರಕೆ ಮಾಡುವಂಥ ಸಮಾಜ ಘಾತುಕ ವ್ಯವಹಾರಗಳಲ್ಲಿ ತೊಡಗಿರುವವರ ಬಗ್ಗೆ ಸರಕಾರದವರು ಕಟ್ಟುನಿಟ್ಟಾದ ಜಾಗರೂಕತೆ ವಹಿಸಿ ಅವರನ್ನು ನಿರ್ಮೂಲುಗೊಳಿಸುವ ದೃಷ್ಟಿಯಿಂದ ವಾಸ್ತವಿಕ ಕ್ರಮ ಕೈಕೊಳ್ಳುವ ಮೂಲಕ ಸದರಿ ಪದಾರ್ಥಗಳ ಬೆಲೆಗಳ ಏರಿಕೆಯನ್ನು ತಡೆಗಟ್ಟಬೇಕೆಂದು ಈ ಸಭೆಯವರು ಅಭಿಪ್ರಾಯ ಪಡುತ್ತಾರೆ,"

ಅಧ್ಯಕ್ಷರು.—ಮಾನ್ಯ ಸದಸ್ಯರ ನಿರ್ಣಯ ಈ ರೀತಿ ಇದೆ.

ಅನೌಪಚಾರಿಕ ಪಡಿತರ ಪದ್ಧತಿಯುಮೇರೆಗೆ ಸಾರ್ವಜನಿಕ ವಿತರಣೆಗಾಗಿ ಆಹಾರ ಧಾನ್ಯಗಳಲ್ಲಿ ವ್ಯವಹರಿಸುತ್ತಿದ್ದು ಸದರಿ ಪದಾರ್ಥಗಳನ್ನು ಅಕ್ರಮವಾಗಿ ಸಂಗ್ರಹಿಸುವ ಹಾಗೂ ಕಲಬೆರಕೆ ಮಾಡುವಂಥಹ ಸಮಾಜಘಾತುಕ ವ್ಯವಹಾರಗಳಲ್ಲಿ ತೊಡಗಿರುವವರ ಬಗ್ಗೆ ಸರಕಾರದವರು ಕಟ್ಟುನಿಟ್ಟಾದ ಜಾಗರೂಕತೆ ವಹಿಸಿ ಅವರನ್ನು ನಿರ್ಮೂಲನಗೊಳಿಸುವ ದೃಷ್ಟಿಯಿಂದ ವಾಸ್ತವಿಕ ಕ್ರಮ ಕೈಕೊಳ್ಳುವ ಮೂಲಕ ಸದರಿ ಪದಾರ್ಥಗಳ ಬೆಲೆಗಳ ಏರಿಕೆಯನ್ನು ತಡೆಗಟ್ಟಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ.

ಈ ನಿರ್ಣಯ ಮಂಡಿಸಲಾಗಿದೆ.

†ಶ್ರೀ ಕೆ. ಶ್ರೀರಾಮುಲು (ಗಾಂಧಿನಗರ).—ಮುಖ್ಯವಾಗಿ ಭ್ರಷ್ಟಾಚಾರದಿಂದ ಕಲಬೆರಕೆ ಮಾಡಿ ಪದಾರ್ಥಗಳನ್ನು ಮಾರಾಟಮಾಡುತ್ತಿರುವುದರಿಂದ ವಿಧಿಯಿಲ್ಲದೆ ಸಾರ್ವಜನಿಕರು ಅದನ್ನು ತಿನ್ನಬೇಕಾಗಿದೆ, ಇದರಿಂದ ಸಣ್ಣ ಮಕ್ಕಳಿಗೆ ಕಣ್ಣು ಕಾಣದಂತಾಗಿರುವ ನಿದರ್ಶನಗಳಿವೆ. ಹಿಂದೆ ಆಡಳಿತ ನಡೆಸಿದವರು ಇದರ ಬಗ್ಗೆ ಸರಿಯಾದ ಕಾರ್ಯಕ್ರಮ ಕೈಕೊಳ್ಳದೆ ಹೋದುದರಿಂದ ಇಂದು ಆಹಾರ ಪದಾರ್ಥಗಳ ಬೆಲೆ ವಿಪರೀತ ಏರಲು ಅವಕಾಶವಾಗಿ ಜನತೆಗೆ ತೊಂದರೆಯಾಗುತ್ತಿದೆ. ಈಗ ಎರ್ರಾ ಜವಾಬ್ದಾರಿಯನ್ನು ನಮ್ಮ ಮೇಲೆ ಹೊರಿಸಿದ್ದಾರೆ. ಈ ಸಂದರ್ಭದಲ್ಲಿ ಭ್ರಷ್ಟಾಚಾರದ ಬಗ್ಗೆ ಒಂದೆರಡು ನಿದರ್ಶನವನ್ನು ಕೊಡುತ್ತೇನೆ. ಇತ್ತೀಚೆಗೆ ಹೊಸದಾಗಿ ರೇಷನ್ ಕಾರ್ಡು ಕೊಟ್ಟರು. ನಮ್ಮ ಮನೆಯ ಕಾರ್ಡಿನಲ್ಲಿ ಮೂರು ಜನರನ್ನು ಕಡಮೆ ಮಾಡಿದ್ದಾರೆ, ಕೇಳಿದರೆ ಮನೆಗೆ ಬಂದು ನೋಡುವುದಾಗಿ ಹೇಳುತ್ತಾರೆ. ಸಾಗರ್ ಟಾಕೀಸಿನಲ್ಲಿ ಕೆಲಸ ಮಾಡುವವರ ಮನೆಗೆ ಹೋಗಿ ಹಣ ಕೊಟ್ಟರೆ ಹಿಂದಿನ ಕಾರ್ಡಿನಲ್ಲಿದ್ದವರನ್ನು ರೇಷನ್ ಕಾರ್ಡಿಗೆ ಸೇರಿಸುತ್ತೇವೆ, ಇಲ್ಲದಿದ್ದರೆ ಕಿತ್ತುಹಾಕುತ್ತೇವೆ ಎಂದು ಹೇಳಿ ಕೆಲವರ ಹೆಸರುಗಳನ್ನು ತೆಗೆದುಹಾಕಿದ್ದಾರೆ. ಈ ಎರಡು ವಿಚಾರಗಳ ಬಗ್ಗೆ ದೂರು ಕೊಟ್ಟಿದ್ದೇನೆ. ಇಂದು ಕಡ್ಲೆಕಾಯಿ ಎಣ್ಣೆಯನ್ನು ಏಳೂವರೆ ರೂಪಾಯಿಗೆ ಮಾರುತ್ತಿದ್ದಾರೆ, ಇದನ್ನು ತಡೆಯಲು ಕಾನೂನಿಲ್ಲ.

11-00 A. M.

ಇನ್ನು ನಮ್ಮ ಅಧಿಕಾರಿಗಳು ತಪ್ಪು ಮಾಡಿದರೆ, ಅವರನ್ನು ಇಲ್ಲಿಂದ ಎಲ್ಲಿಗೋ ವರ್ಗ ಮಾಡುತ್ತಾರೆ. ಈ ವರ್ಗಾವಣೆಯಿಂದ ಇಡೀ ಸಮಾಜಕ್ಕೆ ಆಗುತ್ತಾ ಇರತಕ್ಕ ಅನ್ಯಾಯವನ್ನು ನಾವು ತಡೆಗಟ್ಟುವುದಕ್ಕೆ ಸಾಧ್ಯವಿಲ್ಲ. ಅಂಥವರಿಗೆ ಶಿಕ್ಷೆ ಆಗಬೇಕಾದರೆ ಕಾನೂನನ್ನು ಬದಲಾವಣೆ ಮಾಡಬೇಕು. ಶಿಕ್ಷೆ ಕೊಡುವುದಕ್ಕೆ ಆಗದಿದ್ದರೆ ಶಿಕ್ಷೆಯಾಗತಕ್ಕ ಯಾವುದೇ ಕಾನೂನಿಂದ ಬಡವನನ್ನು ಉದ್ಧಾರ ಮಾಡುತ್ತೇವೆ, ರಕ್ಷಣೆ ಮಾಡುತ್ತೇವೆಂದು ಹೇಳಿದರೆ ಅದು ಸಾಧ್ಯವಿಲ್ಲದ ಮಾತು.

(ಶ್ರೀ ಕೆ. ಶ್ರೀರಾಮುಲು)

ಕಡಲೆಕಾಯಿ ಎಣ್ಣೆ ರೇಟು ಹಿಂದೆ ಏನು ಇತ್ತು? ಅದು ಈಗ ಏಳುಕಾಲು ರೂಪಾಯಿ ಆಗಿದೆ ಎಂದು ನಾನು ಕೇಳಿದೆ. ಸೌದೆ 70 ಪೈಸೆಗೆ ಮಣ ಇದ್ದುದು ಈಗ ಒಂದೂವರೆ ರೂಪಾಯಿ ಆಗಿದೆ. ಹೀಗೆ ಪ್ರತಿಯೊಂದು ರೇಟು ಕೂಡ ಹೆಚ್ಚು ಆಗಿರುವುದು ಎಂದರೆ ಯಾರೂ ಒಪ್ಪಿಕೊಳ್ಳುವುದಿಲ್ಲ. ಇದು ನಮ್ಮ ಸರ್ಕಾರ ಆಗಿದ್ದರೂ ಒಂದು ಮಾತನ್ನು ಬಿಚ್ಚು ಮನಸ್ಸಿನಿಂದ ಹೇಳುತ್ತೇನೆ. ಕಾರ್ಮಿಕ ಮುಖಂಡನಾಗಿ ಮಾತನಾಡುವಾಗ ಸ್ವಲ್ಪ ಧ್ವನಿ ಹೆಚ್ಚಿಗೆ ಬರಬಹುದು, ಅದರಿಂದ ತಪ್ಪು ಅರ್ಥ ಬರುವುದಿಲ್ಲ. ಮಾನ್ಯ ಸದಸ್ಯರಾದ ಶಾಮಣ್ಣನವರು ಹೇಳಿದ್ದನ್ನು ನಾನು ಹೇಳುತ್ತೇನೆ, ಈ ಖಾತೆ ಏನು ಇದೆ, ಇದರ ಮಂತ್ರಿಗಳಿಗೆ ಬೇರೆ ಉನ್ನತ ಪದವಿ ಕೊಟ್ಟಿರೂ ಚಿಂತೆಯಿಲ್ಲ, ಈ ಆಹಾರಧ ಖಾತೆಗೆ ಬೇರೆ ಮಂತ್ರಿಯಾಗಬೇಕು; ಎನ್ನುವುದಕ್ಕೆ ನನ್ನ ಅಭಿಪ್ರಾಯವೂ ಇದೆ. ಕಳ್ಳತನದಿಂದ ರಾತ್ರಿ ಹೊತ್ತು ಶೇಖರಣೆ ಮಾಡುವುದು, ಗೋಡನ್‌ಗಳಿಂದ ಪದಾರ್ಥಗಳು ಯಾವರೀತಿ ಸಾಗಾಣಿಗೆ ಯಾಗುತ್ತವೆ, ಎನ್ನುವುದನ್ನು ಕಂಡುಹಿಡಿಯಬೇಕಾದರೆ, ಅಧಿಕಾರಿಗಳ ಮೇಲೆ ಭರವಸೆ ಇಡಲು ಸಾಧ್ಯವಿಲ್ಲ; ನೀವೇ ರಾತ್ರಿ ಹೊತ್ತು ಓಡಾಡುವ ಸಂದರ್ಭ ಇದೆ. ರೇಷನ್ ಡಿಪೋಗಳಿಗೆ ನೀವು ಕೊಟ್ಟಿರತಕ್ಕ ರೇಷನ್ ಕಾರ್ಡುಗಳನ್ನು ಪರಿಶೀಲನೆ ಮಾಡಬೇಕು. ಹೊರಗಡೆಯಿಂದ ಬಂದಿರತಕ್ಕವರಿಗೆ ಒಂದು ರೇಷನ್ ಕಾರ್ಡು ಕೊಡುತ್ತಿದ್ದೀರಿ, ಇಲ್ಲದ್ದವರಿಗೆ ಕೊಡುವುದಿಲ್ಲ. ಕೊಡುವವರಿಗೆ 100 ರೇಷನ್ ಕಾರ್ಡನ್ನು ರೇಷನ್ ಕೊಡುತ್ತೀರಿ, ಇನ್ನೊಂದು ಕಡೆ ಎರಡು ಸಾವಿರ ರೇಷನ್ ಕಾರ್ಡನ್ನು ಗೊತ್ತಿರುವವರಿಗೆ ಕೊಡುತ್ತೀರಿ ಇದು ಆರ್ಥವಾಗುವುದಿಲ್ಲ. ಇದು ಬ್ರಷ್ಟಾಚಾರ ಅಲ್ಲದೆ ಏನು! ಇದನ್ನು ಹೇಗೆ ತಡೆಗಟ್ಟುತ್ತೀರಿ? ಇನ್ನೊಂದು ಅಂಶವನ್ನು ತಮ್ಮ ಗಮನಕ್ಕೆ ತರುತ್ತೇನೆ. ಬಡವರು ರೇಷನ್ ಕಾರ್ಡುಗಳನ್ನು ಗಿರಿವಿ ಇಟ್ಟಿದ್ದಾರೆ. ಈ ರೀತಿ ಇಟ್ಟ 400-500 ರೇಷನ್ ಕಾರ್ಡುಗಳ ರೇಷನ್ ಬ್ಲಾಕ್‌ನಲ್ಲಿ ಮಾರಾಟವಾಗುತ್ತಿದೆ ನೀವು ಕೊಡತಕ್ಕಂಥ ಒಂದು ಕೆ. ಜಿ. ರೇಷನ್ ಬ್ಲಾಕ್‌ನಲ್ಲಿ ನಾನ್ ಕಂಜ್ಯೂರ್ ಪದಾರ್ಥ ಎಂದು ಮಾರಾಟವಾಗುತ್ತಿದೆ. ಸರ್ಕಾರದ ಕಡೆಯಿಂದ ಕೋಟಾ ತೆಗೆದು ಕೊಂಡು ಪದಾರ್ಥವನ್ನು ಹೆಚ್ಚಿನ ಬೆಲೆಯಲ್ಲಿ ತೆಗೆದುಕೊಂಡು ಹೋಗಬೇಕು. ನೀವು ಡಿಪೋಗಳಿಗೆ ಕೊಡುವುದು 1 ರೂಪಾಯಿ 10 ಪೈಸೆಯಾದರೆ, ಅದು ಎರಡು ರೂಪಾಯಿ ಬೆಲೆಯಲ್ಲಿ ಮಾರಾಟವಾಗುತ್ತಿದೆ. ಈ ರೀತಿ ಬ್ರಷ್ಟಾಚಾರ ನಡೆಯುತ್ತಿದೆ. ಆದ್ದರಿಂದ ಸಂಬಂಧಪಟ್ಟ ಸರ್ಕಾರದ ಜವಾಬ್ದಾರಿ ಹೊತ್ತ ಮಂತ್ರಿಗಳು ಇದನ್ನು ಗಮನಿಸತಕ್ಕಂಥ ಏರ್ಪಾಡು ಮಾಡುವುದು ಒಳ್ಳೆಯದು.

ಶ್ರೀ ಎಸ್. ಬಂಗಾರಪ್ಪ.—ಒಂದು ವೇಳೆ ನೀವು ಹೇಳಿದ ಹಾಗೆ ಸರ್ಕಾರದವರು ಏರ್ಪಾಡು ಮಾಡದೇ ಹೋದರೆ ಏನು ಮಾಡಬೇಕು ಎಂಬ ಸಲಹೆ ಕೊಡಿ?

ಶ್ರೀ ಕೆ. ಶ್ರೀರಾಮುಲು.—ಏನು ಮಾಡಬೇಕು ಎಂದು ಹೇಳುತ್ತೇನೆ. ನಾವು ನೀವು ಹೇಳಿದ್ದನ್ನು ಜನ 25 ವರ್ಷಗಳಿಂದ ಕೇಳಿಕೊಂಡು ದಡ್ಡರಾಗಿ ಕೂತಿದ್ದಾರೆ. ಅವರು ಅಪರಾಧಿಮಾಡಿದ್ದಾರೆ ಎಂದು ನಾನು ಹೇಳುತ್ತೇನೆ. ನಾವು ಏನನ್ನು ಹೇಳಬಾರದಾಗಿತ್ತೋ ಅದನ್ನೆಲ್ಲಾ ಹೇಳಿ ಸಮಾಜವನ್ನು ಕಟ್ಟುತ್ತೇವೆಂದು ಹೇಳಿದ್ದೇ ಅಪರಾಧ. ಇಲ್ಲಗೆ 1800 ಮೈಲ ದೂರದಲ್ಲಿರುವ ಸಣ್ಣ ರಾಜ್ಯ ಸಿಲೋನ್, ಮಲೇಶಿಯಾ, ಸಿಂಗಪೂರ್, ಇವುಗಳಿಗೆ 1965 ರಲ್ಲಿ ಪೂರ್ಣ ಸ್ವಾತಂತ್ರ್ಯ ಬಂದಿರುವುದು. ಆದರೂ ಕೂಡ 65 ರಿಂದ 71 ನೇ ಇಸವಿಯವರೆಗೆ ಯಾವುದೇ ಪದಾರ್ಥದ ಬೆಲೆಯೂ ಸಹ ಒಂದೂವರೆ ಪಾಯಿಂಟ್‌ಗಿಂತ ಜಾಸ್ತಿ ಆಗಲಿಲ್ಲ. ಅಷ್ಟರಮಟ್ಟಿಗೆ ಅಲ್ಲಿ ಕಟ್ಟುನಿಟ್ಟಾಗಿ ಬೆಲೆಯ ಬಗ್ಗೆ ನಿಗಾದಿಂದ ನೋಡುತ್ತಿದ್ದಾರೆ. ಅಲ್ಲಿ ಚುನಾವಣೆಗಳು ನಡೆಯುತ್ತವೆ ಎಲ್ಲಾ ಪಕ್ಷಗಳು ಸ್ಪರ್ಧೆ ಮಾಡುತ್ತವೆ, ಆದರೂ ಕೂಡ ತಿನ್ನತಕ್ಕ ಪದಾರ್ಥಗಳು, ವಾಸದ ಮನೆಯಿಂದ ಹಿಡಿದು ಅಷ್ಟು ಕಡಿಮೆ ಇರುವುದಕ್ಕೆ ಕಾರಣ ಏನು! ನಮ್ಮಲ್ಲಿ 25 ವರ್ಷಗಳಾದರೂ ಕೂಡ ಆಹಾರ ಪದಾರ್ಥಗಳು ಧಾರಣೆ ಇಷ್ಟು ಜಾಸ್ತಿಯಾಗಿರುವುದಕ್ಕೆ ಕಾರಣ ಏನು! ಕಾರಣ ಏನೆಂದರೆ, ನನ್ನನ್ನು ಸೇರಿಸಿಕೊಂಡು ಹೇಳುತ್ತೇನೆ, ನಾವು ಇಲ್ಲಿಗೆ ಬಂದಾಗ ಪ್ರಮಾಣ ಮಾಡಿರುವುದನ್ನು ಮರೆತುಬಿಟ್ಟಿದ್ದೇವೆ. ಕೆಲವರಲ್ಲಿ ಪ್ರಾಮಾಣಿಕತೆ ಇರಬಹುದು, ಅಧಿಕಾರಿಗಳಲ್ಲಿಯೂ ಇರಬಹುದು, ಮಂತ್ರಿಗಳಲ್ಲಿಯೂ ಇರಬಹುದು, ಇಲ್ಲ ಎಂದು ನಾನು ಹೇಳುವುದಿಲ್ಲ ಆದರೆ ಎಲ್ಲರಿಗೂ ಪ್ರಾಮಾಣಿಕತೆ 100ಕ್ಕೆ 100 ಜನಕ್ಕೆ ಇದ್ದರೆ ಇವತ್ತು ಆಹಾರ ಪದಾರ್ಥಗಳ ಬೆಲೆ ಜಾಸ್ತಿಯಾಗುವುದಕ್ಕೆ ಸಾಧ್ಯವಿರಲಿಲ್ಲ. ಅರನೇ ಒಂದು ಭಾಗದ ಜನ ನಮ್ಮ ದೇಶದಲ್ಲಿ ಮಳೆ ಬಾರದೆ ಕಷ್ಟಕ್ಕೆ ಸಿಕ್ಕಿದ್ದಾರೆ. ಬೆಲೆ ಜಾಸ್ತಿಯಾಗುವುದಕ್ಕೆ ಅದೂ ಒಂದು ಕಾರಣ ಎಂದು ಹೇಳಬಹುದು. ನಾವು ಜನಕ್ಕೆ ಬೇಕಾದಷ್ಟು ಆಹಾರ ಪದಾರ್ಥಗಳನ್ನು ಕೊಡತಕ್ಕ ಯೋಜನೆ ಮಾಡಿದ್ದೇವೆ.

ಯಾವುದೇ ದೇಶ ತನ್ನ ಜನತೆಗೆ ಬೇಕಾದಷ್ಟು ಪದಾರ್ಥಗಳನ್ನು ಒದಗಿಸತಕ್ಕ ಬಗ್ಗೆ ಯೋಚಿಸುವಾಗ ಉಳಿತಾಯವನ್ನು ಉತ್ಪತ್ತಿ ರಂಗದಲ್ಲಿ ನಾವು ಬಳಸಿದ್ದೇವೆಯೇ ಎನ್ನುವುದನ್ನು ಮಾನ್ಯ ಚೆನ್ನಬಸಪ್ಪನವರು ಯೋಚಿಸಬೇಕು. ಕಾರ್ಮಿಕರ ವತಿಯಿಂದ ಹೇಳುತ್ತೇನೆ, ನಮ್ಮ ದೇಶದ ಬಡುಗಡೆ ಯಾಗುವುದಕ್ಕೆ ಮೊದಲು ಅನೇಕ ರಾಜಕೀಯ ಪಕ್ಷಗಳು ಸೇರಿ ಬ್ರಿಟಿಷರನ್ನು ಓಡಿಸಿದರು. ಕೆಲವರು ನಮ್ಮ ದೇಶ ಸ್ವಾತಂತ್ರ್ಯ ವಾಗುದು ಬೇಡ, ಬ್ರಿಟಿಷರೇ ಇರಬೇಕು ಎಂದು ಹೇಳಿದರು ಇದೂ ಸಹ ತಮಗೆ ಗೊತ್ತಿರತಕ್ಕ ವಿಷಯ. ನಾವು ಪದಾರ್ಥಗಳ ಬೆಲೆ ಜಾಸ್ತಿಯಾಗುತ್ತಾ ಇದೆ, ಉತ್ಪಾದನೆ ಕುಗ್ಗುತ್ತಾ ಇದೆ ಎಂದು ಹೇಳುತ್ತೇವೆಯೇ ವಿನಹ ಕೈಗಾರಿಕೆಗಳ ಬಗ್ಗೆ ನಾವು ಏನು ಮಾಡುತ್ತೇವೆ ಎನ್ನುವುದನ್ನು ಪ್ರಾಮಾಣಿಕತೆಯಿಂದ ಪರಿಶೀಲನೆ ಮಾಡಬೇಕಾಗಿದೆ. ಹೀಗೆ ಮಾಡಿದರೆ ದೇಶದಲ್ಲಿರತಕ್ಕ 56 ಕೋಟಿ ಜನ, ಕರ್ನಾಟಕದಲ್ಲಿರತಕ್ಕ 3 ಕೋಟಿ ಜನ ಯಾವತ್ತೂ ನಮ್ಮನ್ನು ನಾವು ರಕ್ಷಣೆ ಮಾಡಿಕೊಳ್ಳುತ್ತೇವೆಯೋ, ಕಷ್ಟಕಾಲದಿಂದ ಉದ್ಧಾರವಾಗುತ್ತೇವೆಯೋ ಎನ್ನುವುದು ಗೊತ್ತಾಗಲಿಲ್ಲ. ಈ ಪ್ರಶ್ನೆ ಇದರಲ್ಲಿ ಅಡಕವಾಗಿದೆ. ರಾಜ್ಯಗಳಲ್ಲಿ ಕೈಗಾರಿಕಾ ಉತ್ಪತ್ತಿಯನ್ನು ಕಡಿಮೆ ಮಾಡಿದರೆ, ಉತ್ಪತ್ತಿಗೆ ಮೋಸ ಮಾಡುವ ರೀತಿಯಲ್ಲಿ ಕೆಲಸ ಮಾಡಿದರೆ ನಿಮಗೆ ಏನು ಶಿಕ್ಷೆಯಾಗುತ್ತದೆಯೋ ಗೊತ್ತಿಲ್ಲ. ಇದರಿಂದ ನೀವು ಉಳಿಯುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ವಿರೋಧ ಪಕ್ಷದವರಾಗಲಿ, ಯಾರೇ ಆಗಲಿ ಬಿಚ್ಚು ಮನಸ್ಸಿನಿಂದಹೇಳುತ್ತೇನೆ. ಆ ಕಡೆ ಇದ್ದವರು ಈ ಕಡೆ ಈಗ ಇಲ್ಲ. ಇದ್ದಾರೆ ನಾಳೆ ಎಲ್ಲರುತ್ತಾರೆ ಎಂದು ಹೇಳುವುದಕ್ಕೆ ಬರುವುದಿಲ್ಲ. ನಿಮ್ಮ ಟೀಕೆ ಅಗತ್ಯ, ಆದರೆ ಟೀಕೆ ಮಾಡುವಾಗ ರಚನಾತ್ಮಕ ಟೀಕೆ ಮಾಡಬೇಕು. ಒಂದು ವರ್ಷದಲ್ಲಿ ನನ್ನ ಮನೆಗೆ 130 ರೂಪಾಯಿ ಸಾಮಾನುಗಳಿಗೆ ಬೆಲೆ ಜಾಸ್ತಿಯಾಗುತ್ತಿದೆ. ಬಡವರಿಂದ ಹಿಡಿದು ಸಾಧಾರಣವಾಗಿ 5 ನೂರು ರೂಪಾಯಿ ಸಂಬಳ ಅಥವಾ 750 ರೂಪಾಯಿ ವರೆಗೆ ಸಂಬಳ ಬರುವ ಜನರ ಪರಿಸ್ಥಿತಿ ಕಠಿಣವಾಗಿದೆ. ಮಾನ್ಯ ಅಧ್ಯಕ್ಷರೇ, ಮತ್ತೊಂದು ಮಾತನ್ನು ಹೇಳುತ್ತೇನೆ ನಾನು ಕಠಿಣವಾಗಿ ಮಾತನಾಡುವ ದೃಷ್ಟಿ ಏತಕ್ಕೆಂದರೆ ಒಳ್ಳೆಯದು ಆಗಬೇಕೆನ್ನುವ ದೃಷ್ಟಿಯಿಂದ ಕಠಿಣವಾಗಿ ಮಾತನಾಡುತ್ತಿದ್ದೇನೆ ಅದರಲ್ಲಿ ತಪ್ಪುಗಳು ಇದ್ದರೆ ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇನೆ. ರಾಜಕೀಯ ಬಣ್ಣದಿಂದ ಅಥವಾ ಜನರನ್ನು ಎತ್ತಿಕಟ್ಟುವ ಅಭಿಪ್ರಾಯದಿಂದ ಹೇಳುತ್ತಿಲ್ಲ. ನಮ್ಮ ಸರ್ಕಾರ ಎಷ್ಟು ಕೋಟ್ಯಾಂತರ ರೂಪಾಯಿ ಖರ್ಚುಮಾಡಿದರೂ ಕೂಡ ಒಂದು ಪ್ರಶ್ನೆ ವಿರೋಧ ಪಕ್ಷಗಳು ಎತ್ತಿ ಕಟ್ಟುವುದಕ್ಕೆ ಅವಕಾಶ ಇದೆ. ವಿರೋಧಪಕ್ಷ ಹೇಳಲಿ, ಅಥವಾ ಹೇಳದೆ ಇರಲಿ ಇದರ ಪರಿಣಾಮದಿಂದ ಜನ ನಮ್ಮನ್ನು ದೂರ ಮಾಡತಕ್ಕ ಸಂದರ್ಭ ಒದಗುತ್ತಿದೆ. ನನ್ನ ಸರ್ಕಾರ ಅಧಿಕಾರದಲ್ಲಿ ಉಳಿಯಬೇಕು ಎನ್ನುವ ದೃಷ್ಟಿ ಹೆಚ್ಚಿಗೆ ನನಗೆ ಇದೆ. ಸರ್ಕಾರದ ಕರ್ತವ್ಯ ಇದನ್ನು ಸರಿಪಡಿಸಬೇಕು. ಸರ್ಕಾರದಲ್ಲಿ ಏನಾದರೂ ಲೋಪಗಳಿದ್ದರೆ ಸರಿಪಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡದಿದ್ದರೆ ಧಾರಣಿವಾಸಿಗಳು ಏರುತ್ತವೆ ಎಲ್ಲಿ ನಮ್ಮನ್ನು ತಳ್ಳಿಬಿಡುತ್ತಾರೋ ಎನ್ನುವ ಭಯ ಬಂದಿದೆ. ಆದುದರಿಂದ ಇದನ್ನು ಸರಿಪಡಿಸಲು ಕಠಿಣವಾದ ಕಾನೂನು ಏನು ಮಾಡಬೇಕೋ ಅಂಥ ಕಾನೂನು ಮಾಡಬೇಕು. ಯಾರು ಪ್ರತಿ ತಿಂಗಳು ಕೊಂಡುಕೊಂಡು ಜೀವನ ಮಾಡುತ್ತಾರೆ. ಅವರಿಗೆ ಬೆಲೆ ಏರಿಕೆ ವಿಷಯ ಅರ್ಥವಾಗುತ್ತದೆ. ಯಾರು ವರ್ಷಕ್ಕೆ ಆಗುವಷ್ಟು ಸಾಮಾನುಗಳನ್ನು ಶೇಖರಣೆ ಮಾಡಿಕೊಂಡು ಜೀವನ ಮಾಡುವವರಿಗೆ ಅರ್ಥವಾಗುವುದಿಲ್ಲ. ಅವರು ಪತ್ರಿಕೆ ಓದಿ ಎಷ್ಟು ಧಾರಣೆ ಜಾಸ್ತಿಯಾಗಿದೆ ಎಂದು ತಿಳಿದುಕೊಳ್ಳಬಹುದು. ನಾನು ಹೇಳುತ್ತೇನೆ ಹೆಣ್ಣುಮಕ್ಕಳು ಇದರ ಬಗ್ಗೆ ಬಹಳ ತೀರಾ ನಮ್ಮನ್ನು ಟೀಕೆ ಮಾಡತಕ್ಕ ಪ್ರಸಂಗಗಳು ನನ್ನ ಕಿವಿಯಿಂದ ಕೇಳಿದ್ದೇನೆ. ತೀರಾ ಬಡವರಾಗಿರತಕ್ಕವರು ಇರುವ ಕ್ಷೇತ್ರದಿಂದ ನಾನು ಬಂದಿರತಕ್ಕವನು ಆದ್ದರಿಂದ ಅವರ ಕಷ್ಟಗಳನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಸರ್ಕಾರವನ್ನು ಅಳಿಯಬೇಕು ಎನ್ನುವ ದೃಷ್ಟಿಯಲ್ಲ, ಉಳಿಯಬೇಕು ಎನ್ನುವ ದೃಷ್ಟಿಯಿಂದ ತಂದಿದ್ದೇನೆ. ಕಠಿಣವಾದ ಕಾನೂನು ಮಾಡಿ ಜನರನ್ನು ರಕ್ಷಣೆ ಮಾಡಬೇಕೆಂದು ಹೇಳುತ್ತೇನೆ. ನಮ್ಮ ಮಿತ್ರರೇ ನಮಗೆ ದ್ರೋಹ ಮಾಡುತ್ತಾರೆ. ಹೆಸರುಗಟ್ಟದಲ್ಲಿ ಪೌಲ್ಟ್ರಿ ಫಾರಮ್ ಇದೆ. ದಿವಸಕ್ಕೆ 10-15 ಸಾವಿರ ಮೊಟ್ಟೆ ತಯಾರಾಗುತ್ತವೆ. ಹಿಂದೆ 15 ಪೈಸೆಗೆ ಒಂದು ಮೊಟ್ಟೆ ಸಿಕ್ಕುತ್ತಿತ್ತು. ಅದನ್ನು ತಪ್ಪಿಸಿ ಶ್ರೀ ಪಾಂಡುರಂಗ ಸೆಟ್ಟಿಗೆ ಹೋಲ್‌ಸೇಲ್ ಕೊಟ್ಟರು. ಈಗ ಅವರು ಒಂದು ಮೊಟ್ಟೆಗೆ 33ಪೈಸೆಗೆ ಮಾರಾಟಮಾಡುತ್ತಿದ್ದಾರೆ. ನಮ್ಮ ಸರ್ಕಾರ ಉತ್ಪತ್ತಿ ಮಾಡಿಸಿ ವ್ಯೆಯಕ್ತಿಕವಾಗಿ ಒಬ್ಬ ವ್ಯಕ್ತಿಗೆ ಕೊಟ್ಟು ಅವನ ಮುಖಾಂತರ ಧಾರಣೆ ಜಾಸ್ತಿ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಆ ರೀತಿ ಅವಕಾಶ ಮಾಡಿಕೊಟ್ಟವರು ಹಿಂದಿನ ಸರ್ಕಾರವೇ ಅಥವಾ ಇವರೇ ಯಾರೇ ಇರಲಿ ಇದು ಮಾಡಿರುವುದು ಸರಿಯಲ್ಲ. ಇವರು ಅವರಿಗೆ ಕೊಡುವುದು 18 ಪೈಸೆ ಕಡಿಮೆ ಅವರು ಮಾರುವುದು 33 ಪೈಸೆ.

ಶ್ರೀ ಎಸ್. ಬಂಗಾರಪ್ಪ.—ಯಾರ ಕಾಲದಲ್ಲಿ ಇದು ಆಯಿತು ?

ಶ್ರೀ ಕೆ. ಶ್ರೀರಾಮಲು.—ಶ್ರೀ ವೀರೇಂದ್ರ ಪಾಟೀಲರ ಕಾಲದಲ್ಲಿ ಆಯಿತೋ ಏನೋ ? ನನ್ನ ಪಾರ್ಟಿಯವರಿಗೆ ಹೇಳಿದೆ. ಈ ರೀತಿ ಮಾಡುವುದು ಸರಿಯಲ್ಲ ಎಂದು ಹೇಳುತ್ತೇನೆ. ಅನೇಕ ವ್ಯಾಪಾರಸ್ಥರು ಒಳ್ಳೆಯವರು ಇರಬಹುದು. ಕೆಲವರು ಒಳ್ಳೆಯವರನ್ನು ಇಟ್ಟುಕೊಂಡು ಇನ್ನು ಹಲವಾರು ಜನ ಕೆಡಕು ಮಾಡುವವರು ಇದ್ದಾರೆ. ಅದರಿಂದ ಏನೂ ಪ್ರಯೋಜನ ಆಗುವುದಿಲ್ಲ. ಅಡಳಿತ ಪಕ್ಷವನ್ನು ಧೂಷಣೆ ಮಾಡುವ ಪರಿಸ್ಥಿತಿಗೆ ನಾನು ತರುವುದಕ್ಕೆ ಸಿದ್ಧವಿಲ್ಲ. ಅನೇಕ ರೀತಿ ಪದಾರ್ಥಗಳು ಬೆಳಿಗ್ಗೆ ತಿಂದರೆ ಮಧ್ಯಾಹ್ನ ಹೊಟ್ಟೆ ಉಬ್ಬರಿಸಿಕೊಳ್ಳುತ್ತದೆ. ಈ ರೀತಿ ಪದಾರ್ಥಗಳು ಬರುತ್ತಾ ಇವೆ. ವಿಧಿ ಇಲ್ಲದೆ ತಿನ್ನುತ್ತಾರೆ. ಅದರಿಂದ ಅನೇಕ ಕಾಯಿಲೆಗಳು ಬರುತ್ತವೆ. ನಾವು ಅಡಳಿತಕ್ಕೆ ಬಂದು 11 ತಿಂಗಳಾಯಿತು ಈಗ ನಮ್ಮ ಜವಾಬ್ದಾರಿ ಇದೆ. 25 ವರ್ಷಗಳಿಂದ ಯಾರು ಯಾರು ಏನು ಮಾಡಿದರು ಕೂಡ ಇದಕ್ಕೆಲ್ಲಾ ಜವಾಬ್ದಾರಿ ನಾವೇ ಎಂದು ಹೇಳಿದರೆ ನಾನು ಒಪ್ಪಲಾರೆ. ನಾನು ಇಷ್ಟುಮಾತ್ರ ಹೇಳುತ್ತೇನೆ. ದೇಶದಲ್ಲಿ ಉತ್ಪಾದನೆ ಆಗಬೇಕು ಪ್ರೊಡಕ್ಷನ್ ಆಗಬೇಕು ನಾವೇ ಎಷ್ಟೋ ಕಡೆ ಪ್ರಾಡಕ್ಷನ್ ಮಾಡುವ ಕಡೆ ಪ್ರಾಡಕ್ಷನ್ ಮಾಡಲಾರದೆ ಇದ್ದೇವೆ. ಮೊನ್ನೆ ನೂಲಿನ ಪ್ರಶ್ನೆ ಬಂತು ಬಿಜಾಪುರ ಡಿಸ್ಟ್ರಿಕ್ಟ್‌ಗೆ ನೂಲು ಬೇಕು ಎಂದು ನೇಕಾರರು ಉಪವಾಸ ಇದ್ದಾರೆ. ಒಂದೂವರೆಲಕ್ಷ ಸ್ಪಿಂಡರ್ಸ್ ನಡೆಯುವ ಜಾಗದಲ್ಲಿ ನಾವು ನಡೆಸುತ್ತಾ ಇರುವುದು 50–60 ಸಾವಿರ. 3.ಲಕ್ಷ ಸ್ಪಿಂಡರ್ಸ್ ಕೆಲಸಮಾಡಿದರೆ ಬೇಕಾದಷ್ಟು ನೂಲು ತಯಾರು ಮಾಡಬಹುದು ಎಂದು ಅನೇಕಸಲ ಹೇಳಿದ್ದಾರೆ ಇದನ್ನು ಇನ್ನು ಗಮನಿಸಿಲ್ಲ. ಸೆಪ್ಟಂಬರ್‌ನಲ್ಲಿ ನಿಮಗೆ ಪತ್ರ ಬರೆದಿದ್ದೇನೆ. ಕೇಳಲೇ ಇಲ್ಲ ವಿಚಾರಿಸಲೇ ಇಲ್ಲ. ಈಗ ಒಪ್ಪಿ ಕೊಂಡಿರಿ ಬಹಳ ಸಂತೋಷ. ಅದಕ್ಕೋಸ್ಕರ ನರ್ಕಾರಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಜನರ ಕಷ್ಟಗಳನ್ನು ನಿವಾರಿಸದಿದ್ದರೆ ಜನರು ನಮ್ಮನ್ನು ಎಲ್ಲಿ ಬಿಟ್ಟು ದೂರ ಹೋಗುತ್ತಾರೋ ಎನ್ನುವ ಎಚ್ಚರಿಕೆ ಇಲ್ಲದಿದ್ದರೆ ನಮ್ಮ ಒಳ್ಳೆಯ ಪ್ರಯತ್ನಗಳು ವ್ಯರ್ಥವಾಗುತ್ತಿವೆ ಎನ್ನುವ ವಿಷಯ ತಮ್ಮ ಮುಂದೆ ಇಡುತ್ತೇನೆ. ಒಬ್ಬರನ್ನು ಒಬ್ಬರು ಟೀಕೆ ಮಾಡುವುದರಿಂದ ಧಾರಣಿವಾಸಿ ಕಡಿಮೆಯಾಗುವುದಿಲ್ಲ. ಧಾರಣಿವಾಸಿ ಜಾಸ್ತಿ ಆಗಲೂ ಕಾರಣರು ಯಾರು ಅಂಥವರ ಮೇಲೆ ನಮಾಜದ ಜನ ನಾವು ನೀವು, ವಿರೋಧಪಕ್ಷದವರು ಸೇರಿ ಕ್ರಮ ತೆಗೆದುಕೊಂಡರೆ ಅದನ್ನು ಸರಿ ಪಡಿಸುವುದಕ್ಕೆ ಸಾಧ್ಯ. ಶಿವಮೊಗ್ಗಾದಲ್ಲಿ ಹುಣಸೆ ಹಣ್ಣು 10 ಕೆ.ಜಿ. ಗೆ 14 ರೂಪಾಯಿ ಇದ್ದರೆ ಬೆಂಗಳೂರಿನಲ್ಲಿ 25 ರೂಪಾಯಿ ಇದು ಹೇಗೆ ಸಾಧ್ಯ ? 171 ಮೈಲು ದೂರದಲ್ಲಿ 14 ರೂಪಾಯಿ ಇಲ್ಲಿ 25 ರೂಪಾಯಿ ಎಂದರೆ ವರ್ತಕರು ಎಷ್ಟು ಲೇವಾ ಮಾಡುತ್ತಾರೆ ಎಂದು ಗೊತ್ತಾಗುತ್ತದೆ. ವರ್ತಕರು ಸಮಾಜಕ್ಕೆ ದುರುದ್ದೇಶದಿಂದ ಕೊಡತಕ್ಕ ತೊಂದರೆ ಇದು. ಅಂಥವರಿಗೆ ಕಠಿಣವಾದ ಶಿಕ್ಷೆ ಕೊಡುವ ರೀತಿ ಕಾನೂನು ಬದಲಾವಣೆ ಮಾಡದೆ ಇದ್ದರೆ ಇರತಕ್ಕ ಹಳೆ ಕಾನೂನಿಂದ ನಿಜವಾಗಿ ಇವರು ಸರಿ ಹೋಗುತ್ತಾರೆ ಎನ್ನುವ ವಿಶ್ವಾಸ ನನಗೆ ಬಂದಿಲ್ಲ. 95ಜನ ಕೆಟ್ಟವರು ಇದು 5ಜನ ಒಳ್ಳೆಯವರು ಇದ್ದರೆ ಏನೂ ಮಾಡುವುದಕ್ಕೆ ಆಗುವುದಿಲ್ಲ. ನಾನು ಇರುವ ಕಡೆ ನಾರ್ತ್‌ರೇಬಿಜ್ ಫುಡ್ ಆಫೀಸ್ ಇದೆ. ಅಲ್ಲಿ ರಾತ್ರಿ ಒಂದು ಗಂಟೆಯವರೆಗೆ ಭಾರಿ ಭಾರಿ ಕೆಲಸಗಳು ಇಲ್ಲಿ ನಡೆಯುತ್ತಿರುತ್ತವೆ. ಆದರ ಮುಂಭಡಿಮೇಲೆ ನಮ್ಮ ಕಾರ್ಮಿಕ ಸಂಘ ಇದೆ. ಅಲ್ಲಿಗೆ ಯಾವತ್ತು ನಾನು ಹೋಗುವುದಿಲ್ಲ. 5ಗಂಟೆಗೆ ನರ್ಕಾರಿ ನೌಕರರು ಮನೆಗೆ ಹೋಗಬೇಕಾದವರು ರಾತ್ರಿ 11ಗಂಟೆಯವರೆಗೆ ಕೆಲಸ ಮಾಡುತ್ತಾರೆ. ಯಾರಿಗೋಸ್ಕರ ಕೆಲಸಮಾಡುವುದು, ನಾರ್ವಜನಿಕರಿಗೋಸ್ಕರ ಅಲ್ಲ. ಅವರು ಒಂದೇ ಕುಟುಂಬಕ್ಕೆ 4-5 ರೇಷನ್‌ಅಂಗಡಿಗಳಲ್ಲಿ ತೆಗೆದುಕೊಳ್ಳತಕ್ಕ ಅವಕಾಶಗಳನ್ನು ಕಲ್ಪಿಸಿಕೊಟ್ಟು ಅವರು ಅದನ್ನು ತೆಗೆದುಕೊಂಡು ಬ್ಲಾಕ್‌ನಲ್ಲಿ ಮಾರುವ ಅವಕಾಶವಾಗುತ್ತದೆ. ನಾರ್ವಜನಿಕರಿಗೋಸ್ಕರ ಇಲ್ಲಿ ಕೆಲಸಮಾಡುವುದು. ನಮ್ಮ ನರ್ಕಾರಿ ನೌಕರರು ಈ ರೀತಿ ಕೆಲಸ ಮಾಡುತ್ತಾರೆ ಇದಕ್ಕೆ ಏನು ಹೇಳೋಣ ? ನಾನು ಈ ವಿಷಯವನ್ನು ಮಾನ್ಯ ಮಂತ್ರಿಗಳಲ್ಲಿ ಹೆಚ್ಚು ಕಡಿಮೆ ಆರು ತಿಂಗಳು ಅರಿಕೆಮಾಡಿಕೊಂಡೆ ಆ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ನಾನು ತೋರಿಸುತ್ತೇನೆಂದು ಹೇಳಿದರು ಅವರು ಬರಲಿಲ್ಲ ಇದಕ್ಕೆ ಏನು ಹೇಳೋಣ.

ಈ ನರ್ಕಾರ ಪ್ರಯತ್ನ ವ್ಯರ್ಥವಾಗದೆ ಇದ್ದ ಹಾಗೆ ಆಗಬೇಕಾದರೆ ಅದು ಒಂದು ಕಡ್ಡಾಯವಾದ, ಕಠಿಣವಾದ ಕಾನೂನು ಪಾಲನೆಯಿಂದ ಮಾತ್ರ ಸಾಧ್ಯವಾಗುತ್ತದೆ. ಇಲ್ಲದೆ ಇದ್ದರೆ ನಾವು, ನಮ್ಮ ಜನ, ಎಂದು ಮುರಾಜಿಗೆ ಕಟ್ಟು ಬೀಳುವುದಾದರೆ, ನಾವು ಇನ್ನೂರು ಚಿಲ್ಲರೆ ಜನ ಮಾಡುವ ಪ್ರಯತ್ನವೆಲ್ಲ ವ್ಯರ್ಥವಾಗುತ್ತದೆ ಎಂದು ಹೇಳಿ, ಅಧ್ಯಕ್ಷರು ಇಷ್ಟು ಮಾತ ನಾಡಲು ಅವಕಾಶ ಕೊಟ್ಟಿದ್ದಕ್ಕೆ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಮಾನ್ಯ ಅಧ್ಯಕ್ಷಿಣಿಯವರೇ, ಆಹಾರ ಸಾಮಗ್ರಿಗಳ ಬೆಲೆ ಏರಿಕೆ ಬಗ್ಗೆ ನಾನು ಈ ಸದನದ ಸದಸ್ಯನಾದ ರಾಗಾಯಿತು ಒತ್ತಾಯ ಮಾಡುತ್ತಿದ್ದೇನೆ. ನನ್ನ ಬೇಡಿಕೆಗೆ ಸಂಬಂಧಪಟ್ಟ ನಚಿವರು ಬಹಳಮಟ್ಟಿಗೆ ಪ್ರತಿಯೊಂದು ಸಲವೂ ಆಶ್ವಾಸನೆ ಕೊಡು

ತ್ತಾರೆ. ಆದರೆ ಆಶ್ವಾಸನೆಯನ್ನು ನಡೆಸುವುದಕ್ಕೆ ಅವರಿಗೆ ಶಕ್ತಿಯೇ ಇಲ್ಲದಿರುವುದು ಬಹಳ ದುರ ದೃಷ್ಟಕರವಾದ ಸಂಗತಿ. ಈಗ ಬೆಂಗಳೂರಿನ ಜನತೆಗೆ ಬಹಳ ಕಷ್ಟವಿದೆ. ಹೋದ ಸಲಕ್ಕಿಂತಲೂ ಏನು ಬೆಲೆ ಇತ್ತೋ ಅದಕ್ಕಿಂತ ಈಗ ದ್ವಿಗುಣವಾಗಿದೆ. ಜನಗಳು ಇಷ್ಟೊಂದು ಬೆಲೆಯನ್ನು ಕೊಟ್ಟು ಆಹಾರಪದಾರ್ಥ ಕೊಳ್ಳುವುದಕ್ಕೆ ಅಸಮರ್ಥರಾಗಿದ್ದಾರೆ. ಸರ್ಕಾರದವರು ಈಗ ಅವರ ನೆರವಿಗೆ ಬಾರದೆ ಇರುವುದರಿಂದ ಜನಗಳು ಕ್ರೋಧೋದ್ರಿಕ್ತರಾಗಿ ಸರ್ಕಾರದ ಮೇಲೆ ಬಂಡಾಯವೇಳುವ ಸ್ಥಿತಿ ಬಂದಿದೆ. ಎಂಬುದಾಗಿ ಶ್ರೀ ಟಿ. ಅರ್. ಶಾಮಣ್ಣನವರು ಹೇಳಿದಂತೆ ಆಗುತ್ತದೆ. ಶ್ರೀ ಶಾಮಣ್ಣನವರು ಚಳುವಳಿ ಮಾಡುತ್ತಾರೆಂದು ಹೇಳಿದರು. ಹೇಗೆ ಮಾಡುತ್ತಾರೆ ಎಂದು ಹೇಳಲಿಲ್ಲ. ಅವರು ಈಗ ಸದನದಲ್ಲಿಲ್ಲ. ಹೇಗೆ ಮಾಡುತ್ತಾರೆಂದರೆ ನಾವು ಹಿಂದೆ 1965ನೇ ಇಸವಿಯಲ್ಲಿ, ವಿಧಾನಸೌಧ ಚಲೋ' ಮಾಡಿದೆವು. ಆಗ ಶ್ರೀ ರಾಮರಾಯರು ಬೆಂಗಳೂರು ನಗರದ ಪೊಲೀಸಿನವರ ಜೊತೆಗೆ 6 ಸಾವಿರ ಜನರನ್ನು ಕರೆಸಿಕೊಂಡು ಕಂಬಕ್ಕೆ ಒಬ್ಬರನ್ನು ನಿಲ್ಲಿಸಿದರು. ಅಲ್ಲದೆ ನನ್ನನ್ನು ಹಿಡಿಯುವುದಕ್ಕೆ ಮೂರು ದಿವಸವಾದರೂ ಅವರಿಂದ ಆಗಲಿಲ್ಲ. ಅಂಥ ಚಳುವಳಿಗೆ ಎರಡರಷ್ಟು ಚಳುವಳಿ ಜನ ಮಾಡಿಯಾರು ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಆವಾಗ ಶ್ರೀ ಎಚ್. ಸಿದ್ದವೀರಪ್ಪನವರು ಈ ಸದನದ ಸದಸ್ಯರಾಗಿದ್ದರು. ಎಂಥ ಚಳುವಳಿ ಮಾಡಿದರೆನ್ನುವುದು ಅವರಿಗೂ ಗೊತ್ತು. ಈಗಿನ ಪರಿಸ್ಥಿತಿ ಆಗ ಇರಲಿಲ್ಲ. ಆಗಲೇ ಅಂಥ ಚಳುವಳಿಯನ್ನು ಮಾಡಿದ ಜನ ಈಗ ಎಂಥ ಚಳುವಳಿ ಮಾಡಬಹುದು ಎನ್ನುವುದನ್ನು ನೋಡ ತಕ್ಕ ಸನ್ನಿವೇಶ ಬಹಳ ದೂರವಿಲ್ಲ, ಹತ್ತಿರ ಬರುತ್ತಿದೆ.

ಆಹಾರದ ಬೆಲೆಗಳನ್ನು ಕಡಿಮೆ ಮಾಡಲು ಸಲಹೆ ಕೊಡಿ ಎಂದು ಮಾನ್ಯ ಚನ್ನಬಸಪ್ಪನವರು ಕೇಳಿದರು. ಸರ್ಕಾರದ ಡಿಪೋಗಳಲ್ಲಿ, ಫೇರ್ ಪ್ರೈಸ್ ಷಾಪುಗಳಲ್ಲಿ ಜನಗಳಿಗೆ ಸಾಕಷ್ಟು ರೇಷನ್ ಕೊಡುತ್ತಿಲ್ಲ. ಆಹಾರಧಾನ್ಯಗಳನ್ನು ಸಾಕಷ್ಟು ಒದಗಿಸಿ ಎಂದರೆ ಒದಗಿಸುತ್ತಿಲ್ಲ. ಈಗ ಇರುವ ಪದ್ಧತಿ ಪ್ರಕಾರ ಒಬ್ಬ ಮನುಷ್ಯನಿಗೆ ಒಂದು ತಿಂಗಳಿಗೆ ಒಂದು ಕೆ. ಜಿ. ಅಕ್ಕಿ ಕೊಡುತ್ತಿದ್ದಾರೆ. ತಿಂಗಳಿಗೆ ಒಂದು ಕೆ. ಜಿ. ಅಕ್ಕಿ ಕೊಟ್ಟರೆ ಅದನ್ನು ಮಂತ್ರಿಗಳು ತಿಂದು ಜೀವನಮಾಡುವುದಕ್ಕೆ ಸಾಧ್ಯವಾಗುತ್ತದೆಯೇ? ಆದೂ ಅಲ್ಲದೆ 10-12 ಜನ ಇರುವ ಅವರಿಗೆ ಇರುವ ಜನಗಳಿಗೆ ತಕ್ಕಂತೆ ರೇಷನ್ ಕಾರ್ಡನ್ನು ಕೊಡುತ್ತಿಲ್ಲ. ಒಂದು ನಿದರ್ಶನ ಕೊಡಬೇಕಾದರೆ, ಹಿಂದಿನಿಂದ ರೇಷನ್ ಕಾರ್ಡು ಪಡೆದಿರುತ್ತೇನೆ. ನಮ್ಮಲ್ಲಿ ಹಿಂದೆ 8 ಜನರಿದ್ದರು. ಮೊನ್ನೆ ದಿವಸ ಅಂಗಡಿಯಲ್ಲಿ ಹೊಸದಾಗಿ ಅಪ್ಲಿಕೇಷನ್ ಬರೆದುಕೊಡಬೇಕು ಎಂದು ಕೇಳಿದಾಗ ಬರಿಸಿ ಕೊಟ್ಟೆ. ಹಿಂದೆನ್ನ ರೇಷನ್ ಕಾರ್ಡಿನಲ್ಲಿದ್ದ ಜನರಿಗಿಂತ ಇಬ್ಬರು ಜಾಸ್ತಿಯಾಗಿದ್ದುದರಿಂದ ಆ ಎರಡು ಹೆಸರುಗಳನ್ನೂ ಸೇರಿಸಿ ಬರೆದು ಕೊಟ್ಟೆ. ಆದರೆ ರೇಷನಿಂಗ್ ಅಧಿಕಾರಿಗಳು ಏನು ಹೇಳುತ್ತಿದ್ದಾರೆಂದರೆ ಹಿಂದೆ 8 ಜನರಿದ್ದರು, ಈಗ 10 ಜನರಿಗೆ ಹೇಗೆ ಕೊಡುವುದಕ್ಕಾಗುತ್ತದೆ! ಎಂದು 8 ಜನರಿಗೆಕೊಟ್ಟಿದ್ದಾರೆ. ಈ ತರಹ ರೇಷನಿಂಗ್ ಅಧಿಕಾರಿಗಳು ಜನರ ಬಯಕೆಯನ್ನು ಈಡೇರಿಸದೆ ಹೋಗಿದ್ದಾರೆ. ರೇಷನಿಂಗ್ ಅಧಿಕಾರಿಗಳು ಇಂಥ ಸಂದರ್ಭಗಳಲ್ಲಿ ಬೇಕಾದರೆ ಮನೆಗೆ ಹೋಗಿ, ವಿಚಾರಿಸಿ ವಾಸ್ತವಾಗಿ ಎಷ್ಟು ಜನರು ಮನೆಯಲ್ಲಿದ್ದಾರೆ ಅಷ್ಟು ಜನಗಳಿಗೂ ರೇಷನ್ ಕಾರ್ಡ್ ಕೊಡುವ ವ್ಯವಸ್ಥೆ ಮಾಡಬೇಕು. ಆಹಾರಧಾನ್ಯಗಳ ಡಿಪೋಗಳಲ್ಲಿ ಪ್ರತಿಯೊಬ್ಬ ಮನುಷ್ಯನಿಗೆ ಒಂದು ತಿಂಗಳಿಗೆಷ್ಟು ಧಾನ್ಯಬೇಕೋ ಅಷ್ಟು ಧಾನ್ಯವನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಹಾಗೆ ಮಾಡದೆ ಡಿಪೋಗಳಲ್ಲಿ ಒಂದು ಕೆ. ಜಿ. ಅಕ್ಕಿ ಒಂದು ತಿಂಗಳಿಗೆ ಕೊಟ್ಟರೆ ಜನ ತಮಗೆ ಬೇಕಾದ ಬಾಕಿ 8-9- ಕೆ.ಜಿ. ಅಕ್ಕಿಯನ್ನು ಎಲ್ಲಿಂದ ತರಬೇಕು? ಆದ್ದರಿಂದ ಸರ್ಕಾರದರೇ ಬ್ಲಾಕ್ ಮಾರ್ಕೆಟ್ಟಿಗೆ ಪ್ರೋತ್ಸಾಹ ಮಾಡಿದ ಹಾಗೆ ಆಗುವುದಿಲ್ಲವೇ ಎನ್ನುವುದನ್ನು ಯೋಜನೆ ಮಾಡಬೇಕು. ಅದಕ್ಕೆ ನನ್ನ ಸಲಹೆಯಾದರೂ ಇಷ್ಟೆ. ಒಬ್ಬ ಮನುಷ್ಯನಿಗೆ ಎಷ್ಟು ಆಹಾರ ಒಂದು ತಿಂಗಳಿಗೆ ಬೇಕೋ ಅಷ್ಟು ಆಹಾರವನ್ನು ಕೊಡುವ ಹಾಗೆ ಡಿಪೋಗಳಿಗೆ ಆದೇಶ ಕೊಡಬೇಕು. ಬರೀ ಆದೇಶ ಕೊಟ್ಟರೆ ಆಗುವುದಿಲ್ಲ. ಅವರಿಗೆ ಸಾಕಷ್ಟು ಧಾನ್ಯ ಒದಗಿಸಿಕೊಡಬೇಕು ಮತ್ತು ಯಾವ ರೀತಿ ಕೊಡಬೇಕು ಎಂದು ಆದೇಶ ಕೊಡಬೇಕು ಮತ್ತು ಹಾಗೆ ಮಾಡಲೇಬೇಕು. ಹಾಗೆ ಮಾಡದೆ ಹೋದರೆ ತಪ್ಪು ಸರ್ಕಾರದ್ದಾಗುತ್ತದೆ. ಆಹಾರ ಧಾನ್ಯ ಬಜಾರಿನಲ್ಲಿ ಜನಗಳಿಗೆ ಬೇಕಾಗಿ ಮಿಗಾವಷ್ಟು ದೊರಕಬೇಕಾದರೆ, ಸರ್ಕಾರದವರು ಎಲ್ಲ ಯಂತ್ರವನ್ನೂ ತಮ್ಮ ಕೈಯಲ್ಲಿಟ್ಟುಕೊಂಡು ಸಾಕಷ್ಟು ಆಹಾರ ಧಾನ್ಯವನ್ನು ಒದಗಿಸುವುದಕ್ಕೆ ಸಾಧ್ಯವಿಲ್ಲವೆಂದರೆ ನ್ಯೆಲ್ಲ ಅವಮಾನಕರವಾದ ಪ್ರಸಂಗವಾಗುತ್ತದೆ ಎಂದರೆ ತಪ್ಪಾಗಲಾರದು. ಸಾಕಷ್ಟು ದವಸ ಧಾನ್ಯಗಳನ್ನು ಡಿಪೋಗಳಿಗೆ ಕೊಡುವುದಕ್ಕೆ ಏನು ಕಷ್ಟ? ದುಡ್ಡು ಕೊಟ್ಟು ತರುವುದಕ್ಕೆ ಡಿಪೋಗಳಲ್ಲಿ ಆಹಾರ ಧಾನ್ಯಗಳು ಸಿಕ್ಕದೆ ಹೋದರೆ ಬ್ಲಾಕ್ ಮಾರ್ಕೆಟ್ಟಿಗೆ ಹೋಗಲೇಬೇಕು. ಇಲ್ಲದೆ ಇದ್ದರೆ ಉಪವಾಸ ಇರುವುದಕ್ಕೆ ಸಾಧ್ಯವಾಗುತ್ತದೆಯೇ ಎನ್ನುವುದನ್ನು ಯೋಚನೆ ಮಾಡಬೇಕು. ನಾನು ಸಲಹೆ ಕೊಟ್ಟ ಪ್ರಕಾರ ಮಾಡಿದರೆ

(ಶ್ರೀ ಕೆ. ಎಂ. ನಾಗಣ್ಣ)

ಆಹಾರ ಧಾನ್ಯಗಳ ಬೆಲೆ ಕಡಮೆಯಾಗುತ್ತದೆ. ಹೋದ ನುಗ್ಗಿಯಲ್ಲಿ ಇದ್ದ ಬೆಲೆಗಿಂತ ಈಗ ಡಬರ್ ಆಗಿದೆ. ಅವರ ಬಗ್ಗೆ ವಿವರಗಳನ್ನು ಶ್ರೀ ಪಾಟಾಳ್ ನಾಗರಾಜ್ ಅವರು ಹೇಳುತ್ತಾರೆ. ಆಹಾರ ಧಾನ್ಯಗಳ ಬೆಲೆಯನ್ನು ಇಳಿಸುವುದಕ್ಕೆ ಸರ್ಕಾರ ತಕ್ಷಣ ಕಾರ್ಯಕ್ರಮ ತೆಗೆದುಕೊಳ್ಳದೆ ಹೋದರೆ ಇನ್ನು 15 ದಿವಸಗಳಲ್ಲಿ ಆಹಾರ ಧಾನ್ಯಗಳ ಬೆಲೆ ಇಳಿಯದೇ ಹೋದರೆ, ಬೆಂಗಳೂರಿನ ನಾಗರಿಕರಿಂದ ದೊಡ್ಡ ಆಂದೋಲನ ನಡೆಯುತ್ತದೆ. ಹಾಗೆ ನಡೆದಾಗ ಏನೇನಾಗುತ್ತದೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಅದಕ್ಕೆಲ್ಲ ಸರ್ಕಾರದವರೇ ಜವಾಬ್ದಾರರಾಗಬೇಕಾಗುವುದು ಎಂದು ಹೇಳಿ ನನ್ನ ಪಾತನ್ನು ಮುಗಿಸುತ್ತೇನೆ.

† **Sri J. P. SARWESH (SERUM).**—Madam Speaker, speaking on this resolutiion I would like to first congratulate the Government for adopting the progressive policy in allotting fair shops particularly in drought affected areas, The decision of the Government to give food grains on credit basis to educated unemployed to run fair price shops has actually helped them a lot. These educated unemployed had no work at all and now they are able to run the fair price shops. You can adopt this policy even in Bangalore and it will go a long way in helping the educated unemployed and the black-marketing could be curbed to a certain extent. You can check unemployment to a certain extent by allowing these people to open fair price shops. The food grains are being allotted to the panchayats and Co-operative Societies for selling to the public. But these Institutions are known for corruption and black-marketing. Supplying foodgrains to these institutions should be immediately stopped. instead the educated unemployed should be encouraged. As far as the foodgrains are concerned, there is no black-marketing in our area. As far as the sugar supply is concerned, no poor man is able to get it from these institutions Therefore, the policy of giving the foodgrains to the Panchayats and Co-operative Institutions should be discouraged and stopped immediately. Foodgrains given to the educated unemployed to run fair price shops may be given on taking security from them.

11-30 A. M.

And, as far as rise in prices is concerned, madam, we have seen every Government trying to stop corruption and to stop the rising of the prices, but they have utterly failed, and they will continue to fail, because as long as there is a capitalist society and as long as there is private property, you cannot expect any man to be honest and sincere. When the State gives security of food, clothing and employment to every individual, a man may become honest. Now, we are in a capitalist society. Whoever has more amount is respected in the society. He may adopt even the worst means ; when he becomes a rich man, he is respected by the society. So, we cannot expect any man tobe honest. The best thing is to adopt such things by which we can end corruption.

As far as trading in foodgrains is concerned, Government should trade in the foodgrains immediately. They should take up trading not only in rice but they must also trade in jowar. Unless this is done,

there is no other way for the Government to check the prices. So, once again, madam, I would like to say that there are thousands and lakhs of people who are unemployed in our State Graduates and Matriculates-and all those Fair Price Shops should be entrusted to them. That will solve one of our biggest problems.

With these words, I thank you.

†ಶ್ರೀ ಎಂ.ಎಸ್. ಕೃಷ್ಣನ್ (ಮಂಲ್ಲೇಶ್ವರಂ).—ಸನ್ಮಾನ್ಯ ಸಭಾಧ್ಯಕ್ಷಣಿಯವರೇ, ಈ ಬೆಲೆ ಏರಿಕೆ ಬಗ್ಗೆ ಏನು ನಿರ್ಣಯಗಳನ್ನು ಮಾನ್ಯ ಇಬ್ಬರು ಮಿತ್ರರು ತೆಗೆದುಕೊಂಡು ಬಂದಿದ್ದಾರೆ ಅದು ಬಹಳ ಮುಖ್ಯವಾದ ವಿಷಯ ಎನ್ನುವುದನ್ನು ನಾವೆಲ್ಲರೂ ಒಪ್ಪಿಕೊಳ್ಳುತ್ತೇವೆ. ಬೆಲೆ ಏರಿಕೆ ಗಗನಕ್ಕೆ ಮುಟ್ಟುತ್ತಿದೆ ಎನ್ನುವ ಬಗ್ಗೆ ಯಾರಿಗೂ ಭಿನ್ನಾಭಿಪ್ರಾಯವಿಲ್ಲ. ಅದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಅಕ್ಕಿ ಬೆಲೆ, ರಾಗಿ ಬೆಲೆ, ಸಕ್ಕರೆ, ಎಣ್ಣೆ ಬೆಲೆಗಳು ಸಿಕ್ಕಾಪಟ್ಟೆ ಏರುತ್ತಿದೆ ಎನ್ನುವ ಬಗ್ಗೆ ವಿವಾದವಿಲ್ಲ. ಬೆಂಗಳೂರಿನಲ್ಲಿ ಮಾತ್ರ ಬೆಲೆಗಳು ಏರಿವೆ ಎಂದು ಅಲ್ಲ ದೇಶದ ಬೇರೆ ಭಾಗಗಳಲ್ಲೂ ಬೆಲೆ ಏರಿಕೆ ಬಗ್ಗೆ ಬೇಕಾದಷ್ಟು ಅಂಕಿ ಅಂಶಗಳು ಇವೆ. ಅದನ್ನು ಹೇಳಿ ಈ ಸಭೆಗೆ ಬೇಸರ ಪಡಿಸುವುದಕ್ಕೆ ಇಚ್ಛೆ ಪಡುವುದಿಲ್ಲ. ಬೆಲೆ ಏರಿಕೆಗೆ ಕಾರಣ ಏನು ? ಸರಕಾರ ಏನು ಕಾರಣ ಕೊಡುತ್ತದೆ ಆ ಕಾರಣಗಳು ಸರಿಯೇ, ಥೋರಣ್ ಎನಿದೆ ಆ ಥೋರಣ್ ಸರಿಯೇ, ಎಂದು ಸ್ವಲ್ಪ ಮಟ್ಟಿಗೆ ವಿಮರ್ಶೆ ಮಾಡುವ ಪರಿಸ್ಥಿತಿ ಬಂದಿದೆ ಎಂದು ನನಗೆ ಅನ್ನಿಸುತ್ತದೆ. ಸರಕಾರದವರು ಹೇಳುವ ಕಾರಣ ಸರಿಯಾಗಿ ಇದ್ದರೆ, ಥೋರಣ್ ಸರಿಯಾಗಿ ಇದ್ದರೆ ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಸರಕಾರ ಹೇಳುವ ಕಾರಣ ಸರಿಯಲ್ಲ, ಥೋರಣ್ ಸರಿಯಿಲ್ಲ ಎಂದರೆ ಅವರ ಥೋರಣ್ ತಪ್ಪು ಎಂದು ಹೇಳಬೇಕಾಗುತ್ತದೆ. ಸರಕಾರದವರು ಹಲವಾರು ಕಾರಣಗಳನ್ನು ಕೊಡುತ್ತಾರೆ. ಮಾನ್ಯ ಚನ್ನಬಸಪ್ಪನವರು ಮಾತನಾಡುತ್ತಾ ಹೇಳಿದರು ಬೆಲೆ ಏರಿಕೆಯನ್ನು ಕಡಿಮೆ ಮಾಡಬೇಕಾದರೆ ಉತ್ಪಾದನೆ ಜಾಸ್ತಿ ಮಾಡಬೇಕು ಎಂದು. ಉತ್ಪಾದನೆ ಜಾಸ್ತಿಯಾದರೆ ಬೆಲೆ ಏರಿಕೆ ಕಡಿಮೆ ಆಗುತ್ತದೆ. ಕಾರ್ಮಿಕರು ಸ್ಟ್ರೈಕ್ ಮಾಡಬಾರದು ಎಂದು ಅಪ್ಪಣೆ ಕೊಡಿಸಿದರು. ಇದರ ಬಗ್ಗೆ ಚರ್ಚೆ ನಡೆಯುತ್ತಿದೆ. ಇಪ್ಪತ್ತಿನ ದಿವಸ ಬೆಲೆ ಏರಿಕೆಗೆ ಕಾರಣ ಉತ್ಪಾದನೆ ಕೊರತೆಯಿದೆ ಎನ್ನುವ ಕಾರಣದಿಂದ ಅದನ್ನು ನೋಡಬೇಕು. ಆಹಾರ ಧಾನ್ಯಗಳನ್ನು ತೆಗೆದುಕೊಳ್ಳೋಣ. ಆಹಾರಧಾನ್ಯಗಳ ಉತ್ಪಾದನೆ ಬಗ್ಗೆ ಕಡಿಮೆ ಆಗಿದೆ ಎಂದು ಸರಕಾರದವರು ಒಪ್ಪಿಕೊಳ್ಳಲಿಲ್ಲ, ಒಪ್ಪಿಕೊಳ್ಳುವುದೂ ಇಲ್ಲ. 1971-72ರಲ್ಲಿ 112 ಮೆಟ್ರಿಕ್ ಟನ್ ಇಪ್ಪತ್ತಿನ ದಿವಸ ಆಹಾರ ಧಾನ್ಯಗಳ ಉತ್ಪಾದನೆ ಆಗಿದೆ. ಸರಕಾರದ ಅಂಕಿ ಅಂಶಗಳು ಆರ್ ಟ್ಯೆಂ ಹೈ ಎಂದು ಚವಾಣರು ಹೇಳಿರುವುದು ಅಷ್ಟುಮಾತ್ರವಲ್ಲ, ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾ 9-5 ಮೆಟ್ರಿಕ್ ಟನ್ ಬಫರ್ ಸ್ಟಾಕ್ ಇದೆ ದಟ್ಸ್ ಆರ್‌ಸೋ ಆರ್ ಟ್ಯೆಂ ಹೈ. 9-5 ಬಫರ್ ಸ್ಟಾಕ್ 112 ಮೆಟ್ರಿಕ್ ಟನ್ ಆಹಾರಧಾನ್ಯ ಉತ್ಪಾದನೆ ಆಗಿದೆ. ಆರ್ ಟ್ಯೆಂ ಹೈ ಎಂದು ಹೇಳಿದ ಮೇಲೆ ಆಹಾರ ಧಾನ್ಯಗಳ ಬೆಲೆ ಕಡಿಮೆ ಇದೆ ಎಂದು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇನ್ನೂ ಹೆಚ್ಚು ಉತ್ಪಾದನೆ ಮಾಡಬೇಕಾದ್ದು ಅದು ಬೇರೆ ಸಮಾಚಾರ. ಎರಡನೇಯ ಐಟಂ ಸಕ್ಕರೆ. ಸಕ್ಕರೆ ಬೆಲೆ ಸಿಕ್ಕಾಪಟ್ಟೆ ಏರುತ್ತಿದೆ. ಎರಡು ರೂಪಾಯಿಗೆ ಸಿಕ್ಕುತ್ತಿದ್ದ ಸಕ್ಕರೆ ಇವೊತ್ತು ಒಂದು ಕೆ.ಜಿ.ಗೆ 5 ರೂಪಾಯಿನಂತೆ ಮಾರಾಟ ಮಾಡುತ್ತಿದ್ದಾರೆ; ಸಕ್ಕರೆ 1971-72ರಲ್ಲಿ 31 ಲಕ್ಷ ಟನ್ ಉತ್ಪಾದನೆ ಆಗಿದೆ. ಇದನ್ನು ಕೂಡ ಹಿಂದಿನ ಫಿಗರ್ಸ್‌ಗೆ ಕಂಪೇರ್ ಮಾಡಿ ನೋಡಿದರೆ 31 ಲಕ್ಷ ಟನ್ ಜಾಸ್ತಿ ಉಳಿಯುವುದಕ್ಕಿಂತ ಹೆಚ್ಚು ಆಗಿದೆ ಎಂದು ಸರಕಾರದವರು ಒಂದು ಕಡೆ ಹೇಳಿದ್ದಾರೆ: ಇಷ್ಟಾಗಿದ್ದರೂ ಸಹ ಸಕ್ಕರೆ ಬೆಲೆ ಮಾತ್ರ ಕಡಿಮೆ ಆಗಲಿಲ್ಲ. 1971-72 ರಲ್ಲಿ ಸಕ್ಕರೆ ಬೆಲೆ ಜಾಸ್ತಿ ಆದಮೇಲೆ ಡೀ ಕಂಟ್ರೋಲ್ ಮಾಡಿದ್ದರಿಂದ ಸಕ್ಕರೆ ಬೆಲೆ ಕಡಿಮೆ ಆಗುತ್ತದೆ ಎಂದು ಕಂಪ್ಲೀಟ್ ಡೀ ಕಂಟ್ರೋಲ್ ಮಾಡಿದ್ದೀರಿ. ಡೀ ಕಂಟ್ರೋಲ್ ಮಾಡಿದ್ದರಿಂದ ಸಕ್ಕರೆ ಬೆಲೆ ಕಡಿಮೆ ಆಗಲಿಲ್ಲ, ಇನ್ನೂ ಜಾಸ್ತಿ ಆಯಿತು. ಮತ್ತೆ ಪುನಃ ವಾಲಂಟರಿ ಪಾರ್ಷಿಯಲ್ ಡೀ ಕಂಟ್ರೋಲ್ ತೆಗೆದುಕೊಂಡು ಬಂದರು. ಅದರಿಂದ ಕೂಡ ಸಕ್ಕರೆ ಬೆಲೆ ಕಡಿಮೆ ಆಗಲಿಲ್ಲ. ಸರಕಾರದ ನೀತಿಯ ಪ್ರಕಾರ ಮಿಲ್ಲು ಮಾಲೀಕರು ಎಷ್ಟು ಉತ್ಪಾದನೆ ಮಾಡುತ್ತಾರೆ ಅದರಲ್ಲಿ 60 ಪರ್ಸೆಂಟ್ ಸರಕಾರಕ್ಕೆ ಕೊಡಬೇಕು. ಉಳಿದ 40 ಪರ್ಸೆಂಟನ್ನು ತಾವೇ ಉಪಯೋಗಿಸಿಕೊಳ್ಳಬಹುದು, ಮತ್ತು ಮಾರಾಟ ಮಾಡಬಹುದು. 40 ಪರ್ಸೆಂಟ್ ಸರಕಾರದಿಂದ ಮಾರಾಟ ಮಾಡುವುದಕ್ಕೆ ಅವಕಾಶಕೊಟ್ಟಿರುವುದರಿಂದ ಅವರು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ. ದೇಶದಲ್ಲಿರುವ ಸಕ್ಕರೆ ಮಿಲ್ಲು ಮಾಲೀಕರು ಕೊಟ್ಯಾಂತರ ರೂಪಾಯಿ ಈ ರೀತಿಯಲ್ಲಿ ಸಂಪಾದನೆ ಮಾಡುತ್ತಿದ್ದಾರೆ. ಅದರಿಂದ ಬೆಲೆ ಜಾಸ್ತಿ ಆಗಿದೆ. ಕಾರ್ಮಿಕರು ಕಲಸ ಕಡಿಮೆ ಮಾಡಿದ್ದಾರೆ ಅದರಿಂದ ಉತ್ಪಾದನೆ ಕಡಿಮೆ ಆಗಿದೆ ಎಂದು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ.

Sri N. CHIKKE GOWDA(Minister of State for Animal Husbandry).—In puts regulation for production, ಇದರ ಬಗ್ಗೆ ಹೇಳಿ.

Sri M. S.KRISHNAN.—First as for as sugar is concerned, there was sabotage, by mill owners. Even Mrs. Indira Gandhi has to say that there was sabotage by mill owners. The U. P. Asembly passed Resolution saying that sugar mills must be taken over and nationalised. ಬೇಕಾದಷ್ಟು ಉತ್ಪಾದನೆ ಮಾಡಿದ್ದಾರೆ. ಆದರೆ ಮಿಲ್ಲು ಮಾಲೀಕರು ಕಡಿಮೆ ಉತ್ಪಾದನೆ ಆಗಿದೆ ಎಂದು ತಪ್ಪು ಲೆಕ್ಕ ಹೇಳಿ ಕೃತಕ ಬೆಲೆ ಏರಿಸುವುದಕ್ಕೆ ಅವಕಾಶವಾಗಿದೆ. You are guilty of colluding with the mill owners of the country. That is why it has happened.

ಮೂರನೇ ವಿಚಾರ ಕ್ಲಾತ್ ತೆಗೆದುಕೊಳ್ಳೋಣ. ಕೋಟ್ಯಾಂತರ ರೂಪಾಯಿಗಳನ್ನು ಮಿಲ್ ಮಾಲೀಕರು ಎಲೆಕ್ಷನ್ ಫಂಡಿಗೆ ಕೊಟ್ಟರು. 1950-51 ರಲ್ಲಿ 420 ಕೋಟಿ ಮೀಟರ್ ಬಟ್ಟೆ ಉತ್ಪಾದನೆ ಆಯಿತು. 1960-61ರಲ್ಲಿ 628 ಕೋಟಿ ಮೀಟರ್ ಬಟ್ಟೆ ಉತ್ಪಾದನೆ ಆಯಿತು. 1969-70ರಲ್ಲಿ 775.3 ಕೋಟಿ ಮೀಟರ್ ಬಟ್ಟೆ ಉತ್ಪಾದನೆ ಆಯಿತು. ಆದರೂ ಕೂಡ ಸರಕಾರದ ಹೇಳಿಕೆ ಪ್ರಕಾರ, ಶ್ರೀ ಎಲ್.ಎನ್. ಮಿಶ್ರರವರ ಹೇಳಿಕೆ ಪ್ರಕಾರ ಅದಕ್ಕಿಂತ ಆರ್ ಟ್ಯೆಂ ಹೈ ಹಿಂದೆ ಯಾವತ್ತೂ ಇಷ್ಟು ಉತ್ಪಾದನೆ ಆಗಿರಲಿಲ್ಲ ಎಂದು ಹೇಳಿದ್ದಾರೆ. ಪ್ರೊಡಕ್ಷನ್ ಎಷ್ಟು ಜಾಸ್ತಿ ಆದರೂ ಯಾತಕ್ಕೋಸ್ಕರ ಬಟ್ಟೆ ಬೆಲೆ ಕಡಿಮೆ ಆಗಲಿಲ್ಲ ?

ಶ್ರೀ ಎನ್. ಚಿಕ್ಕೇಗೌಡ.—ವೇಜಸ್ ಬೋನಸ್ ಕೊಟ್ಟಿರುವುದರಿಂದ ಬೆಲೆ ಆ ರೀತಿ ಕಡಿಮೆ ಆಗಲಿಲ್ಲ ಎಂದು ಹೇಳುತ್ತಾ ಇಲ್ಲ. ನಿಮ್ಮ ಅಂಕಿ ಅಂಶಗಳ ಆರ್ಗ್ಯೂಮೆಂಟ್ ಬಗ್ಗೆ ಹೇಳುತ್ತಾ ಇದ್ದೇನೆ. ಈಗ ಬಟ್ಟೆ ಬೆಲೆ ಜಾಸ್ತಿ ಆಗಿರುವುದರಿಂದ ಕೋರ್ಸ್ ಕ್ಲಾತ್ ಜಾಸ್ತಿ ಮಾಡಬೇಕು ಎಂದು ಆದೇಶ ಕೊಟ್ಟಿದ್ದರೂ ಸಹ ಮಿಲ್ ಮಾಲೀಕರು ಅದನ್ನು ಮಾಡುತ್ತಾ ಇಲ್ಲ. Excepting the newly taken over silk Mills. ಗಳಿಕೆದಾರರ, ಬಂಡವಾಳಗಾರರ ಕೈಯಲ್ಲಿ ಬೇರೆ ಮಿಲ್ಲುಗಳು ಇರುವುದರಿಂದ ಅಲ್ಲಿ ಕೋರ್ಸ್ ಕ್ಲಾತ್ ಎಷ್ಟು ಪ್ರೊಡಕ್ಷನ್ ಮಾಡಬೇಕೋ ಅದನ್ನು ಮಾಡದೆ ಫಿನ್ಸೆ ಕ್ಲಾತ್ ಮತ್ತು ಆರ್ಟಿಫಿಷಿಯಲ್ ಕ್ಲಾತ್ ತಯಾರು ಮಾಡಿ ಲಾಭ ಪಡೆಯುತ್ತಿದ್ದಾರೆ. ಸಾಮಾನ್ಯ ಜನರಿಗೆ ಉಪಯೋಗ ಆಗುವ ಕೋರ್ಸ್ ಕ್ಲಾತ್ ಮಾಡಬೇಕು ಎನ್ನುವ ಧೋರಣೆ ಸರ ಕಾರಕ್ಕೆ ಇಲ್ಲ, ಆದುದರಿಂದ ಕ್ಲಾತ್ ಬ್ಲಾಕ್‌ಮಾರ್ಕೆಟ್‌ಗೆ ಹೋಗುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಡೆವಲಪಿಂಗ್ ಎಕಾನಮಿ ಬಗ್ಗೆ ಮಾನ್ಯ ಶ್ರೀ ಮಿಶ್ರಾರವರು ಪಾರ್ಲಿಮೆಂಟಿನಲ್ಲಿ ಹೇಳುವ ಮಾತುಗಳನ್ನು ನಾವು ಒಪ್ಪುವುದಿಲ್ಲ. ಈ ತರಹದ ಒಂದು ಪರಿಸ್ಥಿತಿ ಇರುವುದರಿಂದ ಇಲ್ಲಿನ ಬೆಲೆಗಳ ಏರಿಕೆ ನೋಡಿದರೆ ಅದು ಬಹು ಜಾಸ್ತಿಯಾಗಿದೆ, ಆದರೆ ಉತ್ಪಾದನೆ ಜಾಸ್ತಿಯಾಗಲಿಲ್ಲ. ಇದು ನಮ್ಮನ್ನೆ ಸರಕಾರ ನಮ್ಮ ಮೇಲೆ ಒಂದು ರೀತಿಯಾಗಿ 'ಗೂಬೆ ಕೂರಿಸುವ ಪ್ರವೃತ್ತಿ' ಮಾಡುತ್ತಿದ್ದರೆಯೇ ವಿನಾ ಬೇರೇನೂ ಮಾಡುತ್ತಿಲ್ಲ. ಸರಕಾರ ಹೇಳುವುದು ಕಾರ್ಮಿಕರು ಕೂಲಿ ಹೆಚ್ಚಿಸಬೇಕೆಂದು ಕೇಳುತ್ತಾರೆ, ಸರಕಾರದ ನೌಕರರು ಹೆಚ್ಚು ಸಂಬಳ ಕೇಳುತ್ತಾರೆ, ಬೋನಸ್ಸು ಕೇಳುತ್ತಾರೆ ಎಂದು ಹೇಳುವ ವಾದ ಸರಿಯಲ್ಲ. ಯಾರು ಆರ್ಥಿಕ ತಜ್ಞರು ಎಂದು ಇದ್ದಾರೋ ಅಂತಹವರು ಈ ವಾದವನ್ನು ಇಟ್ಟಿಲ್ಲ. ಇವೆರ್ಲಾ ಬರೀ ಬೀದಿಯಲ್ಲಿ ಹೋಗುವವರು ಆಡುತ್ತಿರುವ ಮಾತು. ಬೆಲೆಗಳು ಯಾವ ರೀತಿ ಇವೆ ಮತ್ತು ಕಾರ್ಮಿಕರ ಕೂಲಿ ಹೇಗಿದೆ ಎನ್ನುವುದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ತಮಗೆಲ್ಲಾ ಗೊತ್ತಿರುವ ಹಾಗೆ ನ್ಯಾಷನಲ್ ಲೇಬರ್ ಕಮಿಷನ್ ಎಂದು ನೇಮಕ ಮಾಡಿದ್ದರು. ಈ ಕಮಿಷನ್ ರಚನೆಯಾದಾಗ ಇದು ಮಾಜೀ ಮುಖ್ಯ ನ್ಯಾಯಾಧೀಶರಾದ ಶ್ರೀ ಗಜೇಂದ್ರ ಗಡ್‌ಕರ್ ಅವರ ನೇತೃತ್ವದಲ್ಲಿ ನಡೆಯಿತು. ಅವರು ಹೇಳಿರುವ ಶಿಫಾರಸಿನಲ್ಲಿ ಒಂದು ಮಾತು ಏನು ಹೇಳಿದ್ದಾರೆ ಎಂದರೆ :—CONCLUSIONS :

"We note that increases in money wages of industrial workers since Independence have not been associated with the rise in real wages. Nor have real wage increases been commensurate with any improvements in productivity. Simultaneously, wage costs as a proportion of the total costs of manufacture have registered a decline and the same is true about the workers' share in the value added by manufacture."

Production per worker increased by 63 percent between 1956 to 1964. Real earnings remained static or even fell down marginally. Between 52 and 58, money wages as a percentage of total output dropped from 13.17 to 11.4. Between 1960 and 1964 the drop was from 10.9 to 9.7 percent. The percentage of wages to value added by manufacture (surplus value created by the workers) showed a decline from about 50 in 1949–50 to 40 in 1958. It fell further to 36.5 percent in 1964, the latest year for which information is available. ಆದುದರಿಂದ Increare in wages ಅಥವಾ ಡಿ. ಎ. ಗೂ ಬೆಲೆ ಏರಿಕೆಗೂ ಯಾವ ಸಂಬಂಧವೂ ಇಲ್ಲ. ಇದೇ ರೀತಿ ಬೇರೆ ದೇಶದಲ್ಲಿರುವುದನ್ನು ತಾವು ಹೋಲಿಸಬಹುದು. ಫ್ರಾನ್ಸ್, ಇಟಲಿ, ಈ ದೇಶಗಳು ಕಾರ್ಮಿಕರ ಕೂಲಿಯನ್ನು ಹೆಚ್ಚಿಸಿದಾಗ ಅಲ್ಲಿನ ಬೆಲೆಗಳು ಏರಲಿಲ್ಲ. 1968 ರಲ್ಲಿ ಫ್ರಾನ್ಸ್‌ದೇಶದಲ್ಲಿ ಭಾರಿ ಮುಷ್ಕರವಾಗಿ ಕಾರ್ಮಿಕರ ವೇಜಸ್‌ಗಳು ಶೇಕಡಾ ಹತ್ತರಿಂದ ಹದಿನೈದರವರೆಗೆ ಹೆಚ್ಚು ಮಾಡಿದರು. ಆಗ ಕೂಡ ಅಲ್ಲಿನ ಪದಾರ್ಥಗಳ ಬೆಲೆ ಏರಲಿಲ್ಲ, ಆದೇ ರೀತಿ ಅಮೆರಿಕಾದಲ್ಲಿ ಟ್ರಾನ್‌ಪೋರ್ಟು ಸ್ಟ್ರೈಕ್ ಆಯಿತು. ಆಗ ಕೂಡ ಬೆಲೆಗಳು ಏರಲಿಲ್ಲ. ರಷ್ಯಾ ದೇಶ ನೋಡಿದರೂ ಕೂಡ ಅಲ್ಲಿನ ಜನ ಕೂಲಿ ಶೇಕಡಾ ಐದರಿಂದ ಹತ್ತರಷ್ಟು ಹೆಚ್ಚು ಮಾಡಿದಾಗಲೂ ಅಲ್ಲಿನ ಪದಾರ್ಥಗಳ ಬೆಲೆಗಳು ಜಾಸ್ತಿಯಾಗಲಿಲ್ಲ. ಇವೆಲ್ಲಾ ಕ್ಯಾಪಿಟಲಿಸ್ಟ್ ದೇಶಗಳು. ಅದರ ಬಗ್ಗೆ ಇಲ್ಲಿ ಹೇಳುತ್ತಿದ್ದೇನೆ.

ಶ್ರೀ ಎನ್. ಚಿಕ್ಕೇಗೌಡ.—ಅಲ್ಲಿ ಟ್ಯಾಕ್ಸೇಷನ್ ಬಗ್ಗೆ ಹೇಗಿರುತ್ತದೆ ?

ಶ್ರೀ ಎಂ. ಎಸ್. ಕೃಷ್ಣನ್.—ಟ್ಯಾಕ್ಸೇಷನ್‌ಗೂ ಇದಕ್ಕೂ ಸಂಬಂಧವಿಲ್ಲ.

Let me tell you, Taxes have nothing to do with Wages. ಇದೇ ರೀತಿ ಇಲ್ಲಿರುವ ಅಹಾರಧಾನ್ಯ ಇಲ್ಲವೇ ಸಕ್ಕರೆ ತೆಗೆದುಕೊಳ್ಳಿ, ಎಲ್ಲಿದರ ಬೆಲೆಯೂ ಏರುತ್ತಲಿದೆ. ಇನ್ನು ಹಾಗೇ ಡ್ರಗ್ ಕಂಟ್ರೋರ್ ಕಮಿಟೀ ಎಂದು ಮಾಡಿದ್ದೀರಿ ಮತ್ತು ಅದರಲ್ಲಿ ಸರಕಾರ ಶೇಕಡಾ 24 ರಷ್ಟು ಕನ್‌ಸೆಷನನ್ನು ಡ್ರಗ್ ಇಂಡಸ್ಟ್ರಿಗಾಗಿ ಕೊಟ್ಟರು. ಇದರಿಂದಾಗಿ ಔಷಧಿಗಳ ಬೆಲೆ ಶೇಕಡಾ 18 ರಿಂದ 24 ರ ವರೆಗೆ ಏರಲು ಅವಕಾಶವಾಯಿತು. ಇದರಲ್ಲೆಲ್ಲಾ ಬಂಡವಾಳಷಾಹಿಗಳನ್ನು ತಂದಿದ್ದಾರೆ ಸಾರಾಭಾಯಿ ಹಾಗೂ ಇನ್ನಿತರರು ಇದರ ವ್ಯಾಪಾರ ಮಾಡುತ್ತ ರಾಧ ಸಂವಾದನೆ ಮಾಡುತ್ತಿದ್ದಾರೆ. ಇವರಿಗೆಲ್ಲಾ ರೂಲ್ಸು ರಿಲ್ಯಾಕ್ಸ್ ಮಾಡಿದುದರಿಂದಾಗಿ ಇಂದು ಔಷಧಗಳ ಬೆಲೆ ಗಗನಕ್ಕೇರುತ್ತಿವೆ. ಕೂಲಿಗಾರರ ಕೂಲಿ ಕೊಡುವುದರಿಂದಾಗಿ ಬೆಲೆಗಳು ಖಂಡಿತ ಜಾಸ್ತಿಯಾಗುತ್ತಿಲ್ಲ ಎನ್ನುವುದನ್ನು ನಾನು ಇಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ.

ಇನ್ನೊಂದು ಕಾರಣವನ್ನು ಮಾನ್ಯ ಮುಖ್ಯ ಮಂತ್ರಿಗಳು ಬೆಲೆ ಏರಿಕೆ ಬಗ್ಗೆ ಹೇಳುತ್ತ ಈ ರೀತಿ ಹೇಳಿದ್ದಾರೆ.

"Price rise is inevitable in a developing economy." ಬೆಲೆ ಏರಿಕೆ ಎನ್ನುವುದು ಅನಿವಾರ್ಯವಾಗಿದೆ ಎನ್ನುವ ಮಾತನ್ನು ಇದರಲ್ಲಿ ಹೇಳುತ್ತಿದ್ದಾರೆ. Economically it is wrong. Politically also it is wrong. It is not a proposition which is based on facts. ಈ ಥಿಯರಿಯನ್ನು ಹೇಳುವಾಗ ಇನ್‌ಫ್ಲೇಷನ್ ಹೇಚ್ಚಾಗಿರುವುದರಿಂದ ಆಗುತ್ತೆ ಎಂದು ಹೇಳುವುದು ಸರಿಯಲ್ಲ. ಇದರ ಬಗ್ಗೆ ಎಕನಾಮಿಕ್ ಜ್ಯೂಂಸ್ ಎನ್ನುವ ಪತ್ರಿಕೆಯಲ್ಲಿ ಹೀಗೆ ಹೇಳುತ್ತಾರೆ :—

"It is not the heavy industry that is playing the major role. It is even now the consumption industry" ಎಂದು. ಆದುದರಿಂದ ಇದು ಬರೇ ಶುಷ್ಕವಾದ ವಾದ ಎಂದು ಇಲ್ಲಿ ಹೇಳಬೇಕಾಗಿದೆ. ನಮ್ಮ ದೇಶದಲ್ಲಿ ಡೆವಲಪಿಂಗ್ ಎಕಾನಮಿ ಇರುವುದೊಂದೇ ಅಲ್ಲ. ಪರ ರಾಷ್ಟ್ರಗಳಲ್ಲಿ ಎಂದರೆ ಸೋವಿಯಟ್ ಯೂನಿಯನ್ ಹಂಗೇರಿ, ರುಮೇನಿಯಾ ಬಲ್ಗೇರಿಯಾ ಇವೆಲ್ಲಾ ಸೋಷಿಯಲಿಸ್ಟ್ ಪ್ರಿನ್ಸಿಪಲ್ಸ್‌ಗಳನ್ನು ಅನುಸರಿಸುತ್ತಿರುವ ರಾಷ್ಟ್ರಗಳು. ಇಲ್ಲೂ ಇಂತಹ ಪರಿಸ್ಥಿತಿ ಇಲ್ಲ, ನಮ್ಮ ದೇಶದ ಮನಾಪಲಿಗಳೆಲ್ಲಾ ಬಿರ್ಲಾ ಟಾಟಾಗಳಿಗೇ ಬಿಟ್ಟಿದ್ದಾರೆ. ಇದಕ್ಕಾಗಿಯೇ ನಮ್ಮ ದೇಶದಲ್ಲಿ ಸಮಾಜವಾದೀ ತತ್ವ ಇಷ್ಟು ಅಧೋಗತಿಗೆ ಇಳಿದು ಹೋಗಿದೆ. ಸಮಾಜವಾದೀ ತತ್ವಗಳನ್ನು ನಂಬಿಕೊಂಡಿದ್ದರೂ ಇಂದು ಬೆಲೆಗಳು ಜಾಸ್ತಿಯಾಗುತ್ತಾ ಬರುತ್ತಿವೆ. ಈ ರೀತಿ ಇರುವ ಸೊಸೈಟಿಯನ್ನು ನಾವು ಧೈರ್ಯದಿಂದ ಕರ್ಬ್ ಮಾಡಬೇಕು.

(ಶ್ರೀ ಎಂ. ಎಸ್. ಕೃಷ್ಣನ್)

ಈಗ ನಮ್ಮ ತತ್ವ ಎಂದರೆ: Landlords being eliminated; lands being distributed to the easantry. ಆದರೆ ಈಗ ಏನಾಗಿದೆ ಎಂದರೆ ಮನಾಪಲಿಗಳನ್ನು ಬೆಳೆಸುತ್ತಿದ್ದಾರೆ.

There Monopolies have to be done away with by means of production being brought under the control of Government.

ಇಂತಹ ಬಂಡವಾಳಗಾರರಿಗೆ ಅವಕಾಶ ಕೊಟ್ಟಿರುವುದರಿಂದಾಗಿ ಇಂದು ಬೆಲೆಗಳು ಗಗನಕ್ಕೇರುತ್ತಿವೆ. You are giving an alibi to the Tatas and Birlas in our country. ಇಂತಹ ಶುಷ್ಕವಾದ ವಾದ ಮಾಡುವುದರಿಂದೇನೂ ಪ್ರಯೋಜನವಾಗುವುದಿಲ್ಲ.

ಇನ್ನು ಡೆಫಿಸಿಟ್ ಫೈನಾನ್ಸಿಂಗ್ ಬಗ್ಗೆ ಹೇಳುವಾಗ ಒಂದು ಮಾತು ಹೇಳಬೇಕಾಗಿದೆ. 1972 ರಿಂದ 1973ರ ವರೆಗೆ 1300 ಕೋಟಿ ರೂಪಾಯಿ ಡಿಫಿಸಿಟ್ ಇತ್ತು. It was necessary because of Bangla Desh and Pakistan War ಎಂದು ಹೇಳುತ್ತಾರೆ. Even if you take it into account, that argument does not hold good. ರೆಫ್ಯೂಜಿಗಳು 1972 ನೇ ಮಾರ್ಚ್ ತಿಂಗಳಲ್ಲೇ ಇಲ್ಲಿಂದ ಹೊರಟು ಹೋದರು. ಇದರ ಪರಿಣಾಮವಾಗಿ ಬ್ಯಾಂಕುಗಳಿಂದ ಹಣ ಪಡೆಯುವುದೂ ಕಡಿಮೆಯಾಗಿದೆ.

Money supply is increasing even when refugees have gone, and even though Pakistan War has stopped, you do not stop collection for Refugee Tax.

The bank credit is going higher and higher. In 1972-73, the net bank credit has risen by another Rs. 592 crores as against Rs. 482 crores during the same period in the previous year. Money supply in these four months has risen by Rs. 212 crores as against Rs. 14[illegible] crores during the same period in the previous year. The Bangla Desh refugees have already left. ಆದರೂ ಬೆಲೆಗಳ ಏರಿಕೆಗೆ ಬಾಂಗ್ಲಾದೇಶದ ನಿರಾಶ್ರಿತರೇ ಕಾರಣ ಎಂದು ಹೇಳುತ್ತಿರುವುದು ಸುಳ್ಳು. ಬೆಲೆಗಳು ಏರುತ್ತಿರುವುದಕ್ಕೆ ಅದು ಕಾರಣವಾಗುವುದಿಲ್ಲ. ನಮ್ಮ ದೇಶದವರೆಂತಹ ಅರ್ಥಶಾಸ್ತ್ರಜ್ಞರು ಇದನ್ನು ಒಪ್ಪುವುದಿಲ್ಲ; ಮಾನ್ಯ ಚವಾಣ್ ಅವರು ಕೂಡ ಮಹಾರಾಷ್ಟ್ರದಲ್ಲಿ ಪರೋಕ್ಷವಾಗಿ ಇದನ್ನು ಒಪ್ಪಿಕೊಂಡಿದ್ದಾರೆ. Deficit financing has exceeded all reasonable limits. The Central Government is pumping in more money. There is too much deficit financing. The policy of Government is in favour of monopolists and landlords. The Wanchoo Committee has said that every year Rs. 1,400. crores of black money is being produced. It is a parallel economy ನಿಮ್ಮ ಇಕಾನಮಿ ಒಂದು ಕಡೆಯಾದರೆ ಬ್ಲಾಕ್‌ಮನಿ ಇನ್ನೊಂದು ಕಡೆ ಹೆಚ್ಚುತ್ತಿದೆ. ಆದ ಕಾರಣ ಬೆಲೆಗಳನ್ನು ಇಳಿಸುವುದಕ್ಕೆ ನಿಮಗೆ ಸಾಧ್ಯವಾಗುತ್ತಿಲ್ಲ. ನಿಮ್ಮ ಕಣ್ಣು ಕೇವಲ ರೈತರ ಮೇಲೆ, ಕಾರ್ಮಿಕರ ಮೇಲೆ, ಎನ್. ಜಿ. ಒ. ಗಳ ಮೇಲೆ ಇರುವುದು ಬೇಡ. ನಿಮ್ಮ ಕಣ್ಣು ಯಾವಾಗಲೂ ಬಂಡವಾಳಶಾಹಿಗಳ ಮೇಲೆ, ದೊಡ್ಡ ದೊಡ್ಡ ಜಮೀನುದಾರರ ಮೇಲೆ ಇರಬೇಕು. ಮತ್ತು ವರ್ತಕರ ಮೇಲೆ ಇರಬೇಕು. ಇವರು ಇಂದು ಹಣವನ್ನು ಲೂಟಿ ಮಾಡುತ್ತಿದ್ದಾರೆ. Even now you are giving more and more concessions to the monopolists of our country. If I am telling a lie, I am prepared to resign.

Sri H.M. CHANNABASAPPA.—No, don't resign.

Sri M. S. KRISHNAN.—Then accept my statement.

Sri H. M. CHANNABASAPPA.—Merely because we want the hon. Member to remain in this House, that does not mean that I should accept whatever he says.

Sri M. S. KRISHNAN.--You either controvert my statement or accept my resignation. What the Wanchoo Committee says is that the only way by which you can control black money is not only by curbing the monopolists but also by demonetising the notes, particularly the hundred rupee notes. Of course, you cannot announce it publicly but in one night it has to be done. When it has been done by capitalist countries and when Sirimavo Bandaranayake has done it, why cannot Srimathi Indira Gandhi do it ? We are prepared to support her. It is not because of that the prices are shooting up ? Why don't you do it ? I know the Centre has to do it.

Another thing is the nationalisation of textile, sugar, drug and edible oil industries. The U.P. Assembly has recommended the nationalisation of the sugar industry. But the Centre is not agreeing to it. The mill magnates have played hell with our economy ; it is atrocious. ಇಂದು ನತ್ತ ಹೆಣಂತಿರುವ ಬಜ್ಜೆ ಮಿಲ್‌ಗಳನ್ನು ಕೇಂದ್ರದವರು ವಹಿಸಿಕೊಂಡು ಅವುಗಳಿಗೆ ಆಕ್ಸಿಜನ್ ಕೊಡುತ್ತಿದ್ದಾರೆ. ಈ ವಿಷಯ ಶ್ರೀ ಶ್ರೀರಾಮುಲು ಅವರಿಗೆ ಗೊತ್ತು. ಸರ್ಕಾರದವರು ಅವುಗಳನ್ನು ವಹಿಸಿಕೊಳ್ಳುವುದಕ್ಕೆ ಮೊದಲು ಅದರ ಮಾಲೀಕರು ಬಾಕಿಪ್ಪು ಹಣವನ್ನು ಮಾಡಿಕೊಂಡುಬಿಟ್ಟರು. ಇಂತಹ ಮಾಲೀಕರುಗಳಿಗೆ 'ಚಡ್ಡೀ ಏಟು ಕೊಡ ಬೇಕು. The textile industry is the most mismanaged industry. Why should not the State take over the whole thing and run in the interest of the people ? The Government is not prepared to do it. All these industries must be nationalised The Government has taken over only the sick mills. That is not correct. They must take over the entire industry.

The wholesale trading in foodgrains must be taken over by the Government. ಇದು ಕೇಂದ್ರದ ಪಾಲಿಸಿಯಾದರೂ ಸಹ ನಮ್ಮ ರಾಜ್ಯದಲ್ಲಿ ಸರ್ಕಾರದವರು ವಹಿಸಿಕೊಳ್ಳಲು ಇನ್ನೂ ಮೀನಾಮೇಷ ಎಣಿಸುತ್ತಿದ್ದಾರೆ. ಆ ದಿನ ಕ್ಷಾಮ ಪರಿಸ್ಥಿತಿಯ ಬಗ್ಗೆ ಚರ್ಚೆ ನಡೆದಾಗ ಮತ್ತು ವಿಧಾನಸೌಧದ ಮುಂದೆ ಸತ್ಯಾಗ್ರಹ ಮಾಡಿದ್ದ ಜನರಿಗೆ ಕೆಲಸ ಒದಗಿಸಲು, ಅವರನ್ನು ಕಾಳೀನದಿ ಪ್ರಾಜೆಕ್ಟಿಗೆ ಕಳಿಸುವ ಸಲುವಾಗಿ ಕೂಡಲೇ ಬಸ್ ಸೌಕರ್ಯವನ್ನು ಮಾನ್ಯ ಮಂತ್ರಿಗಳು ಏರ್ಪಡಿಸಿದರು. ಅದನ್ನು ಮಾಡುವ ಶಕ್ತಿ ಇದ್ದರೆ ಇದನ್ನು ಸಹ ಎತಕ್ಕೆ ಮಾಡಬಾರದು ? ಮನಸ್ಸು ಇದ್ದರೆ ಮಾರ್ಗವಿರುತ್ತದೆ. You are giving all sorts of reasons for not taking i over.

Sri H. M. CHANNABASAPPA. --Whenever an undertaking of this nature has to be done the necessary infrastructure will have to be built and nothing should be done in a hasty manner. If you want to have desired results, proper infrastructure is a basic prerequisite.

Sri M. S. KRISHNAN.--I am really surprised that a person of the stature and administrative ability of Sri Channabasappa should say that. It is a question of implementation of the policy which you have already undertaken. It is not a question of evolving a new policy. To arrive at this policy you have taken 25 years ; it is atrocious. There may have been many reasons for that. All along you were with the monopolists and now you are trying to break with them. You have arrived at a new policy but you are not prepared to implement it with full force. ಬತ್ತದ ಬಗ್ಗೆ ಬೆಲೆಯನ್ನು ನಿಗದಿ ಮಾಡಬೇಕಾಗಿದೆಯೆಂದು ಹೇಳುತ್ತಾರೆ. ಬೆಳೆದವರಿಗೆ ನ್ಯಾಯವಾದ ಬೆಲೆ ಕೊಡಬೇಕಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ.

(SRI M. S. KRISHNAN)

ಅದಕ್ಕಾಗಿ ಕಾರ್ಯಕ್ರಮವ ಕೈಕೊಳ್ಳುವುದರಲ್ಲಿ ವಿಳಂಬ ಮಾಡುವುದು ಸರಿಯಲ್ಲ. ಈ ಬಗ್ಗೆ ಅಡ್ಮಿನಿಸ್ಟ್ರೇಟೀವ್ ಮೆಷಿನರಿಯನ್ನು ಇನ್ನೂ ಸೆಟ್‌ಅಪ್ ಮಾಡಿಲ್ಲವೆಂದು ಹೇಳುತ್ತಾರೆ. ಈ ಒಂದು ಕಾರಣವನ್ನು ಕೊಡುವುದರ ಮೂಲಕ ಇದನ್ನು ಇನ್ನೂ ಸ್ವಲ್ಪಕಾಲ ತಳ್ಳಿಕೊಂಡು ಹೋಗಿ ಜಮೀನುದಾರರಿಗೆ ಮತ್ತು ವರ್ತಕರಿಗೆ ಅನುಕೂಲ ಮಾಡಿಕೊಡೋಣ ಎಂದು ಇದ್ದಾರೆ. I accuse you ; I charge you.

Sri H. M. CHANNABASAPPA.— You have already liquidated all the zamindars.

Sri M. S. KRISHNAN.—Still he is one of the zamindars who is remaining. He has formed a co-operative farming society.

12-NOON

ಅದಕ್ಕೋಸ್ಕರ ನಾನು ತಮ್ಮಲ್ಲಿ ವಿನಂತಿಮಾಡಿಕೊಳ್ಳುವುದೇನೆಂದರೆ ಬೆಂಗಳೂರಿನಲ್ಲಿ ಫುಲ್ ರೇಷನಿಂಗ್ ಪದ್ಧತಿಯನ್ನು ಜಾರಿಗೆ ತರಬೇಕು ಎಂದು. ಎಲ್ಲಾ ಜೀವನಾವಶ್ಯಕ ವಸ್ತುಗಳ ಬೆಲೆಗಳೂ ವಿಪರೀತವಾಗಿ ಏರಿಹೋಗಿವೆ. ತರಕಾರಿ ಕೂಡ ಬೇರೆ ಕಡೆಗಳಿಗಿಂತ ಇಲ್ಲಿ ಜಾಸ್ತಿಯಾಗಿದೆ. ಆಲೂಗಡ್ಡೆ, ಹುರಿಕಾಯಿ, ಟೊಮ್ಯಾಟೋ ಎಲ್ಲ ತರಕಾರಿಗಳ ಬೆಲೆಗಳೂ ಜಾಸ್ತಿಯಾಗಿವೆ. ಬೆಂಗಳೂರಿನಲ್ಲಿ ನೀವು ಫುಲ್ ಸ್ಕೇಲ್ ರೇಷನಿಂಗ್ ಪದ್ಧತಿಯನ್ನು ಏತಕ್ಕೆ ಜಾರಿಗೆ ತರಬಾರದು ? ಬೆಂಗಳೂರಿನಲ್ಲಿ ಕಟ್ಟಿಗೆ ಬೆಲೆ ಕೂಡ ಇನ್ನಿ ಆಗಿದೆ ರೇಶನಿಂಗ್ ಪದ್ಧತಿಯನ್ನು ಎಲ್ಲಾ ಟೌನುಗಳಲ್ಲಿ ತಂದರೂ ಒಳ್ಳೆಯದು. ಈ ರೀತಿಯಾಗಿ ಸರ್ಕಾರದವರು ಕ್ರಮವನ್ನು ಕೈಗೊಳ್ಳಬೇಕು. ಈ ರೀತಿ ನೀವು ಕಾರ್ಯಕ್ರಮವನ್ನು ಕೈಗೊಳ್ಳುವುದಾದರೆ ನಮ್ಮ ಜೊತೆಯಲ್ಲಿ ನಾವು ಸಹಕರಿಸುತ್ತೇವೆ. ಆದರೆ ಈ ಬಗ್ಗೆ ಸರ್ಕಾರದವರು ಕಾರ್ಯಕ್ರಮವನ್ನು ಕೈಗೊಳ್ಳುತ್ತಾರೆಯೋ ಇಲ್ಲವೋ ಗೊತ್ತಿಲ್ಲ. ಆ ರೀತಿ ಕೆಲಸವನ್ನು ಮಾಡುವುದಕ್ಕೆ ಸರ್ಕಾರದವರು ಹಿಂಜರಿಯುತ್ತಿದ್ದಾರೆ. You can rest assure that there will be a powerfull movement against price rise and against the policy of the government and we will be in that movement in order to see the policy is changed according to the tune of time. ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

MADAM SPEAKER.—The time allotted for this Resolution is over. There are still three or four members desirous to speak. I think the House agrees for extension of time for this Resolution.

Hon. Members.—Yes.

MADAM SPEAKER.—The time is extendeed.

† ಶ್ರಿ. ಎಸ್. ಎಂ. ಶೀರನಾಳ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಸಭಾಧ್ಯಕ್ಷರೇ ಮಾನ್ಯ ಸದಸ್ಯರಾದ ಶ್ರೀಮಾನ್ ಶಾಮಣ್ಣನವರು ಈ ನಭೆಯ ಮುಂದೆ ತಂದಿರತಕ್ಕ ನಿರ್ಣಯದ ಬಗ್ಗೆ ನಾನು ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ಶ್ರೀಮಾನ್ ಕೃಷ್ಣನ್ ಅವರು ಮಾತನಾಡುವಾಗ ಅವರು ಒಂದೂ ವಿಚಾರವನ್ನು ಮರೆತರು ಎಂದು ಕಾಣುತ್ತದೆ. ಕೈಗಾರಿಕೆಗಳಲ್ಲಿ ಉತ್ಪನ್ನವನ್ನು ಹೆಚ್ಚಿಸುವ ದೃಷ್ಟಿಯನ್ನು ಇಟ್ಟುಕೊಳ್ಳದೇ ಹೋದರೆ ಯಾವ ಬೆಲೆಯನ್ನೂ ಹಿಡಿತದಲ್ಲಿ ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲವೆಂಬುದನ್ನು ಅವರು ಮರೆತರು ಎಂದು ಕಾಣುತ್ತದೆ. ಕೇವಲ ಕೂಲಿಗಾರರ ದೃಷ್ಟಿಯಿಂದ ನೋಡುವುದಾದರೆ ಅವರು ಯಾಪರೀತಿ ನಡೆದುಕೊಳ್ಳುತ್ತಾರೆ ಎನ್ನುವುದನ್ನು ನೋಡದಿದ್ದರೆ ಉತ್ಪನ್ನ ಕುಲಿತವಾಗುತ್ತದೆ. ಆಗ ಬೆಲೆ ತಾನಾಗಿಯೇ ಏರುತ್ತದೆ. ಇವೊತ್ತು ಕಾರ್ಮಿಕರ ನಾಯಕರು ಕೇವಲ ಕಾರ್ಮಿಕರ ಬೋನಸ್ ಬಗ್ಗೆ ಹೋರಾಟ ಮಾಡುತ್ತಾರೆ. ಅವರ ಸಂಬಳಕ್ಕಾಗಿ ಹೋರಾಟ ಮಾಡುತ್ತಾರೆ. ಅದರ ಸವಲತ್ತು ಬಗ್ಗೆ ಹೋರಾಟ ಮಾಡುತ್ತಾರೆ. ಆದರೆ 10 ಜನಗಳಿಂದ ಆಗತಕ್ಕಂಥಾ ಕೆಲಸಕ್ಕೆ 100 ಜನಗಳನ್ನು ತೆಗೆದುಕೊಳ್ಳಬೇಕಾದಂತಹ ಪರಿಸ್ಥಿತಿ ಬಂದರೆ ಯಾವ ಕೈಗಾರಿಕೆ ಬೆಳವಣಿಗೆ ಆಗುತ್ತದೆ ? ಉತ್ಪನ್ನವನ್ನು ಹೆಚ್ಚಿಸುವ

ದೃಷ್ಟಿಯನ್ನು ಇಟ್ಟುಕೊಳ್ಳದೇ ಹೋದರೆ ಯಾವರೀತಿಯಿಂದಲೂ ಬೆಲೆಯನ್ನು ಹತೋಟಿಯಲ್ಲಿ ತರುವುದಕ್ಕೆ ಸಾಧ್ಯವಾಗುವುದಿಲ್ಲ. ಯಾವ ಕಾರ್ಖಾನೆಯಲ್ಲಿ ನೋಡಿದರೂ ಕೂಡ ಕಾರ್ಮಿಕರು ಕ್ಯಾಂಟೀನುಗಳಲ್ಲಿ ಬೀಡಿ ಹೆಚ್ಚಿಕೊಂಡು ಕಾಲವನ್ನು ಕಳೆಯುತ್ತಾ ಇರುತ್ತಾರೆ.

ಶ್ರೀ ಎಂ.ಎಸ್. ಕೃಷ್ಣನ್.—ಇವರಿಗೆ ಕಾರ್ಮಿಕರ ವಿಷಯವೇ ಗೊತ್ತಿಲ್ಲ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಮಾನ್ಯ ಸದಸ್ಯರಾದ ಕೃಷ್ಣನ್ ಅವರು ಬೆಂಗಳೂರಿನಲ್ಲಿದ್ದಾರೆ. ನಾನು ಶಿವಮೊಗ್ಗದಲ್ಲಿದ್ದೇನೆ. ಅವರಿಗೆ ನನ್ನ ವಿಷಯ ಅಷ್ಟಾಗಿ ಗೊತ್ತಿಲ್ಲ. ನಾನೂ ಸಹ 3-4 ಕಾರ್ಮಿಕರ ಸಂಘಗಳಲ್ಲಿ ಅಧ್ಯಕ್ಷನಾಗಿದ್ದೇನೆ. ನನಗೂ ಕಾರ್ಮಿಕರ ಬಗ್ಗೆ ಸಹಾನುಭೂತಿ ಇದೆ. ಉತ್ಪಾದನೆ ಸರಿಯಾಗಿ ಆಗದೇ ಹೋದರೆ ಆರ್ಥಿಕ ಪರಿಸ್ಥಿತಿ ಗುಲ್ಬಣವಾಗುತ್ತದೆ. ಅದನ್ನು ಎಲ್ಲರೂ ಒಪ್ಪಲೇಬೇಕು. ತಾವು ಒಂದು ಹೆಸರನ್ನು ಗಳಿಸುವ ದೃಷ್ಟಿಯಿಂದ, ಅವರಿಗೆ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ಅವರ ಸವಲತ್ತಿನ ಬಗ್ಗೆ ಮಾತನಾಡುತ್ತಾರೆ. ಆದರೆ ಕಾರ್ಖಾನೆಯ ಹಿತದೃಷ್ಟಿಯನ್ನು ಇಟ್ಟುಕೊಳ್ಳದೆ ಮಾತನಾಡುವುದು ಸರಿಯಲ್ಲ. ಈಗ ಸರ್ಕಾರ ಲೆವಿ ವಸೂಲು ಮಾಡುವ ದೃಷ್ಟಿಯಿಂದ ಸ್ಟ್ರಿಕ್ಟ್ ಮೂವ್‌ಮೆಂಟ್ ಕಂಟ್ರೋಲ್ ಹಾಕಿರುವ ಕಾರಣ ಬೆಲೆಗಳು ಹೆಚ್ಚಾಗುತ್ತಿದೆ. ಮತ್ತು ಮನಾಪಲ್ ಪ್ರೊಕ್ಯೂರ್‌ಮೆಂಟ್ ಅನ್ನು ಸರ್ಕಾರದವರು ಅರ್ಧ ಭಾಗ ಮಾತ್ರ ಮಾಡುವುದರಿಂದ ವ್ಯಾಪಾರಸ್ಥರಿಗೆ ಪ್ರೋತ್ಸಾಹ ಕೊಟ್ಟಹಾಗೆ ಆಗುತ್ತದೆ. ಈಗ ಸರ್ಕಾರದವರು ಲೆವಿ ಮುಖಾಂತರ ವಸೂಲು ಮಾಡುವ ಬತ್ತಕ್ಕೆ ಒಂದು ಕ್ವಿಂಟಾಲಿಗೆ 50 ರೂಪಾಯಿ ಕೊಟ್ಟರೆ ವ್ಯಾಪಾರಸ್ಥರು ಒಂದು ಕ್ವಿಂಟಾಲಿಗೆ 70 ರೂಪಾಯಿಗಳನ್ನು ಕೊಡುತ್ತೇವೆ ಬತ್ತವನ್ನು ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ. ಈಗ ನಮ್ಮ ಶಿವಮೊಗ್ಗಾ ಜಿಲ್ಲೆಯ ಪರಿಸ್ಥಿತಿಯನ್ನು ತೆಗೆದುಕೊಂಡರೆ ಆ ಜಿಲ್ಲೆಯ ಬಾರ್ಡರನ್ನು ದಾಟಿ ಬೇರೆ ಜಿಲ್ಲೆಯ ಬಾರ್ಡರಿಗೆ ಹೋದರೆ ಒಂದು ಕ್ವಿಂಟಾಲಿಗೆ 25-30 ರೂಪಾಯಿಗಳ ವ್ಯತ್ಯಾಸ ಇದೆ. ಈ ದೃಷ್ಟಿಯಿಂದ ಸರ್ಕಾರದವರು ಪ್ರೈಡ್ ಕಾರ್ಪೊರೇಷನ್ ಮಾಡಿ ಆಹಾರಧಾನ್ಯಗಳ ಸಗಟು ವ್ಯಾಪಾರವನ್ನು ವಹಿಸಿಕೊಂಡು ಜನ ಸಾಮಾನ್ಯರಿಗೆ ಆಹಾರ ಧಾನ್ಯವನ್ನು ಹಂಚಿಕೆಯ ವ್ಯವಸ್ಥೆಯನ್ನು ಮಾಡಿದರೆ ಬೆಲೆ ತಾನಾಗಿಯೇ ಹತೋಟಿಗೆ ಬರುತ್ತದೆ. ಆದ್ದರಿಂದ ಆಹಾರ ಧಾನ್ಯಗಳ ಸಂಗ್ರಹಣೆಯನ್ನು ಅರ್ಧ ಸರ್ಕಾರದವರು ಮಾಡುವುದು ಅರ್ಧ ವ್ಯಾಪಾರಸ್ಥರು ಮಾಡುವ ಪದ್ಧತಿಯಿಂದ ಬೆಲೆಗಳನ್ನು ಹತೋಟಿಗೆ ತರುವುದಕ್ಕೆ ಸಾಧ್ಯವಿಲ್ಲ.

ಇನ್ನೊಂದು ವಿಚಾರ. ಯಾವಾಗ ಮನುಷ್ಯನಿಗೆ ಸಾಕಾದಷ್ಟು ಆಹಾರಧಾನ್ಯಗಳು ಸುಲಭ ಬೆಲೆಗೆ ದೊರೆಯುವುದಿಲ್ಲ. ಆಗ ಅವನಿಗೆ ಆಹಾರ ಧಾನ್ಯವನ್ನು ಶೇಖರಣೆ ಮಾಡುವ ಪ್ರವೃತ್ತಿ ಬೆಳೆಯುತ್ತದೆ. ಈ ವಿಷಯದಲ್ಲಿ ಮನುಷ್ಯನು ಯೋಚನೆ ಮಾಡಬೇಕಾದ್ದಿಲ್ಲ ಎನ್ನುವ ಪರಿಸ್ಥಿತಿ ನಿರ್ಮಾಣವಾಗುವವರೆಗೆ ಅವನ ಸಂಗ್ರಹ ಮಾಡುವ ಮನೋಭಾವವನ್ನು ಬದಲು ಮಾಡುವುದ ಕ್ಯಾಗುವುದಿಲ್ಲ. ಆದ್ದರಿಂದ ಈ ಬಗ್ಗೆ ಸರ್ಕಾರದವರು ಹೆಚ್ಚು ಗಮನವನ್ನು ಕೊಡಬೇಕಾಗುತ್ತದೆ.

ಇವೊತ್ತು ನಮ್ಮ ಸಮಾಜದ ವ್ಯವಸ್ಥೆ ಏನಾಗಿದೆ ಎಂದರೆ ಈಗ ಯಾರಾದರೂ ಒಬ್ಬನು ಕಳ್ಳತನ ಮಾಡಲಿ, ದರೋಡೆ ಮಾಡಲಿ, ಏನಾದರೂ ಮಾಡಲಿ ಅವನು ಆಸ್ತಿ ಮಾಡಿದ್ದರೆ ಸಾಕು ಅವನನ್ನು ಮೇಲೆ ಕೂರಿಸುತ್ತಾರೆ. ಅವನಲ್ಲಿ ಹಣವಿದ್ದರೆ ಬನ್ನಿ ಸಾಹುಕಾರರೇ ಎಂದು ಅವನಿಗೆ ಗೌರವ ಕೊಡುತ್ತಾರೆ. ಅವನ ನೀತಿ ನಡತೆಗಳು ಸರಿಯಾಗಿಲ್ಲದಿದ್ದರೂ ಹಣವಂತನಾಗಿದ್ದರೆ ಸಮಾಜದಲ್ಲಿ ಗೌರವ ಸಿಕ್ಕುತ್ತದೆ. ಇವೊತ್ತು ಯಾರಾದರೂ ಒಬ್ಬರಿಗೆ ಒಂದು ಹಣ್ಣು ಕೊಡಬೇಕಾದರೂ ಅವನಿಗೆ ಎಷ್ಟು ಆಸ್ತಿ ಇದೆ ಎಂದು ಕೇಳುತ್ತಾರೆ. ನಮ್ಮ ಶೆಟ್ಟರಲ್ಲಿ ಒಂದು ಗಾದೆಯ ಮಾತು ಇದೆ. ಶೆಟ್ಟಿಯು (ಅಂದರೆ ವರ್ತಕ ಶೆಟ್ಟಿ) ಎಷ್ಟು ನೂರು ದಿವಾಳಿ ತೆಗೆಯುತ್ತಾನೆ. ಅಷ್ಟು ಮಟ್ಟಿಗೆ ಅವನು ಹೆಚ್ಚು ಕ್ಯಾಪಿಟಲಿಸ್ಟ್ ಆಗುತ್ತಾನೆ. ಅಂದರೆ ಒಂದೊಂದು ಸಲ ದಿವಾಳಿ ತೆಗೆದ ಅಂದರೆ ಒಂದುಲಕ್ಷ ರೂಪಾಯಿ ಗಳಿಸಿದ ಎಂದು ಅರ್ಥ. ಇಂತಹ ಸಮಾಜ ವ್ಯವಸ್ಥೆ ಇರುವಾಗ, ನಾವು ಎಲ್ಲಿಯವರೆಗೆ ಇದನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲವೋ, ಅಲ್ಲಿಯವರೆಗೆ ಈ ಬೆಲೆಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇವತ್ತು ಶಿವಮೊಗ್ಗ, ಕಾರವಾರ ದಕ್ಷಿಣ ಕನ್ನಡಜಿಲ್ಲೆ ಇತ್ಯಾದಿ ಕಡೆಗಳಲ್ಲಿ ಆಹಾರ ಪದಾರ್ಥಗಳ ಬೆಲೆಗಳು ಏರುತ್ತಾ ಇರುವಾಗ ಅಡಿಕೆ ಬೆಲೆ ಒಂದೇ ಸಮನೆ ಕೆಳಕ್ಕೆ ಹೋಗುತ್ತಾ ಇರಲು ಕಾರಣವೇನು ? ಸರ್ಕಾರದವರಿಗೆ ಎಲ್ಲಿಯವರೆಗೆ ಬೆಳೆಗಾರರಿಗೆ ಬೆಳೆದ ಪದಾರ್ಥಗಳಿಗೆ ಕೊಡುವ ಬೆಲೆಯಲ್ಲಿ ಅಷ್ಟಕ್ಕಿಂತ ಜಾಸ್ತಿಯೂ ಅಲ್ಲ, ಮತ್ತು ಇಷ್ಟಕ್ಕಿಂತ ಕಮ್ಮಿಯೂ ಅಲ್ಲವೆಂದು ಆಶ್ವಾಸನೆಯನ್ನು ಕೊಡುವುದಿಲ್ಲವೋ, ಅಲ್ಲಿಯವರೆಗೆ ಈ ಪರಿಸ್ಥಿತಿ ತಪ್ಪುವುದಿಲ್ಲ. ಇವತ್ತು ಅಡಿಕೆ ಬೆಳೆಗಾರರಿಗೆ ಒಂದು ಭಯ ಬಂದು ಬಿಟ್ಟಿದೆ. ಅವರು ಸೊಸೈಟಿಗಳಲ್ಲಿ ಬ್ಯಾಂಕುಗಳಲ್ಲಿ ಈ ಬೆಳೆಯನ್ನು ನಂಬಿಕೊಂಡು ಸಾಲ ತೆಗೆದುಕೊಂಡು ಬಂದಿರುತ್ತಾರೆ.

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್)

ಹೀಗಿರುವಾಗ ಮಾಣಕ್ಕೆ 100 ರೂಪಾಯಿ ಬದಲು 50 ರೂಪಾಯಿ ಆಗಿಬಿಟ್ಟರೆ ಅವರ ಗತಿ ಏನಾಗಬೇಕು? ಎಷ್ಟೋ ಸಂಸಾರಗಳು ಇದರಿಂದ ವಿಷ ತೆಗೆದುಕೊಂಡು ಸಾಯುತ್ತಿವೆ. ಇದನ್ನು ಮಾನ್ಯ ಕೆ. ಎಚ್. ಪಾಟೀಲರಿಗೂ ತಿಳಿಸಿದ್ದೇವೆ, ಆದರೂ ಸಹ ಸರ್ಕಾರಕ್ಕೆ ಇದನ್ನು ಹತೋಟಿಗೆ ತರುವುದಕ್ಕಾಗಲಿಲ್ಲ. ಈ ರೀತಿ ಎಲ್ಲಿಯವರೆಗೆ ಇದನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಈ ನಮ್ಮ ನಾಡಿನ ಸಮಸ್ಯೆ ಬಗೆಹರಿಯುವುದಿಲ್ಲವೆನ್ನುವ ಅಭಿಪ್ರಾಯ ನನಗೆ ಬಂದಿದೆ.

ಇನ್ನು ಡೀ ಪೊನೆಟೈಸೇಶನ್ ಬಗ್ಗೆ ಒಂದು ಮಾತು ಹೇಳಬೇಕೆಂದಿದ್ದೇನೆ. ಇವತ್ತು ಹತ್ತಲ್ಲ, ಇಪ್ಪತ್ತು ವರ್ಷ ಪ್ರಯತ್ನ ಮಾಡಿದರೂ ಎಲ್ಲಿಯವರೆಗೆ ನಾವು ಈ ಕಪ್ಪು ಹಣದ ಪ್ರಭಾವವನ್ನು ತಪ್ಪಿಸುವುದಕ್ಕೆ ಹೋಗುವುದಿಲ್ಲವೋ ಅಲ್ಲಿಯವರೆಗೆ ನಾವು ಈ ಬೆಲೆಯನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಇವತ್ತು ಯಾರ್ಯಾರ ಹತ್ತಿರ ಬ್ಲಾಕ್ ಮನಿ ಇರುತ್ತದೆ, ಅದನ್ನು ಅವರು ಖರ್ಚು ಮಾಡಬೇಕಾಗುತ್ತದೆ. ಅಂಥವನು ಒಂದು ಪದಾರ್ಥಕ್ಕೆ 10 ರೂಪಾಯಿ ಬೆಲೆ ಇದ್ದರೆ, ಅದಕ್ಕೆ 20-30 ರೂಪಾಯಿ ಕೊಟ್ಟು ಖರೀದಿ ಮಾಡಲು ತಯಾರಾಗಿದ್ದಾನೆ. ಏಕೆಂದರೆ ಅವನಿಗೆ ಕೊಡತಕ್ಕಂತಹ ಶಕ್ತಿ ಇದೆ. ತೆಗೆದುಕೊಳ್ಳುತ್ತಾನೆ. ಇವತ್ತು ಇನ್‌ಕಂ ಟ್ಯಾಕ್ಸಿನವರು ಕೆಲವು ಖರ್ಚುಗಳಿಗೆ ಎಗ್ಸೆಮೆಶನ್ ಇಟ್ಟಿದ್ದಾರೆ. ಅದ್ದರಿಂದ ಕೆಲವು ಶ್ರೀಮಂತ ವರ್ಗದ ಜನರು ಬೇಕೋ ಬೇಡವೋ, ಆ ಖರ್ಚನ್ನು ಧಾರಾಳವಾಗಿ ಮಾಡುವುದು, ಕಾರುಗಳನ್ನು ಇಟ್ಟುಕೊಂಡು ಖರ್ಚು ಮಾಡುವುದು, ಮತ್ತು 10 ಸಾವಿರ ಇದ್ದರೆ 15 ಸಾವಿರ ಕೊಟ್ಟು ಕಾರುಗಳನ್ನು ತೆಗೆದುಕೊಳ್ಳುವುದು-ಇತ್ಯಾದಿ ದುಬಾರಿ ವಸ್ತುಗಳನ್ನು ಅವರು ಮಾಡುತ್ತಿದ್ದಾರೆ, ಇವೆಲ್ಲವೂ ಬೆಲೆಗಳು ಏರುವುದಕ್ಕೆ ಮೂಲ ಕಾರಣವೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ವಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಅಧ್ಯಕ್ಷರೆ, ಬೆಲೆ ಏರಿಕೆಗಳ ಬಗ್ಗೆ ನಾವು ಹೊಸದಾಗಿ ಏನನ್ನೂ ಹೇಳಬೇಕಾದ್ದಿಲ್ಲ. ಇವೊತ್ತಿನ ದಿವಸ ಇಲ್ಲಿ, ಅಲ್ಲಿ ಅಂದರೆ ಅಲ್ಲಿ ಇಂದಿರಾ ಗಾಂಧಿಯವರು, ಇಲ್ಲಿ ದೇವೆಂದ್ರರು ಅಂದರೆ ದೇವರಾಜರವರು ಅಳ್ವಿಕೆ ಮಾಡುವ ಕಾಲದಲ್ಲಿ ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಆದರಲ್ಲಿ ಬಹು ಮುಖ್ಯವಾದುದು ಆಗತ್ಯ ವಸ್ತುಗಳ ಬೆಲೆಗಳನ್ನು ಗಗನಕ್ಕೆ ಏರಿಸಿರಕತ್ಕದ್ದು ಒಂದು. ಇವರ ಕಾಲದಲ್ಲಿ ಬಡತನ ತೊಲಗುವ ಬದಲೂ ಬಡತನದ ಬುಬ್ಬರ ಗಗನವನ್ನು ಮುಟ್ಟುವುದಕ್ಕೆ ಹೋಗಿದೆ. ಉದಾಹರಣೆಗೆ ನಮ್ಮ ಬೆಜಿಸ್ಲೇಡರ್ ಕ್ಯಾಂಟೀನಿನಲ್ಲಿ ಒಂದು ಕಾಫಿಗೆ 40 ಪೈಸೆ ಇದೆ. ಇಲ್ಲಿ ಹೀಗಿರಬೇಕಾದರೆ ಹೊರಗಡೆ ವ್ಯವಸ್ಥೆ ಹೇಗಿರಬಹುದು? ಹಳ್ಳಿಯ ಬಡ ರೈತರು, ಬಡ ಕಾರ್ಮಿಕರು ಮತ್ತು ಸರ್ಕಾರೀ ಎನ್ ಜಿ ಓ ಗಳು—ಇವರ ಜೀವನ ಎಷ್ಟು ದುಭರವಾಗಿದೆ ಎಂಬುದನ್ನು ತಾವು ಗಮನಿಸಬೇಕು. ಕಳೆದ 6 ತಿಂಗಳಲ್ಲಿ ಅವಶ್ಯಕವಸ್ತುಗಳು ಬೆಲೆ ಶೇಕಡಾ 20-30 ಕ್ಕೆ ಏರಿದೆ, ಇವತ್ತು ಮನೆಯಲ್ಲೂ ಎಲ್ಲರಿಗೂ ಬಹಳ ಕಷ್ಟವಾಗಿದೆ. ಪ್ರತೀ ತಿಂಗಳು ಕೊಡುವ ಹಾಗೆ ಕೊಡುತ್ತೇವೆ; ಆದರೆ ಆಮ 15 ದಿವಸಗಳಲ್ಲಿಯೇ ಮುಗಿದುಹೋಗುತ್ತದೆ.ಮಾನ್ಯ ನಾಗರಾಜರು ಸಹ ಬೆಲೆಗಳು ಏರಿವೆ ಎಂದು ತಮ್ಮ ಮಗನ ನಾಮಕರಣವನ್ನು ಸಹ ಮುಂದುವರಿಸಿದ್ದಾರೆಂದು ತಿಳಿದು ಬಂತು. ನಿಜವಾಗಿಯೂ ನಿಗದಿ ಮಾಡಿದ ವರಮಾನ ಇತಕ್ಕಂತಹ ವಸ್ತು ಯಾವ ವರಮಾನವೂ ಇಲ್ಲದೆ ಇರುವಂತಹ ಹಳ್ಳಿಯ ಜನರ ಜೀವನ ವರ್ಣಿಸಲು ಸಾಧ್ಯವಿಲ್ಲ. ಹಳ್ಳಿಯಲ್ಲಿ ಬೇಸಾಯವನ್ನು ನಂಬಿಕೊಂಡಿರುವ ಜನರು ಶೇಕಡಾ 65-50 ಇದ್ದಾರೆ. ಪೇಜೆಯಲ್ಲಿ ಇರತಕ್ಕ ಕಾರ್ಮಿಕ ಮತ್ತು ಇತರ ಕೆಳ ವರ್ಗದ ಜನರು 35.50 ಇದ್ದಾರೆ. ಇವರೆಲ್ಲರೂ ಇಂದು ಪಡಬಾರದ ಕಷ್ಟಗಳನ್ನು ಎದುರಿಸುತ್ತಿದ್ದಾರೆ. ಹಿಂದೆ 1967 ರಲ್ಲಿ ಒಂದು ರೂಪಾಯಿ ಬೆಲೆ 46 ಪೈಸೆ ಇತ್ತು. 1972 ರಲ್ಲಿ ಇಂದಿರಾ ಯುಗದಲ್ಲಿ ಅದು 39 ಪೈಸೆಗೆ ಇಳಿದಿದೆ. ಹಾಗೆಯೇ ಹಳ್ಳಿಗಳಲ್ಲಿ ಆಹಾರ ಧಾನ್ಯಗಳನ್ನು ಬೆಳೆಯುತ್ತಿದ್ದ ಬೆಳೆಗಾರರಿಗೆ ಯಾವ ಲಾಭವೂ ಬರುತ್ತಾ ಇಲ್ಲ. ಮತ್ತು ಇಲ್ಲಿ ಕೊಂಡು ತಿನ್ನುವವರಿಗೂ ಯಾವ ಲಾಭವೂ ಇಲ್ಲದೆ ದುಬಾರಿ ಬೆಲೆ ಕೊಟ್ಟು ಕೊಂಡುಕೊಳ್ಳಬೇಕಾಗಿದೆ. ಅಂದರೆ ಅಲ್ಲಿ ಬೆಳೆಯುವವರಿಗೂ ಲಾಭವಿಲ್ಲ; ಇಲ್ಲಿ ಉಪಯೋಗಿಸಿಕೊಳ್ಳತಕ್ಕವರಿಗೂ ಏನಾಯುತಿ ಇಲ್ಲ. ಆದರೆ ಮಧ್ಯದಲ್ಲಿರತಕ್ಕಂತಹ ಜನರು ಏಳಿದ್ದಾರೆ, ಅವರ ಹೊಟ್ಟೆ ತುಂಬತಕ್ಕ, ಮತ್ತು ಅವರ ಬೊಜ್ಜು ಬೆಳೆಯತಕ್ಕ ನೀತಿಯನ್ನು ನಮ್ಮ ಸರ್ಕಾರದವರು ಅನುಸರಿಸಿಕೊಂಡು ಬಂದಿದ್ದಾರೆ. ಈ ಸಮಸ್ಯೆ ಕೇವಲ ನಮ್ಮ ರಾಜ್ಯಕ್ಕೆ ಸೀಮಿತವಾದುದಲ್ಲ; ಇದು ಇಡೀ ರಾಷ್ಟ್ರದಲ್ಲಿಯೇ ಇದೆ. ಈ ನೀತಿಯ ಫಲವಾಗಿ 100 ಕ್ಕೆ 98 ಭಾಗ ಜನರು ಬಡವರು ಏನಿದ್ದಾರೆ, ಅವರು ನಾವಿನ

ದವಡೆಯಲ್ಲಿ ಹೋರಾಡುತ್ತಿದ್ದಾರೆ. ಇವೊತ್ತಿನ ದಿವಸ ಎನ್ ಜಿ ಓ ಗಳೇನು ಇದ್ದಾರೆ, ಅವರಿಗೆ ಕೊಡತಕ್ಕ ಸಂಬಳ ಸಾರಿಗೆಗಳನ್ನು ನೀವು ಹೆಚ್ಚು ಮಾಡುತ್ತಾ ಇಲ್ಲ. ಆದರೆ ಅವರು ಕೊಳ್ಳತಕ್ಕ ಆಹಾರಧಾನ್ಯಗಳ ಬೆಲೆ ಇವೊತ್ತಿನ ದಿವಸ ಎಷ್ಟು ಮಟ್ಟಿಗೆ ಏರಿದೆ ಎಂಬುದನ್ನು ತಾವು ಸ್ವಲ್ಪ ವಿಚಾರ ಮಾಡಬೇಕು. ಅವರು ನಮಗೆ ಕೇಂದ್ರ ಸರ್ಕಾರದ ಮಟ್ಟಿನಲ್ಲಿ ತುಟ್ಟಿಭತ್ಯವನ್ನು ಕೊಡಿ ಎಂದು ಕೇಳಿದರೆ, ನಮ್ಮ ಹತ್ತಿರ ದುಡ್ಡು ಇಲ್ಲವೆಂದು ಹೇಳುತ್ತಿದ್ದೀರಿ. ಆದರೆ ತಮಗೆ ಅವಶ್ಯಕ ವಸ್ತುಗಳ ಬೆಲೆ ಏರುವುದನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಬೆಲೆ ಏರದಿದ್ದರೆ ಅವರು ತುಟ್ಟಿಭತ್ಯವನ್ನಾದರೂ ಏಕೆ ಕೇಳುತ್ತಾರೆ ? ಆದರೆ ಬೆಲೆ ಏರಿಕೆಯನ್ನು ಗಗನ ಮುಟ್ಟುವವರೆಗೆ ಬಿಟ್ಟು, ಅವರಿಗೆ ಕೇಂದ್ರ ಮಟ್ಟದ ತುಟ್ಟಿಭತ್ಯವನ್ನು ಕೊಡುವುದಿಲ್ಲವೆಂದು ಹೇಳಿದರೆ, ಇದರಿಂದ ಇರತಕ್ಕಂತಹ ಪರಿಸ್ಥಿತಿ ತುಂಬಾ ವಿಕೋಪಕ್ಕೆ ಹೋಗುತ್ತದೆ. ಅಜೀ ರೀತಿ ಮೂಕವೇದನೆಯು, ಶೋಕ ತುಂಬಿ ತುಳುಕುತ್ತಿದ್ದ ಹಳ್ಳಿಯ ಬಡ ಜನ ಏನಿದ್ದಾರೆ, ಅವರಿಗೆ ಜೀವನ ನಡೆಸುವುದಕ್ಕೆ ಇವತ್ತು ತುಂಬಾ ಕಷ್ಟವಾಗುತ್ತಿದೆ. ಮಾನ್ಯ ಕೃಷ್ಣರವರು ಈಗತಾನೇ ನಕ್ಕರೆಯ ವಿಚಾರದಲ್ಲಿ ಹೇಳಿದರು. ಒಂದು ಕೆ. ಜಿ. ನಕ್ಕರೆಗೆ ಒಂದು ಪೈಸೆ ಹೆಚ್ಚಿಗೆ ಮಾಡಿದರೆ ಅದರಿಂದ ಮೂರು ಕೋಟಿ ರೂಪಾಯಿ ಜಾಸ್ತಿ ಬರುತ್ತದೆ ; ಒಂದು ಮಿಟರ್ ಒಚ್ಚಿಗೆ ಒಂದು ಪೈಸೆ ಹೆಚ್ಚಿಗೆ ಮಾಡಿದರೆ, ಅದರಿಂದ 8–10 ಕೋಟಿ ರೂಪಾಯಿ ಹೆಚ್ಚಾಗಿ ಉತ್ಪಾದನೆಯಾಗುತ್ತದೆ. ಇದು ಯಾರಿಗೆ ಹೋಗುತ್ತಿದೆ ? ಇದು ಇವತ್ತಿನ ದಿವಸ ಕಬ್ಬನ್ನು ಬೆಳೆಯತಕ್ಕ ರೈತರಿಗೆ ಹೋಗುವುದಿಲ್ಲ ; ಅಥವಾ ಬಳಸತಕ್ಕ ಬಳಕೆದಾರರಿಗೆ ಹೋಗುವುದಿಲ್ಲ ಇದು ಎಲ್ಲಿಗೆ ಹೋಗುತ್ತದೆ ಅಂದರೆ ಇದರ ಮಧ್ಯದಲ್ಲಿರತಕ್ಕಂತಹ ಜನರು ಏನಿದ್ದಾರೆ,–ನಕ್ಕರೆ ಕಾರ್ಖಾನೆಯ ಮಾಲೀಕರು ಮತ್ತಿತರರು ಅವರಿಗೆ ಇದು ಹೋಗುತ್ತದೆ. ಆದರೆ ಬಡ ಕೂಲಿಕಾರ ಜನ ಏನಿದ್ದಾರೆ, ಅವರ ಹಿತವನ್ನು ಸಂರಕ್ಷಣೆ ಮಾಡುವುದಕ್ಕೆ ಯಾವ ಒಂದು ವ್ಯವಸ್ಥೆಯನ್ನೂ ಮಾಡುತ್ತಿಲ್ಲ. ಆದ್ದರಿಂದ ಇವತ್ತು ತಾವು ಏನು ನೀತಿಯನ್ನು ಅನುಸರಿಸಿಕೊಂಡು ಬರುತ್ತಿದ್ದೀರೋ ಇದರಿಂದ ಇಡೀ ರಾಷ್ಟ್ರವ್ಯಾಪ್ತಿಯಲ್ಲಿ ಬಹಳ ದೊಡ್ಡ ಆಂಧೋಳನವನ್ನು ಎದುರಿಸುವ ಪರಿಸ್ಥಿತಿ ಖಂಡಿತವಾಗಿ ಬರುತ್ತದೆ. ಆ ಬಗ್ಗೆ ನಾನು ಈಗಾಗಲೇ ತಮಗೆ ಎಚ್ಚರಿಕೆಯನ್ನು ಕೊಡುವುದಕ್ಕೆ ಅಪೇಕ್ಷೆಪಡುತ್ತೇನೆ. ಹೇಗೆ ಇದನ್ನು ತಡೆಹಿಡಿಯುವುದಕ್ಕೆ ಸಾಧ್ಯವೆನ್ನುವ ಮಾತನ್ನು ನಾನು ಹೇಳುತ್ತೇನೆ. ಎಸೆನ್‌ಷಿಯಲ್ ಕಮೊಡಿಟೀಸ್ ಅಂದರೆ ಅದರಲ್ಲಿಯೂ ದಿನನಿತ್ಯ ಬಳಕೆ ವಸ್ತುಗಳು ಏನಿವೆಯೋ ಅವುಗಳನ್ನು ತಾವು ಹತೋಟಿಯಲ್ಲಿಡಬೇಕಾದರೆ ಅವುಗಳ ಮಾರಾಟ ವ್ಯವಸ್ಥೆಯನ್ನು ತಾವು ವಹಿಸಿಕೊಂಡು ಬರೀ ಪಟ್ಟಣಗಳಲ್ಲಿ ಮಾತ್ರ ಪಡಿತರ ಪದ್ಧತಿಯನ್ನು ಮಾಡುತ್ತಿರುವ ಹಾಗೆ ಹಳ್ಳಿಗಳಲ್ಲಿಯೂ ಸಹ ರೇಷನಿಂಗ್ ಕಾರ್ಡ್ ಕೊಡುವ ವ್ಯವಸ್ಥೆ ಮಾಡಬೇಕು. ಏಕೆಂದರೆ ಹಳ್ಳಿಗಳಲ್ಲಿರತಕ್ಕ ಜನಗಳಿಗೆ ಅದರಲ್ಲಿಯೂ ಬಡವರಿಗೆ, ರೈತರಿಗೆ ಇವತ್ತು ಹೆಚ್ಚು ಬೆಲೆಯನ್ನು ಕೊಟ್ಟು ಆಹಾರಪದಾರ್ಥಗಳನ್ನು ಕೊಳ್ಳುವ ಶಕ್ತಿ ಇಲ್ಲ. ಅಲ್ಲಿ ಬೆಲೆಗಳು ಇನ್ನೂ ದುಬಾರಿ ಸ್ಥಿತಿಯಲ್ಲಿವೆ. ಅಕ್ಕಿ, ಎಣ್ಣೆ ಇವುಗಳ ಬೆಲೆ ಬಹಳ ಜಾಸ್ತಿಯಾಗಿ ಹೋಗಿದೆ. ಇನ್ನು ಬಡವರಿಗೆ ಬೆಣ್ಣೆ ಎಲ್ಲಿ ಬಂತು ! ಅದೆಲ್ಲಾ ಮಾನ್ಯ ಶ್ರೀ ಚಿಕ್ಕೇಗೌಡರಿಗೇ ಅಂತಹವರಿಗೇ ಆಗುತ್ತದೆ. ಎಲ್ಲಾ ಪದಾರ್ಥಗಳಿಗೂ ತಾವು ಫೇರ್ ಪ್ರೈಸ್ ಡಿಪೋಗಳನ್ನು ಮಾಡಿ ಸರ್ಕಾರದ ಮೂಲಕ ಅವಶ್ಯಕವಾದಂಥ ವಸ್ತುಗಳನ್ನು ಒಂದು ನಿಯಮಿತ ಬೆಲೆಗೆ ಮಾರಾಟಮಾಡುವ ವ್ಯವಸ್ಥೆಯನ್ನು ಕೂಡಲೇ ಮಾಡದೇ ಹೋದರೆ ಮುಂದೆ ಬಹಳ ದೊಡ್ಡ ಕಷ್ಟವಾಗುತ್ತದೆ. ಆ ಒಂದು ಕಷ್ಟವನ್ನು ಎಲ್ಲರೂ ಅನುಭವಿಸಬೇಕಾಗುತ್ತದೆ ಆ ಕಷ್ಟವನ್ನು ಅನುಭವಿಸುತ್ತಿರುವರು ನಿಮ್ಮನ್ನು ನುಮ್ಮನೆ ಬಿಡುವುದಿಲ್ಲ. ಇವತ್ತು ಕೂನೆಯಪಕ್ಷ ಸರ್ಕಾರದ ನೌಕರರಿಗೆ ಕೊಂಚ ಸಂಬಳವನ್ನಾದರೂ ಕೊಡುತ್ತಿದ್ದೀರಿ.ಕೇವಲ 150 ರೂಪಾಯಿಗಳ ಸಂಬಳ ಕೊಟ್ಟರೆ ಅದು ಎಲ್ಲಿಗೆ ಸಾಕಾಗುತ್ತದೆ ? ಆದರೆ ಏನೂ ಉದ್ಯೋಗವಿಲ್ಲದೆ ಇರತಕ್ಕ ಕೃಷಿ ಕಾರ್ಮಿಕರಿಗೆ ಅದರಲ್ಲಿಯೂ ನಿರುದ್ಯೋಗಿಗಳಾಗಿರುವ ಜನರಿಗೆ ಒಂದು ಹೊತ್ತು ಊಟ ಇಲ್ಲದೇ ಹೋದರೆ ಕೊಂಡು ಊಟ ಮಾಡುವುದಕ್ಕೆ ಸಾಧ್ಯವಿಲ್ಲದೆ ಇರುವವರು ನಿಜವಾಗಿ ನಿಮ್ಮನ್ನು ನುಮ್ಮನೆ ಬಿಡುವುದಿಲ್ಲ. ಹಸಿದ ಹೊಚ್ಚೆಯ ಸಿಟ್ಟು ರೆಚ್ಚೆಗೆ ಬಂದರೆ ಅವರು ನಿಮ್ಮನ್ನು ನಿಜವಾಗಿ ನುಮ್ಮನೆ ಬಿಡುವುದಿಲ್ಲ. ಸತ್ಯಾಗ್ರಹ, ಮುಷ್ಕರ ಚಳುವಳಿ ಇವುಗಳು ಯಾವುದೇ ಇಲ್ಲದೆ ಇಂತಹ ಸಮಸ್ಯೆಗಳನ್ನು ಶಾಂತಿ ರೀತಿಯಲ್ಲಿ ಬಗೆಹರಿಸಬೇಕೆಂಬುದೇ ನಮ್ಮ ಆಸೆ. ನಿಮ್ಮ ಗದ್ದುಗೆಯವರೆಗೆ ಅವರ ಕೈಬರಬಾರದು· ಎಷ್ಟು ದಿವಸಗಳವರೆಗೆ ಅವರು ಈ ಕಷ್ಟವನ್ನು ಅನುಭವಿಸಬೇಕು, ಇಂತಹ ಒಂದು ಸ್ಥಿತಿಯನ್ನು ಮುಂದುವರಿಸುವುದಕ್ಕೆ ಬಿಟ್ಟರೆ, ನಿಮ್ಮ ಅಧಿಕಾರ ಗದ್ದುಗೆ ಅಲುಗಾಡಲಿಲ್ಲವೆಂಬ ಮಾತನ್ನು ತಾವು ನಂಬಿಕೊಳ್ಳಬೇಡಿ. ನಿಮ್ಮ ಅಧಿಕಾರ ಗದ್ದುಗೆಗೆ ಇದೂ ಒಂದು ಕಾಲ. ಆದರೆ ಅಂಥಾದ್ದಕ್ಕೆ ಒಂದು ವೇಳೆ ಚ್ಯುತಿ ಬಂದರೆ, ಯಾರೇನು ಆಶ್ಚರ್ಯಪಡಬೇಕಾಗಿಲ್ಲ. ಅಂತಹ ಕಾಲ ಬೇಗ ಬರಲಿ ಎಂಬುದಾಗಿ ಹೇಳುತ್ತೇನೆ. ನಿಮ್ಮ ಒಂದು ಅಧಿಕಾರದಲ್ಲಿ ಹಳ್ಳಿಯ ಜನರು ಈಗ ಸಂತೋಷವಾಗಿ ಇರುವುದಕ್ಕೆ ಬಿಟ್ಟಿಲ್ಲ. ಏಕೆಂದರೆ ಕೇವಲ ಸೋಪ್, ಎಣ್ಣೆ; ಜೋಳ, ರಾಗಿ ಮುಂತಾದ ದಿನನಿತ್ಯ

(ಶ್ರೀ ಕೋಣಂದೂರು ಲಿಂಗಪ್ಪ)

ಪದಾರ್ಥಗಳ ಬೆಲೆಗಳು ಇವತ್ತು ಮಾರ್ಕೆಟ್ಟಿನಲ್ಲಿ ಎಷ್ಟು ಏರಿವೆಯೆಂಬುದನ್ನು ನೋಡಬೇಕು, 3 ತಿಂಗಳ ಹಿಂದೆ ಇದ್ದ ಬೆಲೆ, ಅದಕ್ಕಿಂತಲೂ ಹಿಂದೆ 6 ತಿಂಗಳುಗಳ ಹಿಂದೆ ಇದ್ದ ಬೆಲೆ, ಮತ್ತು ನೀವು ಅಧಿಕಾರಕ್ಕೆ ಬಂದಮೇಲೆ ಆಗಿರತಕ್ಕ ಬೆಲೆ ನೀವು ಅಧಿಕಾರಕ್ಕೆ ಬರುವಾಗ ಇದ್ದಂಥ ಬೆಲೆ ಇವುಗಳನ್ನು ಲೆಕ್ಕಹಾಕಿ ನೋಡಿದರೆ, ಕಳೆದ ಫೆಬ್ರುವರಿ—ಮಾರ್ಚ್ ತಿಂಗಳಿಂದ ಎಷ್ಟು ಇವತ್ತಿನವರೆಗೆ ಬೆಲೆಗಳು ಏರಿವೆ, ಇದಕ್ಕೆ ಕಾರಣರು ಯಾರು—ಮುಂತಾದ ವಿಷಯಗಳನ್ನು ತಾವು ಸ್ವಲ್ಪ ದೀರ್ಘವಾಗಿ ವಿಚಾರ ಮಾಡಬೇಕು. ಆಹಾರದ ಅವಶ್ಯಕ ವಸ್ತುಗಳ ಬೆಲೆ ಗಗನಕ್ಕೆ ಚಿಮ್ಮಿದೆ ಅದನ್ನು ಹಿಡಿತದಲ್ಲಿಟ್ಟುಕೊಳ್ಳುವ ಕೆಲಸವನ್ನು ಈ ಸರ್ಕಾರ ಏನು ಮಾಡಿದೆ ಎಂಬುದನ್ನು ತಿಳಿಸಬೇಕು. ಈ ಬಗ್ಗೆ ಅಪಾಯ ಜಾಗ್ರತೆಯಾಗಿ ಎಲ್ಲಾ ಆಹಾರ ಪದಾರ್ಥಗಳ ಬೆಲೆಯನ್ನು ಒಂದು ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ಈಗಲೇ ಪ್ರಯತ್ನಗಳನ್ನು ಮಾಡದೇ ಹೋದರೆ, ಮತ್ತು ಎಲ್ಲಾ ಕಡೆಗಳಲ್ಲಿಯೂ ಫೇರ್ ಪ್ರೈಸ್ ಡಿಪೋಗಳನ್ನು ತೆರೆದು ನಿಯಮಿತ ದರದಲ್ಲಿ ಅವುಗಳನ್ನು ಹಂಚಲು ವ್ಯವಸ್ಥೆ ಮಾಡದೇ ಹೋದರೆ, ನಿಜವಾಗಿಯೂ ಜನರು ಈ ಸರ್ಕಾರದ ಮೇಲೆ ದಂಗೆ ಏಳುತ್ತಾರೆ. ಒಟ್ಟಿನಲ್ಲಿ ಆಹಾರದ ವಿತರಣೆಯ ಕ್ರಮವೂ ಸಹ ಕ್ರಮಬದ್ಧವಾಗಿಲ್ಲ. ಮಾನ್ಯ ಶ್ರೀ ಕೃಷ್ಣಪ್ಪ ಅವರು ಹೇಳಿದ ಹಾಗೆ ನಮ್ಮ ರಾಜ್ಯದಲ್ಲಿ ಉತ್ಪಾದನೆ ಸಾಕಷ್ಟಿಲ್ಲ. ಅದರ ಜೊತೆಗೆ ವಿತರಣೆಯು ಕ್ರಮ ಸರಿಯಾಗಿ ಕ್ರಮಬದ್ಧವಾಗಿಲ್ಲದಿದ್ದರೆ ತುಂಬಾ ಕಷ್ಟವಾಗುತ್ತೆ. ಆದ್ದರಿಂದ ಬೆಲೆಗಳ ಏರಿಕೆ ಈಗಾಗಲೇ ಗಗನವನ್ನು ಮುಟ್ಟಿರುವುದರಿಂದ, ತೃಪ್ತಿಕರವಾಗಿ ಆಹಾರ ವಿತರಣೆಯಾಗುವುದರಲ್ಲಿ ಹೆಚ್ಚಿನ ಮುತುವರ್ಜಿ ವಹಿಸಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು. ಒಟ್ಟಿನಲ್ಲಿ ಬೆಲೆಗಳನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕು. ಬೆಳೆಯತಕ್ಕವನ ಹಿತ ಮತ್ತು ಕೊಂಡು ತಿನ್ನುವವನ ಹಿತ—ಇವೆರಡನ್ನೂ ಗಮನಿಸಿ, ಸರ್ಕಾರದವರು ಒಂದು ಬೆಲೆಯ ನೀತಿಯನ್ನು ಕಂಡುಹಿಡಿಯಬೇಕು. ಇಲ್ಲದಿದ್ದರೆ ಸರ್ಕಾರಕ್ಕೆ ಬೆಲೆ ಇಲ್ಲ. ಸರ್ಕಾರದ ಬೆಲೆಗಳನ್ನು ನಿಗದಿಮಾಡುವ ಬಗ್ಗೆ ಒಂದು ಸರಿಯಾದ ನೀತಿಯನ್ನು ಅನುಸರಿಸುತ್ತಾ ಇಲ್ಲ. ಅದರ ಬಗ್ಗೆ ಸರಿಯಾದ ವಿವರಣೆಗಳನ್ನೂ ಸಹ ಕೊಡುತ್ತಾ ಇಲ್ಲ. ಒಂದೊಂದು ಪದಾರ್ಥದ ಬೆಲೆಯನ್ನು ಎಷ್ಟರಮಟ್ಟಿಗೆ ಏರಿಸಬೇಕು, ಬೆಳೆಗಾರರು ಕೊಡುವ ಬೆಲೆಗೂ, ಕೊಳ್ಳುವವರು ಕೊಡುವ ಬೆಲೆಗೂ ಎಷ್ಟು ಅಂತರವಿರಬೇಕು, ಎಷ್ಟು ಪರ್ಸಂಟೇಜ್ ಇರಬೇಕು ಎಂಬ ಬಗ್ಗೆ ಒಂದು ಸರಿಯಾದ ನೀತಿಯನ್ನು ತಾವು ಅನುಸರಿಸಬೇಕು. ಏಕೆಂದರೆ ಇವತ್ತು ವ್ಯಾಪಾರಸ್ಥರು ಏನು ರಾಭಕೋರರಾಗಿ ವ್ಯಾಪಾರ ಮಾಡುತ್ತಿದ್ದಾರೋ ಅಂತಹವರು ಸಮಾಜದಲ್ಲಿ ಸ್ವಲ್ಪಮಟ್ಟಿಗೆ ತಿದ್ದಿಕೊಳ್ಳಬೇಕು. ಪಂಜಾಬಿನಲ್ಲಿ ಮಾನ್ಯ ಶ್ರೀ ಕೈರೋನ್ ಅವರು ಇದ್ದಾಗ್ಗೆ ಏನು ಮಾಡಿದರೆಂದರೆ, ಯಾರು ಬ್ಲ್ಯಾಕ್ ಮಾರ್ಕೆಟ್ ಮಾಡುತ್ತಾರೋ ಅಂತಹವರನ್ನು ಹಿಡಿದು ನಡುರಸ್ತೆಯಲ್ಲಿಯೇ ಮೆರವಣಿಗೆ ಮಾಡುತ್ತಿದ್ದರು. ಅಂದಮೇಲೆ ಬಡತನವನ್ನು ಉದ್ದಾರವಾಡುವವರೆಂದು ನೀವು ಹೇಳಿಕೊಳ್ಳುತ್ತಾ ಇರುವಾಗ ಅದರ ಬಗ್ಗೆ ತಾವು ಏನು ಮಾಡಿದ್ದೀರಿ ? ಇವತ್ತು ಇಂಡಿಯಾ ದೇಶದ ಯಾವುದೇ ರಾಜ್ಯದಲ್ಲಿಯಾಗಲೀ ಯಾವುದೇ ಸರ್ಕಾರವಾಗಲಿ ಒಬ್ಬ ಬ್ಲ್ಯಾಕ್‌ಮಾರ್ಕೆಟ್ ಮಾಡುವವನನ್ನು ಹಿಡಿದು ದಂಡಿಸಿದ್ದು ಇದೆಯೇ ಎಂದು ನಾನು ಪ್ರಶ್ನೆ ಮಾಡುತ್ತೇನೆ. ಅವರು ಮಾಡಿದ ಹಾಗೆ ಬಹಿರಂಗವಾಗಿ ಮೆರವಣಿಗೆ ಮಾಡಿಸಿದ್ದಾರೆಯೇ ಎಂದು ನಾನು ಕೇಳುತ್ತೇನೆ. ನೀವು ಏನು ಮಾಡಿದ್ದೀರಿ ಅಂದರೆ ಅವರನ್ನು ರಕ್ಷಣೆ ಮಾಡಿದ್ದೀರಿ, ಅವರನ್ನು ರಕ್ಷಣೆ ಮಾಡುವುದೇ ನಿಮ್ಮ ಗುರಿಯಾಗಿದೆ. ಬಡವರ ಹೆಸರನ್ನು ಹೇಳಿ ಶ್ರೀಮಂತರ ರಕ್ಷಣೆ ಮಾಡುವುದೇ ನಿಮ್ಮ ಉದ್ದೇಶವಾಗಿದೆ. ಯಾವ ಸರ್ಕಾರಕ್ಕೇ ಆಗಲೀ, ಯಾರು ಅಧಿಕಾರವರ್ಗದಲ್ಲಿರುತ್ತಾರೋ ಅಂತಹವರಿಗೆ ಯಾವಾಗ ಬಡವರ ಬಗ್ಗೆ ಅಭಿಮಾನವಿಲ್ಲವೋ ಅಂತಹವರಿಗೆ ನಮ್ಮ ದೇಶದಮೇಲೂ ಅಭಿಮಾನವಿಲ್ಲ. ಅದಕ್ಕೆ ಸಾಕ್ಷಿ ಎಲ್ಲ ಪದಾರ್ಥಗಳ ಬೆಲೆಗಳು ಇಷ್ಟು ಏರಿ ಗಗನ ಮುಟ್ಟಿರುವುದೇ ಕಾರಣ.

ಇನ್ನು ಸೀಮೆಯಣ್ಣೆಯ ಬಗ್ಗೆ ಕೆಲವು ವಿಚಾರಗಳನ್ನು ಹೇಳಿ ನಾನು ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ. ಇವತ್ತೇನೋ ಅದು ಎಲ್ಲಿ ಬೇಕಾದರೂ ಸಿಗುತ್ತದೆ. ಸ್ವಲ್ಪ ದಿವಸಗಳ ಹಿಂದೆ ಬೆಂಗಳೂರಿನೊಳಗೇ ಸೀಮೆಯೆಣ್ಣೆಯನ್ನು ಕೊಳ್ಳುವುದಕ್ಕೆ ಹೋದಂಥ ಕಾಲದಲ್ಲಿ ಸತ್ಯ ಮಗುವಿನ ಸುದ್ದಿಯನ್ನು ತಾವು ಪತ್ರಿಕೆಗಳಲ್ಲಿ ಓದಿದ್ದೀರಿ. ಸೀಮೆಯೆಣ್ಣೆ ಸಿಗದೇ ಇರುವ ಸ್ಥಿತಿ ಏಕೆ ಬಂತು ? ಅಷ್ಟು ಅಭಾವ ಏಕೆ ಆಯಿತು ಎಂಬುದಕ್ಕೆ ದಯವಿಟ್ಟು ನನಗೆ ಮಾಹಿತಿ ಕೊಡಬೇಕು. ನನಗೆ ತಿಳಿದಮಟ್ಟಿಗೆ ಕಾರಣವಿಷ್ಟೇ. ಬಡ್ಜೆಟ್ ಸೆಶನ್ ಬಂತು, ಎಲ್ಲಿ ತೆರಿಗೆಗಳನ್ನು ಹಾಕುತ್ತಾರೋ ಎಂದು ಯಾರಾರಿಗೆ ಸೀಮೆಯೆಣ್ಣೆಯನ್ನು ಕೊಳ್ಳುವುದಕ್ಕೆ ಏಜೆನ್ಸಿಗಳನ್ನು ಕೊಟ್ಟಿದ್ದಾರೋ ಆ ಮಹಾನುಭಾವರುಗಳು ಮೊದಲೇ ಅದನ್ನು ತೆಗೆದುಕೊಂಡು ಒಳಗಡೆ ಮುಚ್ಚಿಟ್ಟು

ಕೊಂಡಿದ್ದಾರೆ, ಕೃತಕವಾಗಿ ತೊಂದರೆ ಉಂಟಾಯಿತು. ಈಗ ನಮಗೆ ಅಂತಹ ಕೊರತೆ ಇಲ್ಲ ವೆಂದೂ, ಸೀಮೆಯೆಣ್ಣೆ ಸಿಗುವುದಕ್ಕೆ ಮೊದಲಿನಂತಹ ನೂಕು, ನುಗ್ಗಾಟ ಏನೂ ಇಲ್ಲವೆಂದು ಕೆಲವರು ಹೇಳುತ್ತಿದ್ದಾರೆ. ಆದರೂ ಹಳ್ಳಿಗಳಲ್ಲಿ ಇನ್ನೂ ಅದರ ಅಭಾವ ಇದ್ದೇ ಇದೆಯೆಂದು ಹೇಳ ಬಹುದು. ಇದರ ಬಗ್ಗೆ ಸರ್ಕಾರದ ನೀತಿ ಏನೆಂಬುದನ್ನು ಇದುವರೆಗೂ ತಿಳಿಸಿಲ್ಲ. ಆದ್ದರಿಂದ ಹಿಂದೆ ಅವತ್ತು ಆ ರೀತಿಯಾಗಿ ಮಗು ಸತ್ತಿದ್ದಕ್ಕೆ ನೀವು ಹೊಣೆಯಾಗಬೇಕಾಗಿದೆ, ಸರ್ಕಾರ ಹೊಣೆಯಾಗಬೇಕಾಗಿದೆ. ಏನಾದರೂ ಆಗಲೇ ತತ್‌ಕ್ಷಣ ಈಗಿನ ಬೆಲೆ ಏರಿಕೆಗಳನ್ನು ತಾವು ತಡೆ ಗಟ್ಟದೇ ಹೋದರೆ, ನಿಮ್ಮ ನೀತಿಯಿಂದ ಈ ರಾಜ್ಯದಲ್ಲಿ ಮಾತ್ರವಲ್ಲ, ಇಡೀ ರಾಷ್ಟ್ರದಲ್ಲಿಯೇ ಒಂದು ದೊಡ್ಡದಾದಂಥ ಅಂದೋಳನ ಹಿಂಸಾತ್ಮಕವಾಗಿ ಕಾಣದಿರದು. ಆ ರೀತಿಯಾದರೆ ಅದಕ್ಕೆ ಚಿಂತೆ ಪಡಬೇಕಾಗಿಲ್ಲ. ಹಿಂಸೆಯಾಗಬೇಕೆಂಬುದನ್ನು ನಾನು ಒಪ್ಪುವುದಿಲ್ಲ. ನಾನು ಹಿಂಸಾವಾದಿಯಲ್ಲ. ಅಹಿಂಸಾವಾದಿಯಾಗಬೇಕು. ಪ್ರಜಾಪ್ರಭುತ್ವದಲ್ಲಿ ಚಳುವಳಿ ನಡೆಯಬೇಕೆಂಬುದನ್ನು ತಿದ್ದ ಬೇಕೆಂದು ಹೇಳುವವರಲ್ಲಿ ಸಂಪೂರ್ಣ ವಿಶ್ವಾಸ ಇರುವವನು ನಾನು. ಹೆಚ್ಚು ಸಹನೆ ಇರುವವರನ್ನು ಪರೀಕ್ಷೆ ಮಾಡುವುದಕ್ಕೆ ಯಾರೂ ನಿಲ್ಲಿದಾರದು. ಕಳೆದ 10 ವರ್ಷಗಳಲ್ಲಿ ಮಾಡಿದ ಪಾಪದಲ್ಲಿ ತಾವೂ ಪಾಲುಗಾರರೇ. ತಪ್ಪು ಮಾಡಿದವರನ್ನೆಲ್ಲಾ ತಕ್ಕಡಿಯಲ್ಲಿ ತೂಗಲು ಸೋಷಿಯಲಿಸ್ಟ್ ಪಕ್ಷ, ರಿಪಬ್ಲಿಕನ್ ಪಕ್ಷ ಹೀಗೆ ಇನ್ನೂ ಕೆಲವರು ಅಲ್ಲಲ್ಲಿ ಇದ್ದಾರೆ.

2-30 P.M.

ಶ್ರೀ ಸಿ. ಎಂ. ಆರ್ಮುಗಂ.—ಹಾಗಾದರೆ ನೀವೊಬ್ಬರೇನೋ ನಾನು ಇಲ್ಲವೋ ?

ಶ್ರೀ ಕೋಣಂದೂರು ಲಿಂಗಪ್ಪ.—ರಿಪಬ್ಲಿಕನ್ ಪಾರ್ಟಿಯವರು ನೀವೂ ಒಬ್ಬರಿದ್ದೀರಿ ನಮ್ಮ ಜೊತೆಗೆ. ಇನ್ನು ಈ ಕಮ್ಯುನಿಷ್ಟರು ರಾಷ್ಟ್ರಘಾತುಕ ಶಕ್ತಿಗಳ ಜೊತೆಯಲ್ಲಿ ಸೇರಿದ್ದಾರೆ.....

ಶ್ರೀ ಎಂ. ಎಸ್. ಕೃಷ್ಣನ್.—ನೀವೋ ? ಹಲವಾರು ಬಚ್ಚೆಗಳ ತೇಪೆ ಹಾಕಿದಂಥ ಒಂದು ಪಾರ್ಟಿ ನಿಮ್ಮದು,

ಶ್ರೀ ಕೋಣಂದೂರು ಲಿಂಗಪ್ಪ.—ನಾನು ಇನ್ನು ಆ ಇಂದ್ರಾಜಿಯವರ ಆಡಳಿತ ಮತ್ತು ಸರ್ಕಾರದ ಬಗ್ಗೆ ಕೊನೆಯದಾಗಿ ಒಂದು ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಈ ಬೆಲೆಗಳ ಏರಿಕೆಯಿಂದ

"ಬರುತಿದೆ ಬಡತನದ ಉಬ್ಬರ
ಬಡವರ ಜೀವನದ ದುರ್ಭರ
ಇವರ ಮಾತಿನ ಅಬ್ಬರ
ಸಾವಿನ ಸನಿಹ ಹತ್ತಿರ ಹತ್ತಿರಕ್ಕೆ ಬರುತಿದೆ
ಅದಕೆ ಜನರ ಸಹನೆ ಮೀರಿ ಬರುತಿದೆ
ಬರುತಿದೆ ಕ್ರಾಂತಿಯ ದಿನ ಹತ್ತಿರಕೆ..." ಎಂದು

ಇಷ್ಟನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು (ಶಾಂತಿನಗರ).—ಮಾನ್ಯ ಅಧ್ಯಕ್ಷರೇ: ಈಗಾಗಲೇ ನನ್ನ ಅನೇಕ ಮಿತ್ರರು ಸಾಮಾನ್ಯವಾಗಿ ದಿನವಹಿ ಬೇಕಾದ ನಿತ್ಯವಸ್ತುಗಳ ಬೆಲೆಯ ಏರಿಕೆಯ ಬಗ್ಗೆ ಭಾಷಣಗಳನ್ನು ಮಾಡುತ್ತ ಕೆಲವರು ಕೆಲವು ನೂಕ್ತವಾದ ಸಲಹೆಗಳನ್ನು ಕೊಟ್ಟಿದ್ದರೆ ಇನ್ನು ಕೆಲವರು ಕಟುವಾದ ಟೀಕೆಗಳನ್ನೂ ಮಾಡಿದ್ದಾರೆ; ಎಂದು ನಾನು ಈ ಸಂದರ್ಭದಲ್ಲಿ ಒತ್ತಿ ಒತ್ತಿ ಹೇಳುತ್ತೇನೆ. ಒಟ್ಟಿನಲ್ಲಿ ನಾನು ಹೇಳುವುದು ಬೆಲೆ ಏರುವಿಕೆ ಪಕ್ಷದ ಪ್ರಶ್ನೆಯಲ್ಲ. ಇದು ಸಾಮಾನ್ಯ ಜನತೆಯ ಪ್ರಶ್ನೆ. ಆದುದರಿಂದ ಇದನ್ನು ನಾವೂ ಮತ್ತು ವಿರೋಧಪಕ್ಷಗಳವರೂ ಒಟ್ಟುಗೂಡಿ ಬಗೆಹರಿಸಬೇಕಾಗಿದೆ. ನಮ್ಮ ಸರ್ಕಾರದ ಗುರಿಯಾದರೂ ಸಾಮಾನ್ಯ ಜನತೆಯ ಜೀವನವನ್ನು ಉತ್ತಮಗೊಳಿಸಬೇಕು ಅನ್ನುವುದೇ ಆಗಿದೆ. ಅದೇ ನಮ್ಮ ಸರ್ಕಾರದ ಮುಖ್ಯ ಗುರಿ. ಆದರೂ ನಾವು ಕಾಲಕ್ಕೆ ತಕ್ಕಂತೆ ವರ್ತಿಸಬೇಕಾಗಿದೆ. ಹಿಂದೆ ಭಾರತ ದೇಶವನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಮತ್ತು ಶೂದ್ರ ಎಂಬುದಾಗಿ ನಾಲ್ಕು ರೀತಿಯ ವರ್ಣಾಶ್ರಮ ಧರ್ಮಗಳ ಮೇರೆ ವಿಂಗಡಿಸಿದ್ದರು. ಈಗ ನಮ್ಮ ಸಮಾಜವನ್ನು ಐದು ತರಗತಿಗಳನ್ನಾಗಿ ವಿಂಗಡಿಸಲಾಗಿದೆ: (1) ಬ್ಲಾಕ್ ಮಾರ್ಕೆಟಿಯರ್ (2) ಸ್ಮಗ್ಲರ್ (3) ಹೋರ್ಡರ್ಸ್ (4) ಸ್ಪೆಕ್ಯುಲೇಟರ್ಸ್ (5) ಸೆರ್ಪ್ ಸ್ಟೈಲ್ಡ್ ಲೀಡರ್ಸ್—ಎಂದು. ಇವರೂ ಸಮಾಜ ಘಾತಕರೇ ಏಕೆಂದರೆ ಇವರೂ

(ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು

'ನಾವಲ್ಲವೇ—ನಮ್ಮ ಜನರಲ್ಲವೇ ?' ಈ ದಿವಸ ಎಲ್ಲ ನೋಡಿದರೂ ''ಬಟ್ಟೆ ಬೆಳ್ಳಗೆ—ಹೊಟ್ಟೆ ತಳ್ಳಗೆ ಅನ್ನುವಂತಾಗಿದೆ. ಆದರೆ ಬಜಾರಿನಲ್ಲಿ ಯಾವ ಯಾವ ಕಾರಣದಿಂದ ಬೆಲೆಗಳು ಏರುತ್ತಿವೆ ಎಂಬುದು ನಮಗೆಲ್ಲರಿಗೂ ಗೊತ್ತಿದೆ. ಆದರೆ ಅದನ್ನು ತಡೆಗಟ್ಟುವುದಕ್ಕೆ ಎಲ್ಲ ಜನರ ಸಹಕಾರವೂ ಬೇಕು ಎಂದು ಹೇಳುತ್ತೇನೆ. ಇವರ ಮೂಲೋತ್ಪಾಟನೆಗೆ ಬಿಲ್ಲಾಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಸಲಹಾ ಸಮಿತಿಗಳು ಆಗತ್ಯ. ದೊಡ್ಡ ದೊಡ್ಡ ನಗರಗಳಲ್ಲಿ ಒಂದೊಂದು ಗಲ್ಲಿಗೂ ಒಬ್ಬೊಬ್ಬ ಮುಖಂಡರ ಹಾಗೂ, ಅಧಿಕಾರಿಗಳಿಂದ ಕೂಡಿದಂತೆ ಸೆರ್ ಇರಬೇಕು. ಇನ್ನು ಫೇರ್ ಪ್ರೈಜ್ಸ್ ಅಂಗಡಿಗಳನ್ನು ನಡೆಸುವುದಕ್ಕೆ ಸರ್ಕಾರ ಮತ್ತು ಮಧ್ಯಮ ವರ್ಗದವರು ಕೆಲವರು ಒಟ್ಟುಗೂಡಿದರೆ ಸಾಲದು ಅವರ ಜೊತೆಗೆ ಯೂನಿಯನ್ ಆರ್ಗನೈಜೇಷನ್ನುಗಳು ಭಾಗವಹಿಸಬೇಕು. ರಾಜ್ಯದಲ್ಲಿ ಅನೇಕ ಅಂಥ ಸಂಘ ಸಂಸ್ಥೆಗಳಿವೆ. ಅವರೂ ಕೂಡ ಮುಂದೆ ಬಂದು ಸಹಕರಿಸಬೇಕೆಂದು ನಾನು ಸಲಹೆಮಾಡುತ್ತೇನೆ.

ಪಂಜಾಬಿನ ಅಗಿನ ಮುಖ್ಯಮಂತ್ರಿ ಪ್ರತಾಪ ಸಿಂಗ್ ಖೈರಾನ್ ಅವರು ಮಾಡಿದಂತೆ ಕಟ್ಟುನಿಟ್ಟಾದ ಕೆಲವು ನಿಯಮಗಳನ್ನು ಕೈಗೊಂಡರೂ ಅದರಿಂದಲೂ ಕೆಲವು ಸ್ಮಗ್ಲರ್ಸ್ ಮತ್ತು ಹೋರ್ಡರ್ಸ್ ಹೊರಗೆ ಬರುತ್ತಾರೆ. ಅದನ್ನೂ ಸರ್ಕಾರ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಆಗಲೇ ಕೆಲವು ಮಾನ್ಯ ಸದಸ್ಯರು ಸಲಹೆ ಮಾಡಿರುವಂತೆ ತಪ್ಪಿತಸ್ಥರನ್ನು ಕತ್ತೆಯ ಮೇಲೆ ಕೂರ್ಸಿ ನಾವು ಹಾಕಿ, ಕೈಗೆ ಬೇಡಿ ತೊಡಿಸಿ ಮೆರವಣಿಗೆ ಮಾಡುವುದರ ಜೊತೆಗೆ, ಕೆಲವು ಉಗ್ರವಾದ ಶಾಸನಗಳನ್ನೂ ಕೂಡ ಮಾಡಿ ನಾವು ಇಂಥ ತಪ್ಪನ್ನು ಮಾಡಿದರೆ ನಮಗೆ ಇಂಥ ಒಂದು ಕ್ರೂರವಾದ ಶಿಕ್ಷೆ ಆಗುತ್ತದೆಂಬ ಒಂದು ಭಯ ಜನರಲ್ಲಿ ಉಂಟಾಗುವಂತೆ ಸರ್ಕಾರದವರು ಮಾಡಲೇ ಬೇಕು. ಈಗ ಕೆಲವು ಕಡೆ Mobile—ಸ್ಕ್ವಾಡ್‌ಗಳನ್ನು ಮಾಡಿದ್ದಾರೆ. ಅವು ಸಾಲವು. ಆಗಾಗ್ಗೆ ಕೆಲವು ಅಂಗಡಿಗಳನ್ನು ಅವರು ಸಡನ್ನಾಗಿ ಸರ್‌ಪ್ರೈಜಾಗಿ ಚೆಕ್ ಮಾಡಬೇಕು. ತಪ್ಪು ಸಿಕ್ಕಿದರೆ ಅವರ ಲೈಸನ್ಸ್ ಕ್ಯಾನಸಲ್ ಮಾಡಬೇಕು. ಇನ್ನು ಕೆಲವು ವೇಳೆ ಕೆಲವರ ಬಗ್ಗೆ ಕೇಸುಗಳನ್ನು ದಾಖಲ್ಮಾಡಿದಾಗ ಅವು ಅಲ್ಲೇ ಆಗಲೇ ಸ್ಥಳದಲ್ಲೇ ತೀರ್ಮಾನವಾಗಬೇಕು. ಆದರೆ ಕೆಲವರು ಪರ್ಷಾನುಗಟ್ಟಲೆ ಎಳೆದಾಡುತ್ತಿರುವ ಸಂದರ್ಭಗಳೂ ಇವೆ. ಹಾಗೆ ಮಾಡದಾರದೆಂದು ನನ್ನ ಸಲಹೆ. ಆಗಾಗ್ಗೆ ''At Random'' ಸರ್ಚ್ ಆಗಬೇಕು. ಯಾರಲ್ಲಿ ಎಷ್ಟು ಸ್ಟಾಕಿದೆ, ಅವರು ಬಿಲ್ಲುಗಳನ್ನು ಹಾಕಿ ಸಾಮಾನುಗಳನ್ನು ಮಾರಾಟ ಮಾಡುತ್ತಿದ್ದಾರೆಯೇ ಇಲ್ಲ ಎಂಬುದನ್ನ ಪರಿಶೀಲನೆ ಮಾಡುತ್ತಿರಬೇಕು. ಆಗ ವರ್ತಕರಿಗೆ ಸ್ವಲ್ಪ ಭಯವಿರುತ್ತದೆ.

ಇನ್ನು ನಾನಾಗಲೇ ಹೇಳಿದಂತೆ ಆ ಸೆರ್ಪ್ಸ್‌ನೇಸ್ಸಾಯಿರ್ಡ್ ಲೀಡರ್ಸ್ ಇದ್ದಾರಲ್ಲಾ ಅಂಥವರಿಗೆ ಕೊಟ್ಟಿರತಕ್ಕ, ಇಲ್ಲೀಗರ್ ಲೈಸೆನ್ಸ್‌ಗಳೂ, ಪರ್ಮಿಟ್ಟುಗಳೂ ಕೂಡಲೆ ರದ್ದಾಗಬೇಕು. ನಮ್ಮ ರಾಷ್ಟ್ರದಲ್ಲಿ ಆಹಾರದ ಪ್ರಶ್ನೆ ಎಂದರೆ ಬಹಳ ದೊಡ್ಡ ಪ್ರಶ್ನೆ. ಎಂದು ನಮ್ಮ ದೇಶದಲ್ಲಿ ಆ ಬಡ ಬೋರೇಗಳಿರುವ ನಗರಗಳಿಗೆ ಸಾಮಾನುಗಳನ್ನು ತಂದು ಮಾರಾಟ ಮಾಡುತ್ತಾನೋ ಅಂದೆ ಈ ಸಾಮಾನುಗಳ ಬೆಲೆ ಇಳಿಯುವುದು. ಹಾಗಿಲ್ಲದೆ ಎಲ್ಲಿಯತನಕ ಈ ಮಿಡರ್‌ಮ್ಯಾನ್ ಕೈಲಿ ಈ ವ್ಯಾಪಾರ ಇರುತ್ತದೆಯೋ ಅಲ್ಲಿಯವರೆಗೂ ಬೆಲೆಗಳು ಖಂಡಿತಾ ಇಳಿಯುವುದಿಲ್ಲ. ಅವು ದಿನ ದಿನಕ್ಕೂ ಏರುತ್ತಲೇ ಇರುತ್ತವೆ. ಇದರ ''ಅಧಿಕ ಲಾಭ'' ಬೆಳೆಯತಕ್ಕವನಿಗೂ ಇಲ್ಲ—ತಿನ್ನತಕ್ಕವನಿಗೂ ಇಲ್ಲ. ಮಧ್ಯವರ್ತಿ ಜನರ ಕೈ ಸೇರುತ್ತದೆ. ಆದುದರಿಂದ ಬೆಳೆಯತಕ್ಕವನಿಗೂ ಮತ್ತು ಬೆಳೆಸತಕ್ಕವನಿಗೂ ಈ ಇಬ್ಬರಿಗೂ ಒಂದು ನೇರ ಸಂಪರ್ಕ ಬೆಳೆಯಬೇಕಾಗಿದೆ. ಹಾಗೇನಾದರೂ ಬೆಲೆಗಳು ಒಂದು ರೀತಿಯಲ್ಲಿರುವುದಕ್ಕೆ ಸಾಧ್ಯವಾಗಬಹುದು ಎಂದು ಸಲಹೆ ಮಾಡುತ್ತೇನೆ. ನಾವು ಬೆಳೆಯತಕ್ಕವನಿಗೆ ಕೊಡುವುದು ಕಡಮೆಯಾದರೆ ಬೆಳೆಯುವುದು ಕೂಡ ಕಡಮೆ ಆಗುತ್ತದೆ. ಅದಕ್ಕಾಗಿ ನಾನು ಇದನ್ನು ''ಲೇಬರ್ ಮ್ಯಾನೇಜ್'' ಮೆಂಟಿನ ಕೈಲಿ ತರಬೇಕೆಂದು ಸಲಹೆ ಮಾಡುತ್ತೇನೆ. ಆ ಒಂದು ಸ್ಕೀಂ ಜಾರಿಗೆ ಬಂದರೆ ಆಗ ಇದು ತಾನೇ ತಾನಾಗಿ ಮಾಯವಾಗುತ್ತದೆ. ಇದಕ್ಕಾಗಿ ಸರ್ಕಾರದವರೊಂದು ಸ್ಕೀಮನ್ನು ಹಾಕಿಕೊಳ್ಳಬೇಕೆಂದು ಸಲಹೆ ಮಾಡುತ್ತಿದ್ದೇನೆ.

ಇನ್ನು ರೇಷನ್ ಕಾರ್ಡುಗಳ ವಿವರಕ್ಕೆ ಬಂದರೆ ನಮ್ಮಲ್ಲಿ ನ್ಯಾಯವಾಗಿ ಎಷ್ಟು ಜನಸಂಖ್ಯೆ ಇರಬೇಕೋ ಅಷ್ಟಿರದೆ ಅದು ಏಕಾಏಕಿ ಏರಿಹೋಗಿದೆ. ಕಾರಣ ಈ ರೇಷನ್ ಕಾರ್ಡುಗಳದು. ನಮ್ಮಲ್ಲಿ ರೇಷನ್ ಕಾರ್ಡುಗಳಲ್ಲಿ ಕಾಣತಕ್ಕಷ್ಟು ಜನಸಂಖ್ಯೆ ಇರುವುದಿಲ್ಲ. ನ್ಯಾಯವಾದ ಜನಸಂಖ್ಯೆ 3 ಕೋಟಿ ಇದ್ದರೆ ರೇಷನ್ ಕಾರ್ಡುಗಳ ಪ್ರಕಾರ ಅದು 4 ಕೋಟಿಗೇರಿರುತ್ತದೆ. ಸರ್ಕಾರದವರು ಇದನ್ನು ತಡೆಗಟ್ಟಬೇಕು. ಕೆಲವು ಸಂದರ್ಭಗಳಲ್ಲಿ ಕಮರ್ಷಿಯರ್ ಕ್ರಾಪ್ಸ್ ಬೆಳೆಯುವುದು ; ಹಜವಾಗಿದೆ. ಉತ್ಪತ್ತಿ ಮಾಡುವವರಿಗೆ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನವರು ಸರಿಯಾದ

ಬೆಲೆ ಕೊಡಬೇಕು. ಆಹಾರ ಪದಾರ್ಥಗಳು ಮುಖ್ಯವೇ ಹೊರತು "ಪ್ಲಾಸ್ಟಿಕ್" ಸಾಮಾನುಗಳು ತಯಾರಿಸುವುದು ಮುಖ್ಯವಲ್ಲ. ಮೊದಲು ಹೊಟ್ಟೆಗೆ ಬೇಕಾದ್ದಕ್ಕೆ ಪ್ರಾಮುಖ್ಯತೆ ಕೊಡಬೇಕು. ಬೆಲೆಗಳು ಬೃಹದಾಕಾರವಾಗಿ ಏರುತ್ತಿವೆ, ಅದನ್ನು ತಡೆಗಟ್ಟುವುದು ಬಹಳ ಮುಖ್ಯ. ಇದು ಒಂದು ಪಿಶಾಚಿಯು ಇದ್ದ ಹಾಗಾಗಿದೆ. ಎಲ್ಲರೂ ಇದಕ್ಕೆ ಸಂಪೂರ್ಣವಾಗಿ ಸಹಕರಿಸಬೇಕು. ಪ್ರತಿಯೊಬ್ಬರ ಹೃದಯವೂ ಪರಿವರ್ತನೆಯಾಗಬೇಕು. ಕಷ್ಟ ಅರ್ಥವಾದರೂ ಅನೇಕರು ಸಹಕರಿಸುತ್ತಿಲ್ಲ. ಕಾರಣ ದುರಾಸೆ, ದಿಢೀರ್ ಶ್ರೀಮಂತರಾಗಬೇಕು ಎಂಬ ದೊಡ್ಡ ಆಸೆ. ಇದನ್ನು ತಡೆಗಟ್ಟಬೇಕು. ಸಾಮಾನ್ಯ ಮನುಷ್ಯರಲ್ಲಿ ಹಣವಿಲ್ಲ. ಶೇಕಡ 80 ಮಂದಿ ಬಡವರೇ ಇದ್ದಾರೆ. ಅವರನ್ನು ಶೇಕಡ 20 ಮಂದಿ ಕಂಟ್ರೋಲ್ ಮಾಡುತ್ತಿದ್ದಾರೆ. ಹಾಗೆ ಮಾಡಿ ಅವರಿಗೆ ಹೊಟ್ಟೆಗೆ ಇಲ್ಲದಂತೆ ಮಾಡುತ್ತಿದ್ದಾರೆ. ಇದರಿಂದ ಬೆಲೆ ಏರಿದೆ. ಬೆಲೆ ಏರಲು ಸರಕಾರ ಕಾರಣವಲ್ಲ. ಸಾರ್ವಜನಿಕರೇ ಕಾರಣ. ಆದುದರಿಂದ ಸರಕಾರ ಸಾರ್ವಜನಿಕರ ಹಿತದೃಷ್ಟಿಯಿಂದ ಸಾಮಾನ್ಯ ಜನರ ಹಿತದೃಷ್ಟಿಯಿಂದ ತ್ವರಿತ ರೀತಿಯಲ್ಲಿ ಸೂಕ್ತ ಕ್ರಮ ಕೈಕೊಳ್ಳಬೇಕು. ಆಹಾರ ಇಲಾಖೆ ಹೊರಯರ ಕೇರಿಯಂತಾಗಿದೆ ಎಂದು ಅನೇಕ ಸಲ ಟೀಕೆ ಮಾಡಿದ್ದಾರೆ. ಸೀಮೆ ಎಣ್ಣೆ ಸಾಕಷ್ಟಿದ್ದರು ಬಚ್ಚಿಟ್ಟು ಬೆಲೆ ಏರಿಸಲು ಪ್ರಯತ್ನಪಡುತ್ತಿದ್ದಾರೆ. ಕೂಲಿಗಳು ಹೆಚ್ಚಾಗಿ ಕೊಳ್ಳಲು ಅವರಲ್ಲಿ ಹಣವಿರುವುದಿಲ್ಲ, ಮಧ್ಯಮ ವರ್ಗದವರು ನಾಚಕ ಆಡುತ್ತಿದ್ದಾರೆ. ಇದನ್ನೆಲ್ಲಾ ಗಮನಿಸಿ ಬೇಗ ಬೇಗ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು, ಇಷ್ಟು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಾಟಾಳ್ ನಾಗರಾಜ (ಚಾಮರಾಜಪೇಟೆ).—ನನ್ನಾನ ಅಧ್ಯಕ್ಷರೇ, ಬೆಲೆ ಏರಿಕೆ ವಿಚಾರದಲ್ಲಿ ನನ್ನಾನ್ಯ ಮಿತ್ರರು ಮಾತನಾಡಿದ್ದಾರೆ. ಕೆಲವರು ಇದು ಹಿಂದಿನ ಸರಕಾರದ ಪಾಪದ ಕೆಲಸ ಎಂದರು. ಪಾಪದ ಕೆಲಸ ಕಂಡುಹಿಡಿಯುವವರು ಯಾರು? ದೇವರೇ ಕಂಡು ಹಿಡಿಯಬೇಕು, ಅಧ್ಯಕ್ಷರು ಅದಕ್ಕೆ ಅರ್ಜಿ ಹಾಕಬೇಕು, ಯಮನಿಗೆ ಅರ್ಜಿ ಹಾಕಿ ತಿಳಿದುಕೊಳ್ಳಬೇಕು. ದೇಶದಲ್ಲಿ ಇಂದಿರಾ ಗಾಂಧಿಯವರು ಅಳ್ವಿಕೆ ಬಂದಮೇಲೆ ಬೆಲೆಗಳು ವಿಪರೀತವಾಗಿ ಏರಿವೆ ಎಂದು ಬಹಳ ವಿಷಾದದಿಂದ ಹೇಳುತ್ತೇನೆ. ಅವರು ಕೊಟ್ಟ ಕೊಡುಗೆಯನ್ನು ಗಮನಕ್ಕೆ ತರಬೇಕಾಗಿದೆ. ಬೆಲೆ ಹೇಗೆ ಏರಿದೆ ಎಂಬುದನ್ನು ಗಮನಕ್ಕೆ ತರುತ್ತೇನೆ. 1972ನೆಯ ಇಸವಿ ಮಾರ್ಚಿಯಲ್ಲಿ ಬೆಲೆ ಹೇಗಿತ್ತು, ಈಗ ಹೇಗಿದೆ ಎಂಬುದಕ್ಕೆ ಉದಾಹರಣೆ ಕೊಡುತ್ತೇನೆ.ಅಕ್ಕಿ ರೂ 1-80 ಇದ್ದುದು ಇಂದು ಕೆ.ಜಿಗೆ 2-50 ಆಗಿದೆ. ರೇಷನ್ ಗೋಧಿ ಕೆ.ಜಿ.ಗೆ 90 ಪೈಸೆ ಇದ್ದುದು 1-80 ಆಗಿದೆ; ನಮ್ಮ ಸರಕಾರ ಅಧಿಕಾರಕ್ಕೆ ಬಂದಮೇಲೆ ಆಗಿರುವುದನ್ನು ನಾವು ಸ್ವಾಗತಿಸಬೇಕಾಗಿದೆ. ಗರೀಬರನ್ನೆಲ್ಲಾ ಓಡಿಸಿಬಿಟ್ಟರೆ ಗರೀಬಿ ಹಠಾವ ಆಗುವುದು. ತೊಗರಿ ಬೆಳೆ ಈ ಸರಕಾರ ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ಕೆ.ಜಿಗೆ 1-60 ಇತ್ತು, ಇಂದು 2-75 ರೂ ಆಗಿದೆ, ರಾಗಿ ಕೆ.ಜಿಗೆ 98 ಪೈಸೆ ಇತ್ತು. ಇಂದು 1-25 ಆಗಿದೆ, ತೆಂಗಿನಕಾಯಿ 54 ಪೈಸೆಗೆ ದೊರೆಯುತ್ತಿದ್ದುದು ಇಂದು 90 ಪೈಸೆ ಕೊಡಬೇಕಾಗಿದೆ. ಕಡ್ಲೆಕಾಯಿ ಎಣ್ಣೆ 3-75 ರೂನಿಂದ 7-25ಕ್ಕೆ ಏರಿದೆ. ಇದನ್ನು ನ್ಯಾಯವಾಗಿ ಸ್ವಾಗತ ಮಾಡಬೇಕು. ಈ ಬೆಲೆ ಏರಿಕೆ ತಡೆಗಟ್ಟಲು ಎಷ್ಟುಮಟ್ಟಿಗೆ ಸರಕಾರ ಕ್ರಮ ತೆಗೆದುಕೊಳ್ಳುತ್ತಿದೆ ಎಂಬುದು ನಿತ್ಯವೂ ಗೊತ್ತಾಗುತ್ತಿದೆ. ಸರಿಯಾದ ಕಾರ್ಯಕ್ರಮ ಹಾಕಿಕೊಂಡು ಬಂಡವಾಳ ಗಾರರನ್ನು ಸದೆಬಡಿದಿದ್ದರೆ ಬಹುಶಃ ರಾಜ್ಯದಲ್ಲಿ ಇಂಥ ಪರಿಸ್ಥಿತಿ ಬರುತ್ತಿರಲಿಲ್ಲ ಎಂದು ನನಗನ್ನಿಸುವುದು. ಜನರ ಹೊಟ್ಟೆಬಟ್ಟೆಗೆ ಹೀಗೆಯೇ ಕಷ್ಟ ಮುಂದುವರೆದರೆ ಜನರು ಯಾರ ತಲೆ ತಗೆಯುವರೋ ತಿಳಿಯದು. ಇಂದು ಬೆಣ್ಣೆ, ಎಣ್ಣೆ, ಹಾಲು ಕಾಣದಿರುವ ಬಡವರು ಅನೇಕರಿದ್ದಾರೆ. ಬರೇ ರೊಟ್ಟಿ ತಿಂದು ಜೀವನ ಮಾಡುವವರು ಲಕ್ಷಾಂತರ ಜನರಿದ್ದಾರೆ, ಅದನ್ನು ಕಣ್ಣಾರೆ ಕಾಣದಿರುವವರೂ ಇದ್ದಾರೆ. ಹೀಗಿದ್ದರೂ ಸಹ ಇದರ ಬಗ್ಗೆ ಸೂಕ್ತ ಕಾರ್ಯಕ್ರಮ ಹಾಕಿ ಬೆಲೆ ಏರಿಕೆ ನಿಲ್ಲಿಸದಿದ್ದರೆ ಮುಂದೇನಾಗುವುದೋ ಹೇಳುವುದಕ್ಕಾಗುವುದಿಲ್ಲ. ಇತರರಮೇಲೆ ಅವರು ಮಾಡಿದ ಪಾಪದ ಕೆಲಸ ಎಂದು ತಪ್ಪು ಹೊರಿಸುತ್ತಿದ್ದಾರೆ. ಅದರೆ ಹಾಗೆ ತಪ್ಪು ಹೊರಿಸುವವರೇನು ಮಾಡುತ್ತಿದ್ದಾರೆಂಬುದನ್ನು ನೋಡಬೇಕು. ಒಂದು ಸರಿಯಾದ ಕಾರ್ಯಕ್ರಮ ಹಾಕಿಕೊಳ್ಳದಿದ್ದರೆ ಮುಂದೆ ಕಷ್ಟವಾಗುವುದು. ಇಂದು ಬೆಲೆ ಏರಿಕೆಗೆ ಕಾರಣ ದೊಡ್ಡ ದೊಡ್ಡ ವ್ಯಾಪಾರನ್ಯರು ಪದಾರ್ಥಗಳನ್ನು ಸಂಗ್ರಹಿಸಿ ಬಚ್ಚಿಟ್ಟಿದ್ದಾರೆ, ದೊಡ್ಡ ದೊಡ್ಡ ವ್ಯಾಪಾರನ್ಯರೇ ಇದಕ್ಕೆ ಕಾರಣ. ಬಹುಶಃ ಸರಕಾರವೇ ಇದಕ್ಕೆ ಹೊಣೆ. ಬರೇ ಘೋಷಣೆಯಿಂದ ಬೆಲೆಗಳು ಇಳಿಯುವುದಿಲ್ಲ. ಇದಕ್ಕೆ ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕು, ನಿನ್ನೆ ಮುಖ್ಯಮಂತ್ರಿಗಳು ಮಾತನಾಡುವಾಗ ಈ ರಾಜ್ಯದಲ್ಲಿ ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆ ಎಂದು ಕೈ ಬಾಯಿ ಅಡಿಸುತ್ತಾ ಏನೇನೋ ಹೇಳಿದರು.

(ಶ್ರೀ ವಾಟಾಳ್ ನಾಗರಾಜ್)

ಇವತ್ತು ಪತ್ರಿಕೆಗಳಲ್ಲಿಯೂ ಬಂದಿದೆ, ವಿರೋಧಪಕ್ಷವನ್ನು ಮಾನ್ಯ ಮುಖ್ಯ ಮಂತ್ರಿಗಳು ತರಾಟೆಗೆ ತೆಗೆದುಕೊಂಡರು ಎಂದು ಬರೆದಿದ್ದಾರೆ. ನಿಜ, ತರಾಟೆಗೆ ತೆಗೆದುಕೊಂಡಿದ್ದಾರೆ ಎಂದು ಆವ್ಯಾಯಮಾನವಾಗಿ ಒಳ್ಳೆಯ ಒಳ್ಳೆಯ ಪದಗಳನ್ನು ಸಾಹಿತ್ಯವನ್ನು ಜೋಡಿಸಿ ನೃಷ್ಟಿಸಿಕೊಂಡು ಬರೆದಿದ್ದಾರೆ. ನಾನು ಮುಖ್ಯಮಂತ್ರಿಗಳನ್ನು ಕೆಲವು ಪ್ರಶ್ನೆಗಳನ್ನು ಕೇಳಿದೆ, ಅದಕ್ಕೆ ಅವರು ಉತ್ತರ ಕೊಡುವುದಕ್ಕೆ ಆಗಲಿಲ್ಲ, ಉತ್ತರ ಕೊಡುವಂಥಾದ್ದು ಅಲ್ಲ ಎಂದು ತಳ್ಳಿ ಹಾಕಿದರು. ನಾವು ಜವಾಬ್ದಾರಿಯುತವಾದ ಕೆಲವು ಪ್ರಶ್ನೆಗಳನ್ನು ಎತ್ತಿದ್ದೇವೆ, ಸದಸ್ಯರ [ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕೆ ಆಗಲಿಲ್ಲ ಎಂದರೆ ಏನು ಹೇಳುವುದಕ್ಕಾಗುತ್ತದೆ ? ನಾವು ಸರಕಾರದ ಪರವಾಗಿ ಮಾತನಾಡಬೇಕೋ ? ಕೆಲವು ಒಳ್ಳೆಯ ಪ್ರಶ್ನೆಗಳನ್ನು ಎತ್ತಿದರೆ, ನಾಗರಾಜ್ ಕೇಳಿದ್ದು ಸರಿಯಲ್ಲ ಎಂದು ಸಿಟ್ಟು ಮಾಡಿಕೊಂಡು ಹೋದರು. ಅವರಿಂದ ನನ್ನ ಪ್ರಶ್ನೆಗೆ ಉತ್ತರ ತೆಗೆದುಕೊಳ್ಳುವವರೆಗೂ ಬಿಡುವುದಿಲ್ಲ. ಮಾನ್ಯ ಸಿದ್ದವೀರಪ್ಪ ಮತ್ತು ಚೆನ್ನಬಸಪ್ಪನವರು ಕೆ. ಕೆ. ಮೂರ್ತಿಯವರ ಬಗ್ಗೆ ಉತ್ತರ ಕೊಡುತ್ತಾರೆಯೇ ?

ಶ್ರೀ ಎಂ. ಎಂ. ಸಜ್ಜನ್.—ಅದು ಒಂದೆಯೇ ನಿಮಗೆ ರಾಷ್ಟ್ರೀಯ ಸಮಸ್ಯೆ ?

ಶ್ರೀ ವಾಟಾಳ್ ನಾಗರಾಜ್.—ನೀವು ನಮ್ಮನೆ ಅಂಕಿ ಸಂಖ್ಯೆಗಳನ್ನು ತೋರಿಸಿಬಿಟ್ಟು ಒಂದು ರೀತಿಯ ಮಾಯಮಂತ್ರ ಮಾಡಿದಿರಿ, ಅದನ್ನು ನೋಡಿ ನಿಮ್ಮ ಕಡೆಯವರು 12ಜನ ಚೇಬರ್ ಅನ್ನು ಕುಟ್ಟಿದ್ದೂ ಕುಟ್ಟಿದ್ದೆ, ಅದನ್ನು ನಾವು ನೋಡುತ್ತಿದ್ದೇವೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ,—ಅದು ಮಾಡಬಾರದೇ ?

ಶ್ರೀ ವಾಟಾಳ್ ನಾಗರಾಜ್.—ಅದನ್ನು ಮಾಡಬಾರದು ಎಂದಲ್ಲ, ನಿಮ್ಮ ಘೋಷಣೆ ಏನಾಯಿತು ? ನಿಮ್ಮಿಬ್ಬರ ಜಗಳದಲ್ಲಿ ಜನ ಯಾರ ಮಾತನ್ನು ನಂಬಬೇಕು. ನಿಮ್ಮ ಇಬ್ಬರ ರಾಜಕೀಯ ಜಂಜಾಟದ ಮೇಲೆ ಇರುವ ಪ್ರಶ್ನೆಯನ್ನು ನಾವು ನೋಡಬೇಕೇ ಅಥವಾ ಬೆರೆ ಏರಿಕೆಯ ಪ್ರಶ್ನೆ, ಬರ ಗಾಲದ ಪ್ರಶ್ನೆಯನ್ನು ನಿವಾರಿಸುವುದನ್ನು ನೋಡಬೇಕೆ ? ಮಾನ್ಯ ನಿಜಲಿಂಗಪ್ಪ ಮತ್ತು ವೀರೇಂದ್ರ ಪಾಟೀಲರು ಅವರನ್ನೆಲ್ಲಾ ನೀವು ಕಳುಹಿಸಿದಿರಿ.

ಶ್ರೀ ಎನ್. ಚಿಕ್ಕೇಗೌಡ.—ಅವರನ್ನು ಜನ ಕಳುಹಿಸಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಅದೇ ಜನ ನಿಮ್ಮನ್ನು ಇಪ್ಪತ್ತರಲ್ಲೇ ಕಳುಹಿಸುತ್ತಾರೆ. ಬೆಂಗಳೂರು ಕಾರ್ಪೊರೇಷನ್ ಚುನಾವಣೆ ಒಂದೆ ನಡೆಸಿ ನಾಕು.

ಶ್ರೀ ಎನ್. ಚಿಕ್ಕೇಗೌಡ.—ನಡೆಸಿದ್ದೇವೆ.

ಶ್ರೀ ವಾಟಾಳ್ ನಾಗರಾಜ್.—ನಾಲ್ಕು ತಿಂಗಳ ಹಿಂದೆ ಏನಾಯಿತು, ತಾಲ್ಲೂಕು ಬೋರ್ಡುಗಳ ಚುನಾವಣೆ ನಡೆಸಿ ! ಮಾನ್ಯ ಬನವಲಂಗಪ್ಪನವರ ಚುನಾವಣೆ ನೋಡಿದರೆ ನಿಮ್ಮ ಪರಿಸ್ಥಿತಿ ಏನು ಏಂದು ಗೊತ್ತಾಗುತ್ತದೆ. ಅವರು 80–90 ಮುನಿಸಿಪಾಲಿಟಿಗಳನ್ನು ಮುಚ್ಚಿದ್ದಾರೆ, ಸಂಪೂರ್ಣವಾಗಿ ಅವುಗಳ ಅಡಳಿತವನ್ನು ತಮ್ಮ ಕೈಯಲ್ಲಿ ತೆಗೆದುಕೊಂಡಿದ್ದಾರೆ ಜನತೆಯಿಂದ ಚುನಾವಣೆಯಲ್ಲಿ ಗೆದ್ದು ಬಂದಂಥ ಮಂತ್ರಿಗಳು ಇಂಥ ಪ್ರಜಾಪ್ರಭುತ್ವದ ಮನೆಗಳನ್ನು ರದ್ದು ಮಾಡಿ, ಒಮ್ಮೆಯೇ ನನ್ನ ಅಡಳಿತ ಇರಬೇಕು ಎಂದು ಮಾಡಿದ್ದಾರೆ. ಅದು ನಡೆಯಲಿಕ್ಕೆ ಅದರ ದರ್ಪ. ಮಾನ್ಯ ಚೆನ್ನಬಸಪ್ಪನವರು ಮತ್ತು ಸಿದ್ದವೀರಪ್ಪನವರು ಅಡಳಿತದಲ್ಲಿ ಅವರವರ ದರ್ಪಕ್ಕೆ ಹೆಸರು ಪಡೆದಿದ್ದಾರೆ. ಮಾನ್ಯ ಬನವಲಂಗಪ್ಪನವರು ಈ ರೀತಿಯಲ್ಲಿ ಹೆಸರು ಪಡೆದಿದ್ದಾರೆ. ದರ್ಪದಿಂದ ಆಡಳಿತ ನಡೆಸುವ ಮಂತ್ರಿಗಳು ಮಂತ್ರಿ ಮುಂಡಲವನ್ನು ಬಿಟ್ಟು ಹೋಗಬೇಕು ಎನ್ನುವ ವದಂತಿ ಎದ್ದಿದೆ. ನಿಮ್ಮನ್ನು ಉಳಿಸಬೇಕು ಎಂದು ಸಹಿ ಸಂಗ್ರಹಣೆ ಮಾಡಿದ್ದಾರೆಂದು ತಿಳಿಯಿತು. ನನಗೆ ಅನ್ನಿಸಿತು ಮಾನ್ಯ ಚೆನ್ನಬಸಪ್ಪನವರಿಗೆ 30ಜನ ಸದಸ್ಯರು ಎಂದು. ಮತ್ತು ಸಂತೋಷ ಪಟ್ಟೆ. ಯಾರು ಯಾರು ಸದಸ್ಯರು ಇಲ್ಲದೆ ಇದ್ದಾಗಲೂ ಮಂತ್ರಿಯಾಗುತ್ತಾನೆ ಎನ್ನುವ ಶಕ್ತಿ ಇವೆಯೆಂದು ಕೆಲವು ಮಂತ್ರಿಗಳು ಹೇಳುತ್ತಾರೆ. 26 ಜನ ಮಾನ್ಯ ಚೆನ್ನಬಸಪ್ಪನವರು ಉಳಿಯಲೇಬೇಕು ಇಂಥ ದಕ್ಷರ ಮೇಲೆ, ವಿರೋಧ ಮಾಡಿದವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತಾರೆ. ಇವರು ಹಾಗೆ ಹೋಗುವ ಹಾಗೆ ಕಾಣುವುದಿಲ್ಲ. ಚೆನ್ನಬಸಪ್ಪನವರು ಬಡಹೆಟ್ಟಿಗೆ ಹೋಗುತ್ತಾರೆಯೇ ?

ಶ್ರೀ ಹೆಚ್. ಸಿದ್ದವೀರಪ್ಪ.—ಇದು ಬೆಲೆ ಏರಿಕೆಯೇ ?

ಶ್ರೀ ವಾಟಾಳ್ ನಾಗರಾಜ್.—ಚೆನ್ನಬಸಪ್ಪನವರ ಬೆಲೆಯೂ ಏರಿದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಎಲ್ಲಾ ಬೆಲೆ ಏರಿರುವಾಗ, ನನ್ನ ಬೆಲೆ ಏರಬಾರದೆ!

ಶ್ರೀ ವಾಟಾಳ್ ನಾಗರಾಜ್.—ಅವಕ್ಕೆ ಸಂತೋಷ ಪಡಬೇಕಾಗಿದೆ. ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದು ಇಷ್ಟೆ, ನಿಮ್ಮ ಪೋಷಣೆಗಳನ್ನು ಮಾಡಿ, ಜನ ನಿಮ್ಮ ಕಾರ್ಯಾಲಯಕ್ಕೆ ನುಗ್ಗುತಕ್ಕ ಕಾರ್ಯ ಮಾಡಬೇಡಿ. ಈ ಸಭೆಯಲ್ಲಿ ನೀವು ಇಬ್ಬರೂ ಈ ಕಡೆ ಕೂತುಕೊಂಡು ಮಾತನಾಡಿರುವುದನ್ನು ಎಲ್ಲಾ ಮಂತ್ರಿಗಳು ಬಿಟ್ಟು ಹಾಗೆ ಕಾಣುತ್ತದೆ. ಮಾನ್ಯ ಚೆನ್ನಬಸಪ್ಪನವರೇ ಮತ್ತು ಸಿದ್ದವೀರಪ್ಪನವರು ಈಗ ಸುಮ್ಮನಾಗಿದ್ದಾರೆ., ಬಹಳ ಗಂಭೀರವಾಗಿ ಕೂತಿದ್ದಾರೆ. ದಯವಾಡಿ ಹಿರಿಯ ಸದಸ್ಯರಾದ ತಾವು ಮಂತ್ರಿಮಂಡಲಕ್ಕೆ ಮಾರ್ಗದರ್ಶನ ನೀಡಿ ತಪ್ಪುದಾರಿಗೆ ಹೋಗಬೇಡಿ ಎಂದು ಹೇಳಿ. ಅವರಿಗೆ ಬೆಲೆ ಏರಿಕೆಯನ್ನು ತಡೆಗಟ್ಟುವುದಕ್ಕೆ ಇಂಥ ಮಾರ್ಗವನ್ನು ಅನುಸರಿಸಬೇಕು ಎಂದು ಹೇಳಿ. ನೀವು ಹೇಳುವುದನ್ನೆಲ್ಲಾ ಹೇಳಿ ನಾವು ಮಾಡುವುದನ್ನು ಮಾಡಿಯೇ ಮಾಡತ್ತೇವೆ ಎಂದರೆ ಮಾನ್ಯ ಶಾಮಣ್ಣನವರು ಏನು ಒಂದು ಮಾತನ್ನು ಹೇಳಿದ್ದಾರೋ ಅದನ್ನು ನಾನು ಹೇಳಬೇಕಾಗುತ್ತದೆ. ಇಡೀ ಜನತೆಯ ಪರವಾಗಿ ಬೆಂಗಳೂರು ಶಾಸಕರು ಸೇರಿ ಇಷ್ಟರಲ್ಲೇ ಉಗ್ರವಾದ 'ವಿಧಾನ ಸೌಧ' ಚಳುವಳಿ ನಡೆಸಬೇಕಾಗುತ್ತದೆ. ಬೆಂಗಳೂರಿನಲ್ಲಿ ಮಾತ್ರವಲ್ಲ ಇಡೀ ರಾಜ್ಯದಲ್ಲಿ ಬೆಲೆಗಳ ಏರಿಕೆಯನ್ನು ಮಾಡಿರತಕ್ಕ ಸರ್ಕಾರದ ನೀತಿಯನ್ನ ವಿರೋಧಿಸಿ, ಬೆಲೆಗಳ ಏರಿಕೆಯನ್ನು ಇಳಿಸಬೇಕು ಎಂದು ಸಾವಿರಾರು ಜನ ವಿಧಾನಸೌಧ ಚಲೋ ಎನ್ನುವ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ. ಈ ಕಾರ್ಯಕ್ರಮವನ್ನು ನಾವು ಕೈಗೆಳ್ಳದ ರೀತಿ ಮಾಡಬೇಕು ಎಂದರೆ, ಬೆಲೆಗಳ ಏರಿಕೆಯನ್ನು ಇಳಿಸುವುದು ಒಂದೇ ಮಾರ್ಗ. ಏನೇ ಮಾಡಿ, ನಾವು, ಇದೇ ಮಾರ್ಗವನು ಅನುಸರಿಸುತ್ತೇವೆ ಎನ್ನುವುದಾದರೆ ಈ ಸಭೆಯಲ್ಲಿ ನೀವು ಈ ಕಡೆ ಕೂತುಕೊಂಡು ಮಾತನಾಡಿದ್ದು ಗಾಳಿಗೆ ತೂರಿ ಹೋಯಿತು ಎಂದು ನಾನು ತಿಳಿದುಕೊಳ್ಳಬೇಕಾಗುತ್ತದೆ. ಜನ ನಿಮ್ಮನ್ನು ಶಪಿಸುತ್ತಾರೆ. ದಯವಾಡಿ ಆ ಕಾರ್ಯಕ್ಕೆ ಕೈಹಾಕದೆ, ಬೆಲೆ ಇಳಿಸುವುದರಲ್ಲಿ ಸಮರ್ಥ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಜುನಾವಣೆಯಲ್ಲಿ ನೀವು ಜನತೆಗೆ ಕೊಟ್ಟ ಆಶ್ವಾಸನೆಯನ್ನು ಈಡೇರಿಸಬೇಕಾದರೆ ಗರೀಬಿ ಹಠಾವ್ ಸ್ಲೋಗಾನ್ ಕಾರ್ಯಚರಣೆಯಲ್ಲಿ ಬರಬೇಕಾದರೆ ನೀವು ಬೆಲೆಗಳ ಏರಿಕೆಯನ್ನು ಇಳಿಸಬೇಕು. ಜುನಾವಣೆ ಅವತಕ್ಷಣ ಸುಭಾಷ್‌ನಗರದ ಕೆರೆಯ ಏರಿಯ ಮೇರೆ ಕಡಿಮೆ ಬೆಲೆಯಲ್ಲಿ ಇಂದಿರಾ ಸೀರೆ ಮಾರುತ್ತಿದ್ದಾರೆ ಜನ ನುಗ್ಗುತ್ತಿದ್ದಾರೆ. ಚೀಪರ್ ರೇಟು ಎಂದು ಹೇಳಿ ಸೀರೆಗಳನ್ನು ಮಾರಿದರು. ಕಡಿಮೆ ರೇಟು ಎಂದರೆ ಇಂದಿರಾ ರೇಟು ಎಂದು ತಿಳಿದುಕೊಳ್ಳಬೇಕಾಗಿದೆ. ದಯವಿಟ್ಟು ಕ್ಷಮಿಸಿದು ನಿಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ, ಇದರ ಬಡವರ ಪ್ರಶ್ನೆ, ಹೊಟ್ಟೆಯ ಪ್ರಶ್ನೆ, ಈ ಪ್ರಶ್ನೆಯನ್ನು ಬಿಡಿಸುವುದರಲ್ಲಿ ತಾವು ಪೋಷಣೆ ಮಾಡಿದ ರೀತಿಯಲ್ಲಿ ಕಾರ್ಯಕ್ರಮ ಕೈಗೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎನ್. ಚಿಕ್ಕೇಗೌಡ (ಪಶುಸಂಗೋಪನ ಶಾಖೆಯ ರಾಜ್ಯಮಂತ್ರಿಗಳು).—ಮಾನ್ಯ ಸಭಾಧ್ಯಕ್ಷರೇ, ಇವತ್ತಿನ ದಿವಸ ಸುಮಾರು 8 ಜನ ಸದಸ್ಯರು ಬೆಲೆಗಳ ಏರಿಕೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ, ಮಾನ್ಯ ಶ್ರೀರಾಮುಲು ಅವರು ಕರೆಬರೆಕ್ಕೆ ಯಾಗಿರತಕ್ಕ ಪದಾರ್ಥಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇನ್ನೂ ಅನೇಕ ಸದಸ್ಯರು ಬೆಲೆಗಳ ಏರಿಕೆಯ ಬಗ್ಗೆ ಮಾತನಾಡುವ ಕಾಲದಲ್ಲಿ ಇಮ ಒಂದು ರಾಜ್ಯದ ಪರಿಸ್ಥಿತಿಯೇ, ಅಥವಾ ಇಡೀ ರಾಷ್ಟ್ರದ ಅಥವಾ ಅಂತರ ರಾಷ್ಟ್ರೀಯ ಪರಿಸ್ಥಿತಿಯೇ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಏನು ಏರುಹೇರುಗಳ ಆಗಿವೆ ಎಂದು ಹೇಳಿದ್ದರೆ ಚೆನ್ನಾಗಿತ್ತು ಎಂದು ನಾನು ತಿಳಿದುಕೊಂಡಿದ್ದೇನೆ. ಇವತ್ತು ಬೆಲೆಗಳ ಏರಿಕೆಗೆ ಈಗಿನ ಸರ್ಕಾರ ಕಾರಣ. ಅದರಲ್ಲೂ ಇಂದಿರಾಗಾಂಧಿಯವರ ಬಗ್ಗೆ, ಗರೀಬಿ ಹಠಾವ್ ಬಗ್ಗೆ ಕೇಳಿದಂಥ ಮಾತುಗಳನ್ನೂ ಸಹ ನಾನೂ ಕೇಳಿದ್ದೇನೆ. ಇದಕ್ಕೆ ಮುಖ್ಯವಾದ ಕಾರಣ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಉತ್ಪನ್ನ ಕಡಿಮೆಯಾಗಿರತಕ್ಕದ್ದು. ಮತ್ತು ಉತ್ಪನ್ನ ಮಾಡಲಿಕ್ಕೆ ಬೇಕಾದಂಥ ಇನ್‌ಪುಟ್ಸ್ ಎಂದು ಏನು ಹೇಳುತ್ತೇವೆಯೋ ಅದರ ಬಗ್ಗೆ.....

ಶ್ರೀ ಕೋಣಂದೂರು ಲಿಂಗಪ್ಪ.— ಖಗೋಳದ ಬಗ್ಗೆಯೂ ಹೇಳಿ.

ಶ್ರೀ ಎನ್. ಚಿಕ್ಕೇಗೌಡ.—ಅಲ್ಲಿ ಬೆಳೆಯುವ ಕಾಲ ಬಂದರೆ ಅದನ್ನೂ ಹೇಳುತ್ತೇವೆ. ರಾಷ್ಟ್ರದ ವಿಚಾರ ಮತ್ತು ಅಂತರ ರಾಷ್ಟ್ರದ ವಿಚಾರ ಹೇಳಿದ್ದೇನೆ, It also depends upon International proplem.

ಅಧ್ಯಕ್ಷರು.—ಮಾನ್ಯ ಮಂತ್ರಿಗಳಿಗೆ ಇನ್ನು ಎಷ್ಟು ಸಮಯ ಬೇಕು? ಇನ್ನು ಇಬ್ಬರು ರಿಪ್ಲೈ ಮಾಡಬೇಕು, ಎರಡುರೆಸಲ್ಯೂಷನ್ಸ್ ಇವೆ. ಈಗ ಒಂದು ಗಂಟೆಯಾಗಿದೆ.

Sri H. M. CHANNABASAPPA.—I suggest, it may be continued on the next convenient day.

MADAM SPEAKER.—The House will now stand adjourned to meet at 1 P. M on Monday the 26th February 1973.

The House adjourned at One of the Clock to meet again at One of the Clock on Monday, the 26th February, 1973.

Karnataka State Archives
(Department of Archives)

KSA LIBRARY, B'lore
B004895
328.32402 548 LAD,1973
JJ39

WD 19685—GPB—550—1-6-1974